# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 29 ಬುಧವಾರ 2022

ಸಂಪುಟ: 43 | ಸಂಚಿಕೆ: 74 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





# ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿದ ಕೂಗು

● ಶಾಸಕ ಜಿಟಿಡಿ ಪ್ರಸ್ತಾವಕ್ಕೆ ಧ್ವನಿಗೂಡಿಸಿದ ಸಂಸದ ಪ್ರತಾಪ್ ಸಿಂಹ, ಮೇಯರ್ ಸುನಂದಾ ಪಾಲನೇತ್ರ, ಇನ್ನಿತರ ಸ್ಥಳೀಯ ಜನಪ್ರತಿನಿಧಿಗಳು ● ಶಾಶ್ವತ ದಸರಾ ಪ್ರಾಧಿಕಾರ ರಚನೆಗೂ ಹಲವರ ಒತ್ತಾಯ

ಮೈಸೂರು, ಜೂ.28(ಆರ್‌ಕೆ)– ಮಲೈ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಮಾದರಿಯಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದ ಸಂರಕ್ಷಣೆಗಾಗಿ ಪ್ರತ್ಯೇಕ ಅಭಿವೃದ್ಧಿ ಪ್ರಾಧಿಕಾರ ರಚಿಸಬೇಕೆಂಬ ಕೂಗು ಹೆಚ್ಚುತ್ತಿದೆ.

ಕಾಂಕ್ರೀಟ್ ಕಾಡಿನ ಹೊರತಾಗಿ ನೈಸರ್ಗಿಕ ವಾಗಿಯೇ ಚಾಮುಂಡಿಬೆಟ್ಟ ಉಳಿಸಿಕೊಳ್ಳುವ ಜೊತೆಗೆ ಅಧಿದೇವತೆ ಚಾಮುಂಡೇಶ್ವರಿ ದೇವಸ್ಥಾನವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಪ್ರತ್ಯೇಕ ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗ ಬೇಕೆಂದು ಸೋಮವಾರ ಸಂಜೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಆಷಾಢ ಶುಕ್ರವಾರ ಸಂಬಂಧ ಚಾಮುಂಡಿಬೆಟ್ಟದಲ್ಲಿ ನಡೆಯುವ ವಿಶೇಷ ಪೂಜಾ ಕಾರ್ಯಕ್ರಮ ಪೂರ್ವಸಿದ್ಧತಾ ಸಭೆಯಲ್ಲಿ ಉಪಸ್ಥಿತ ರಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅವರು ವಿಷಯ ಪ್ರಸ್ತಾಪಿಸಿದ್ದಾರೆ.

ಅದೇ ಸಂದರ್ಭ ದಸರಾ ಆಚರಣೆಗೂ ಪ್ರತ್ಯೇಕ ಪ್ರಾಧಿಕಾರ ರಚಿಸಬೇಕೆಂಬ ಬೇಡಿಕೆ ಹಲವು ವರ್ಷ ಗಳಿಂದ ಇದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ನಿರ್ಧಾರ ಕೈಗೊಳ್ಳಬೇಕೆಂದು ಜಿ.ಟಿ.ದೇವೇ ಗೌಡರು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರನ್ನು ಒತ್ತಾಯಿಸಿದರು.

ಅವರ ಅಭಿಪ್ರಾಯವನ್ನು ಆಲಿಸಿದ ಸಚಿವರು ಎರಡೂ ಪ್ರಾಧಿಕಾರ ರಚನೆ ಕುರಿತು ಮುಖ್ಯಮಂತ್ರಿ ಗಳೊಂದಿಗೆ ಮಾತನಾಡಿ ಮುಂದಿನ ತಿಂಗಳು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸ ಲಾಗುವುದು ಎಂದು ಭರವಸೆ ನೀಡಿದರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿ ಸಿದ ಜಿ.ಟಿ.ದೇವೇಗೌಡರು, ಚಾಮುಂಡಿಬೆಟ್ಟವನ್ನು ನೈಸರ್ಗಿಕ ತಾಣವಾಗಿಯೇ ಉಳಿಸಬೇಕು. ಅರಣ್ಯ ನಿಯಮ ಉಲ್ಲಂಘಿಸಿ ಎಲ್ಲೆಂದರಲ್ಲಿ ▶ 8ನೇ ಪುಟಕ್ಕೆ

▶ ಪ್ರಾಧಿಕಾರದಲ್ಲಿ ಲೋಕೋಪಯೋಗಿ, ಅರಣ್ಯ ಇಲಾಖೆ, ಮುಜರಾಯಿ, ಪರಿಸರ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ, ಚೆಸ್ಕಾಂ, ಚಾಮುಂಡಿ ಬೆಟ್ಟ ಗ್ರಾಮ ಪಂಚಾಯಿತಿ ಸೇರಿ ದಂತೆ ಹಲವು ಇಲಾಖೆ ಅಧಿಕಾರಿ ಗಳು, ಜನಪ್ರತಿನಿಧಿಗಳು ಇರುವುದ ರಿಂದ ಬೆಟ್ಟದ ರಕ್ಷಣೆ ಹಾಗೂ ಚಾಮುಂಡೇಶ್ವರಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗಲಿದೆ.



–ಜಿ.ಟಿ.ದೇವೇಗೌಡ, ಶಾಸಕರು.

## ನಾಯಕತ್ವಕ್ಕಾಗಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್

# ಶಕ್ತಿ ಪ್ರದರ್ಶನ

● ದಾವಣಗೆರೆಯಲ್ಲಿ ಕುರುಬರ ಸಮಾವೇಶದ ಮೂಲಕ ಸಿದ್ದರಾಮಯ್ಯ ಬೆಂಬಲಿಗರ ಲಾಬಿ
● ಬೆಂಗಳೂರಿನಲ್ಲಿ ಒಕ್ಕಲಿಗರ ಸಮಾವೇಶದ ಮೂಲಕ ಡಿಕೆಶಿ ಬೆಂಬಲಿಗರ ಬಲ ಪ್ರದರ್ಶನ

**ಬೆಂಗಳೂರು,ಜೂ.28(ಕೆಎಂಶಿ)–ನಾಯಕತ್ವದ ಪೈಪೋಟಿಗೆ ಇಳಿದಿರುವ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದ ರಾಮಯ್ಯ ಅವರು ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.**

ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗ ಸಮುದಾಯದ ಮುಖಂಡನಾಗಿ ಪಕ್ಷದಲ್ಲಿ ನಾಯಕತ್ವ ಗಿಟ್ಟಿಸಿಕೊಳ್ಳಲು ಶಿವಕುಮಾರ್ ತಮ್ಮ ಸಮಾಜದ ಬೃಹತ್ ಸಮಾವೇಶ ವನ್ನು ನಗರದ ಅರಮನೆ ಆವರಣದಲ್ಲಿ ನಡೆಸಲು ಮುಂದಾಗಿದ್ದಾರೆ. ಸಿದ್ದರಾಮಯ್ಯ ಅವರಿಗೆ 75 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ, ಅವರ ಸ್ವಜಾತಿ ಕುರುಬ ಸಮಾಜ ದಾವಣಗೆರೆಯಲ್ಲಿ ಆಗಸ್ಟ್ ಮೊದಲ ವಾರ ತಮ್ಮ ಜನಾಂಗದ ಸಮಾವೇಶ ನಡೆಸುತ್ತಿದ್ದಾರೆ.

ಸಿದ್ದರಾಮಯ್ಯ ಬೆಂಬಲಿಗರು ಅಂದು ಐದು ಲಕ್ಷ ತಮ್ಮ ಸಮಾಜದ ಜನರನ್ನು ಸೇರಿಸಿ ಸಮಾವೇಶ ಮಾಡುತ್ತಿ ದ್ದರೆ, ಇದರ ಸುಳಿವರಿತ ಶಿವಕುಮಾರ್ ಬೆಂಬಲಿಗರು, ಅರಮನೆಯ ಆವರಣದಲ್ಲಿ ಹತ್ತು ಲಕ್ಷ ಜನರನ್ನು ಸೇರಿಸಿ ಬೃಹತ್ ಒಕ್ಕಲಿಗರ ಸಮಾವೇಶ ಮಾಡುತ್ತಿದ್ದಾರೆ. ಇತ್ತೀಚೆಗೆ ನಗರದ ಹೊರವಲಯದಲ್ಲಿ ನಡೆದ ಕಾಂಗ್ರೆಸ್ ಮುಖಂ ಡರ ಸಭೆಯಲ್ಲಿ ಕವಲು ದಾರಿ ಹಿಡಿದಿದ್ದ ಉಭಯ ನಾಯಕರನ್ನು ಒಂದು ಮಾಡಲಾಗಿದೆ ಎಂದು ಹೇಳಲಾಗಿತ್ತು.

ಮುಖ್ಯಮಂತ್ರಿ ಗಾದಿಗೆ ಪೈಪೋಟಿ ನಡೆಸಿರುವ ಶಿವ ಕುಮಾರ್ ಮತ್ತು ಸಿದ್ದರಾಮಯ್ಯ, ನಾಯಕತ್ವದ ತಮ್ಮ ಪಟ್ಟು ಬಿಡದೆ ಪ್ರತ್ಯೇಕ ಸಮಾವೇಶ ನಡೆಸಿ ತಮ್ಮ ತಮ್ಮ ಬಲ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಭವಿಷ್ಯದ ನಾಯಕತ್ವ ವನ್ನು ಕೈ ಬಿಡಲು ಸಿದ್ದರಾಮಯ್ಯ ಅವರೂ ತಯಾರಿಲ್ಲ, ಹಾಗೆಯೇ ಪಕ್ಷ ಸಂಘಟಿಸುವ ಜವಾಬ್ದಾರಿ ಹೊತ್ತ ತಾವು ನಾಯಕತ್ವದ ಸ್ಪರ್ಧೆಯಿಂದ ಹಿಂದೆ ಸರಿಯುವುದು ಸರಿಯಲ್ಲ ಎಂದು ಡಿ.ಕೆ.ಶಿವಕುಮಾರ್ ತೀರ್ಮಾನಿಸಿದ್ದಾರೆ.

ಇದರ ಭಾಗವಾಗಿಯೇ ಉಭಯ ನಾಯಕರು ಇದೀಗ ಭಾರೀ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಿದ್ದು ಈ ಬೆಳವಣಿಗೆ ರಾಜ್ಯ ರಾಜಕೀಯದಲ್ಲಿ ತೀವ್ರ ಕುತೂಹಲ ಕೆರಳಿಸಿದೆ. ಅಂದ ಹಾಗೆ ಮುಂಬರುವ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ತಾವೇ ಮುಖ್ಯಮಂತ್ರಿ ಆಗಬೇಕು, ಇದಕ್ಕಾಗಿ ತಮ್ಮ ಬೆಂಬಲಿಗರಿಗೇ ಹೆಚ್ಚಿನ ಸಂಖ್ಯೆಯಲ್ಲಿ ಸೀಟು ಸಿಗುವಂತಾಗ ಬೇಕು ಎಂದು ಶಿವಕುಮಾರ ಮತ್ತು ಸಿದ್ದರಾಮಯ್ಯ ಕಸರತ್ತು ಆರಂಭಿಸಿರುವುದು ರಹಸ್ಯವೇನಲ್ಲ.

ಇದರ ಪರಿಣಾಮವಾಗಿಯೇ ಮೈಸೂರು, ಮಂಡ್ಯ, ಚಾಮರಾಜನಗರ ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆ ಗಳಲ್ಲಿ ಉಭಯ ನಾಯಕರ ಬೆಂಬಲಿಗರು ಟಿಕೆಟ್‌ಗಾಗಿ ಪೈಪೋಟಿ ಆರಂಭಿಸಿದ್ದು, ಬಹುತೇಕ ಕ್ಷೇತ್ರಗಳಲ್ಲಿ ಸಿದ್ದ ರಾಮಯ್ಯ ಮತ್ತು ಶಿವಕುಮಾರ್ ಬೆಂಬಲಿಗರು ಕಚ್ಚಾಟ ನಡೆಸುತ್ತಿದ್ದಾರೆ. ಕ್ಷೇತ್ರದಿಂದ ನೀವೇ ಅಭ್ಯರ್ಥಿಯಾಗು ತ್ತೀರಿ. ಈಗಿನಿಂದಲೇ ತಯಾರಿ ಮಾಡಿಕೊಳ್ಳಿ ಎಂದು ಸಿದ್ದರಾಮಯ್ಯ ತಮ್ಮ ಬೆಂಬಲಿಗರಿಗೆ ಸೂಚನೆ ನೀಡಿದ್ದರೆ, ಡಿಕೆಶಿ ಕೂಡಾ ತಮ್ಮ ಬೆಂಬಲಿಗರಿಗೆ ಇಂತಹುದೇ ಸೂಚನೆ ನೀಡಿ ಹೋರಾಡಲು ಅಣಿಗೊಳಿಸಿದ್ದಾರೆ.

ಈ ಇಬ್ಬರು ನಾಯಕರ ಸದರಿ ಕಸರತ್ತಿನಿಂದ ಬಹು ತೇಕ ಎಲ್ಲ ವಿಧಾನಸಭಾ ಕ್ಷೇತ್ರಗಳ ಮಟ್ಟದಲ್ಲಿ ಬಣ ರಾಜ ಕೀಯ ಆರಂಭವಾಗಿದ್ದು, ಈ ಹಿಂದೆ ಸೋತ ವಿಧಾನಸಭಾ ಕ್ಷೇತ್ರಗಳಲ್ಲದೆ, ಹಲವು ಹಾಲಿ ಶಾಸಕರ ಕ್ಷೇತ್ರಗಳಲ್ಲೂ ಇಂತಹ ಪೈಪೋಟಿ ಶುರುವಾಗಿದೆ. ಅದೇ ರೀತಿ, ತಾವು ಹೇಳಿದಂತೆ ನಡೆದುಕೊಂಡರೆ ನಿಮಗೆ ಟಿಕೆಟ್ ಎಂದು ಉಭಯ ನಾಯಕರು ಹೇಳುತ್ತಿದ್ದು, ▶ 8ನೇ ಪುಟಕ್ಕೆ



ಮುಂಬರುವ ಕರ್ನಾಟಕ ವಿಧಾನಸಭೆ ಚುನಾವಣೆ ಸಿದ್ಧತೆ, ತಂತ್ರಗಾರಿಕೆ ಮತ್ತು ಪ್ರಚಾರ ಕುರಿತು ದೆಹಲಿಯಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಜೊತೆ ಚರ್ಚಿಸಲಾಯಿತು. ಕೆ.ಸಿ.ವೇಣು ಗೋಪಾಲ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸುರ್ಜೇವಾಲ ಉಪಸ್ಥಿತರಿದ್ದರು.

## ನೂಪುರ್ ಶರ್ಮಾ ಬೆಂಬಲಿಸಿದ ವ್ಯಕ್ತಿಯ ಶಿರಚ್ಛೇದಿಸಿ, ಪ್ರಧಾನಿ ಮೋದಿಗೂ ಬೆದರಿಕೆ: ದುಷ್ಕರ್ಮಿಗಳ ಬಂಧನ



**ಉದಯಪುರ:** ಇಡೀ ದೇಶವನ್ನೇ ಬೆಚ್ಚಿ ಬೀಳಿಸಿರುವ ರಾಜಸ್ಥಾನದ ಉದಯಪುರದ ಟೈಲರ್ ಹತ್ಯೆಯ ಹಂತಕರನ್ನು ಪೊಲೀಸರು ಬಂಧಿಸಿ ದ್ದಾರೆ. ಮಾಲ್ದಾಸ್ ಸ್ಟ್ರೀಟ್ ಪ್ರದೇಶ ದಲ್ಲಿ ಟೈಲರ್ ಶಿರಚ್ಛೇದ ಮಾಡಿ, ಬಳಿಕ ವಿಡಿಯೋವೊಂದನ್ನು ಸಾಮಾ ಜಿಕ ಮಾಧ್ಯಮಗಳಲ್ಲಿ ಹಂಚಿಕೊಂ ಡಿದ್ದ ಆರೋಪಿಗಳು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಹತ್ಯೆ ಮಾಡುವ ಬೆದರಿಕೆ ಹಾಕಿದ್ದರು. ಈ ಇಬ್ಬರೂ ದುಷ್ಕರ್ಮಿಗಳನ್ನು ರಾಜ ಸಮಂದ್‌ನಲ್ಲಿ ಬಂಧಿಸಲಾಗಿದೆ.

ಈ ಪ್ರಕರಣದ ತನಿಖೆಯನ್ನು ತ್ವರಿ ತಗತಿಯಲ್ಲಿ ಕೈಗೊಳ್ಳುವ ಮೂಲಕ ಅಪರಾಧಿಗಳಿಗೆ ನ್ಯಾಯಾಲಯದಲ್ಲಿ ಕಠಿಣ ಶಿಕ್ಷೆ ವಿಧಿಸಲಾಗುವುದು ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಹೇಳಿದ್ದಾರೆ.

ಸೋಮವಾರ ಉದಯ್‌ಪುರ ದಲ್ಲಿ ಇಬ್ಬರು ವ್ಯಕ್ತಿಗಳು ಟೈಲರ್‌ನ ಕತ್ತು ಸೀಳಿ ಹತ್ಯೆ ಮಾಡಿದ್ದರು. ಬಳಿಕ ವಿಡಿಯೋವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದ ಆರೋಪಿಗಳು ▶ 8ನೇ ಪುಟಕ್ಕೆ

## ನಾಳೆ ಬಹುಮತ ಸಾಬೀತಿಗೆ ಉದ್ಧವ್‌ಗೆ ರಾಜ್ಯಪಾಲರ ಸೂಚನೆ

ಮುಂಬೈ,ಜೂ.28–ಮಹಾರಾಷ್ಟ್ರ ರಾಜ್ಯ ರಾಜಕೀಯ ಬಿಕ್ಕಟ್ಟು ನಿರ್ಣಾಯಕ ಹಂತದತ್ತ ಸಾಗುತ್ತಿದೆ. ಸುಪ್ರೀಂಕೋರ್ಟ್ ಸೂಚನೆಯಂತೆ ವಿಧಾನಸಭೆಯಲ್ಲೇ ಬಹುಮತ ಸಾಬೀತುಪಡಿಸಬೇಕಾಗಿದ್ದು, ರಾಜ್ಯಪಾಲ ಕೋಶ್ಯಾರಿ ಅವರು ಜೂನ್ 30ರಂದು ಬಹುಮತ ಸಾಬೀತುಪಡಿಸುವಂತೆ ಮುಖ್ಯ ಮಂತ್ರಿ ಉದ್ಧವ್ ಠಾಕ್ರೆಗೆ ಸೂಚನೆ ನೀಡಿದ್ದಾರೆ. ಗುರುವಾರ ಬೆಳಗ್ಗೆ 11 ಗಂಟೆಗೆ ಬಹುಮತ ಸಾಬೀತುಪಡಿಸುವ ಪ್ರಕ್ರಿಯೆಗೆ ಚಾಲನೆ ದೊರೆಯಲಿದೆ. ಹಿಂದಿನ ಮುಖ್ಯಮಂತ್ರಿ, ಬಿಜೆಪಿ ನಾಯಕ ದೇವೇಂದ್ರ ಫಡ್ನವಿಸ್ ಅವರು ದೆಹಲಿಯಿಂದ ಇಂದು ರಾತ್ರಿ ವಾಪಸಾಗಿ, ಸೀದಾ ರಾಜ್ಯಪಾಲರನ್ನು ಭೇಟಿ ಮಾಡಿದರು. ಮಹಾರಾಷ್ಟ್ರ ಬಿಜೆಪಿ ನಾಯಕರು ಬಹುಮತ ಸಾಬೀತಿಗೆ ಮನವಿ ಸಲ್ಲಿಸಿದ ಬೆನ್ನಲ್ಲೇ ರಾಜ್ಯಪಾಲರಿಂದ ಈ ಸೂಚನೆ ಹೊರಬಿದ್ದಿದೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಏಕನಾಥ್ ಶಿಂಧೆ ಬಣ ಗುವಾಹಟಿಯಿಂದ ಮುಂಬೈಗೆ ನಾಡಿದ್ದು ಆಗಮನವಾಗುವ ಸಾಧ್ಯತೆಯಿದೆ.



ಅಘಾಡಿ ಸರ್ಕಾರ ಪತನಕ್ಕೆ ದಿನಗಣನೆ

## ಕುಡಿದ ಅಮಲಿನಲ್ಲಿ ಪತ್ನಿಯ ರುಂಡ–ಮುಂಡ ಬೇರ್ಪಡಿಸಿದ ಪತಿ

ಮೈಸೂರು, ಜೂ.28(ಆರ್‌ಕೆ)– ಕೌಟುಂಬಿಕ ಕಲಹದಿಂದ ಕುಡಿದ ಅಮಲಿನಲ್ಲಿ ಪತಿ, ಪತ್ನಿಯ ರುಂಡ–ಮುಂಡ ಬೇರ್ಪಡಿಸಿ, ಬರ್ಬರವಾಗಿ ಹತ್ಯೆಗೈದಿರುವ ಘಟನೆ ಮೈಸೂರು ತಾಲೂಕು ಚಟ್ಟನಹಳ್ಳಿ ಗ್ರಾಮದಲ್ಲಿ ಸೋಮವಾರ ಸಂಜೆ ಸಂಭವಿಸಿದೆ.

ವರುಣಾ ಹೋಬಳಿ ಚಟ್ಟನಹಳ್ಳಿ ಗ್ರಾಮದ ನಿವಾಸಿ ದೇವರಾಜು, ತನ್ನ ಪತ್ನಿ ಪುಟ್ಟಮ್ಮ (45)ನನ್ನು ಭೀಭತ್ಸವಾಗಿ ಹತ್ಯೆಗೈದಿದ್ದಾನೆ. ಕಂಠಪೂರ್ತಿ ಕುಡಿದು ಬಂದ ದೇವರಾಜು, ಸೋಮವಾರ ಸಂಜೆ 4 ಗಂಟೆ ವೇಳೆಯಲ್ಲಿ ಮಚ್ಚಿನಿಂದ ಪತ್ನಿಯ ಕತ್ತು ಕತ್ತರಿಸಿ ಪರಾರಿಯಾಗಿದ್ದಾನೆ. ಕಾಲೇಜಿಗೆ ಹೋಗಿದ್ದ ಪುತ್ರಿ ಸಂಜೆ 5.30 ಗಂಟೆ ವೇಳೆಗೆ ಮನೆಗೆ ಹಿಂದಿರುಗಿದಾಗ ಮನೆಯೊಳಗೆ ತಾಯಿಯ ರುಂಡ–ಮುಂಡ ಬೇರ್ಪಟ್ಟು ರಕ್ತಸಿಕ್ತ ದೇಹ ಕಂಡು, ಆಘಾತದಿಂದ ಚೀರಿಕೊಂಡಿದ್ದಾಳೆ. ಭಯದಿಂದ ಮನೆಯೊಳಗಿಂದ ಹೊರ ಓಡಿ ಬಂದ ಯುವತಿ ಕಂಡು ಸ್ಥಳಕ್ಕೆ ಬಂದ ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಸ್ಥಳಕ್ಕೆ ಧಾವಿಸಿದ ವರುಣಾ ಪೊಲೀಸ್ ಠಾಣೆ ▶ 8ನೇ ಪುಟಕ್ಕೆ



ಪುಟ್ಟಮ್ಮ ದೇವರಾಜು

## ಗಂಡನ ಅಕ್ರಮ ಸಂಬಂಧಕ್ಕೆ ಬೇಸತ್ತು ಮಕ್ಕಳೊಂದಿಗೆ ಗೃಹಿಣಿ ಆತ್ಮಹತ್ಯೆ

ತಿ.ನರಸೀಪುರ, ಜೂ.28(ಎಸ್‌ಕೆ)– ಪತಿಯ ಅಕ್ರಮ ಸಂಬಂಧದಿಂದ ಮನನೊಂದ ಗೃಹಿಣಿ ತನ್ನೆರಡು ಮಕ್ಕಳೊಂದಿಗೆ ನೇಣು ಬಿಗಿದುಕೊಂಡು ಆತ್ಮ ಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ರಾಮೇಗೌಡನಪುರ ಗ್ರಾಮದಲ್ಲಿ ನಡೆದಿದೆ. ಗ್ರಾಮದ ರೋಜಾ(30) ತನ್ನ ಪತಿ ನಿಂಗರಾಜು ಬೇರೊಬ್ಬ ಮಹಿಳೆಯೊಂದಿಗೆ ಅನೈತಿಕ ಸಂಬಂಧ ಇರಿಸಿಕೊಂಡಿದ್ದಾ ನೆಂಬ ಕಾರಣದಿಂದ ಮನನೊಂದು ಮಕ್ಕಳಾದ ಪುಷ್ಪಾಂಜಲಿ(5) ಮತ್ತು ಗೀತಾಂಜಲಿ(3) ಇಬ್ಬರನ್ನು ನೇಣು ಹಾಕಿ ತಾನು ಕೂಡ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ 10 ವರ್ಷಗಳ ಹಿಂದೆ ರೋಜಾಳ ವಿವಾಹ ಮಾವಿನಹಳ್ಳಿಯ ನಿಂಗರಾಜುವಿನೊಂದಿಗೆ ನಡೆದಿತ್ತು. ಇವರಿಗೆ ಇಬ್ಬರು ಮಕ್ಕಳಿದ್ದರು. ಆದರೆ, ದಂಪತಿ ನಡುವೆ ಆಗಾಗ ಹಣಕಾಸಿನ ವಿಚಾರವಾಗಿ ಜಗಳವಾಗುತ್ತಿತ್ತು. ಇತ್ತೀಚೆಗೆ ನಿಂಗರಾಜನು ಪತ್ನಿ ರೋಜಾಳಿಗೆ ಮಾನಸಿಕ ಕಿರುಕುಳ ನೀಡುವುದರ ಜೊತೆ ದೈಹಿಕ ಹಲ್ಲೆ ನಡೆಸಿ ತಂದೆ ಮನೆಗೆ ಹೋಗುವಂತೆ ಪೀಡಿಸುತ್ತಿದ್ದನು. ಇದರಿಂದ ಮನನೊಂದ ಮಹಿಳೆ ತನ್ನ ತಂದೆ ಮನೆಗೆ ಬಂದು, ಸೋಮವಾರ ರಾತ್ರಿ ತನ್ನೆರಡು ಮಕ್ಕಳನ್ನು ನೇಣು ಹಾಕಿ, ತಾನೂ ನೇಣಿಗೆ ಶರಣಾಗಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಗೆ ನಿಂಗರಾಜು ಬೇರೆ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದೇ ಕಾರಣ ಎನ್ನಲಾಗಿದ್ದು, ಸ್ಥಳಕ್ಕೆ ಡಿವೈಎಸ್‌ಪಿ ಶಿವಕುಮಾರ್ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ತಿ.ನರಸೀಪುರ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಸರ್ಕಲ್ ಇನ್‌ಸ್ಪೆಕ್ಟರ್ ಕೃಷ್ಣಪ್ಪ ತನಿಖೆ ಕೈಗೊಂಡಿದ್ದಾರೆ.



ರೋಜಾ



## ಕೆಎಸ್‌ಆರ್‌ಟಿಸಿ ವಿದ್ಯಾರ್ಥಿ ಬಸ್ ಪಾಸ್ ಅವಧಿ ವಿಸ್ತರಣೆ

**ಬೆಂಗಳೂರು:** ಪದವಿ, ವೃತ್ತಿಪರ ಕೋರ್ಸ್ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಗಳ ಹಿತದೃಷ್ಟಿಯಿಂದ ಕೆಎಸ್‌ಆರ್‌ಟಿಸಿ ವಿದ್ಯಾರ್ಥಿ ಪಾಸ್‌ಗಳ ಅವಧಿಯನ್ನು ವಿಸ್ತರಿಸಿದೆ. ಪದವಿ ಹಾಗೂ ಸ್ನಾತಕೋ ತ್ತರ ವಿದ್ಯಾರ್ಥಿಗಳಿಗೆ ಆಗಸ್ಟ್‌ನಿಂದ ನವೆಂಬರ್‌ವರೆಗೂ ಪರೀಕ್ಷೆಗಳು ನಡೆಯ ಲಿವೆ. ಈ ಹಿನ್ನೆಲೆ ಪಾಸ್ ಅವಧಿ ವಿಸ್ತ ರಣೆಗೆ ನಿರ್ದೇಶನ ಬಂದಿದ್ದು, ಬಸ್ ಪಾಸ್ ಅವಧಿ ವಿಸ್ತರಿಸಲು ನಿರ್ಧರಿಸಿದೆ.

## ರಾಜ್ಯ ಬಿಜೆಪಿ ಸರ್ಕಾರದಲ್ಲಿ 40 ಪರ್ಸೆಂಟ್ ಕಮೀಷನ್: ಕೇಂದ್ರದಿಂದ ತನಿಖೆ ಆರಂಭ

ಬೆಂಗಳೂರು, ಜೂ.28(ಕೆಎಂಶಿ)–ಗುತ್ತಿಗೆ ಕಾಮಗಾರಿಗಳಲ್ಲಿ 40 ಪರ್ಸೆಂಟ್ ಕಮೀಷನ್ ಆರೋಪ ಪ್ರಕರಣಕ್ಕೆ ಸಂಬಂಧಿಸಿ ದಂತೆ ಕೇಂದ್ರ ಗೃಹ ಸಚಿವಾಲಯ ತನಿಖೆ ಕೈಗೆತ್ತಿಕೊಂಡಿದೆ.

ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಲೋಕೋಪ ಯೋಗಿ, ನೀರಾವರಿ, ಸಮಾಜ ಕಲ್ಯಾಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಗಳಲ್ಲಿ ನಡೆಯುವ ಕಾಮಗಾರಿಗಳಿಗೆ ಶೇಕಡ 40ರಷ್ಟು ಕಮೀ ಷನ್ ನೀಡಬೇಕಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಪ್ರಧಾನಿಯವರಿಗೆ ಪತ್ರ ಬರೆದಿತ್ತು. ಪತ್ರ ಬರೆದ ಒಂದು ವರ್ಷದ ನಂತರ ಗೃಹ ಸಚಿವಾಲಯ ತನಿಖೆ ಕೈಗೆತ್ತಿಕೊಂಡಿರುವುದು ಆಡಳಿತಾರೂಢ ಸಚಿವರು, ಅಧಿಕಾರಿಗಳು, ಪಕ್ಷಾತೀತವಾಗಿ ಶಾಸಕರು, ಸಂಸದರಿಗೆ ನಡುಕ ಆರಂಭಗೊಂಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಕಚೇರಿಯ ಹಿರಿಯ ಅಧಿಕಾರಿಯೊಬ್ಬರು ನಿನ್ನೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರನ್ನು ಸಂಪರ್ಕಿಸಿ, ತಮ್ಮ ಆರೋಪಕ್ಕೆ ಸಂಬಂಧಿಸಿದ ದಾಖಲೆ ಒದಗಿಸಬೇಕೆಂದು ಸೂಚಿಸಿದ್ದರು. ಈ ಮಾಹಿತಿ ಪತ್ರಿಕೆಗಳಲ್ಲಿ ಬಂದ ಕಾರಣ ತನಿಖೆಗೆ ಸಂಬಂಧಿಸಿದಂತೆ ನಡೆಯ ಬೇಕಾಗಿದ್ದ ಸಭೆಯನ್ನು ಮುಂದಿನ ವಾರಕ್ಕೆ ಮುಂದೂಡಿದ್ದಾರೆ. ಆದರೆ ಅಧಿಕಾರಿಗಳು ನಗರದ ಚಾಮರಾಜಪೇಟೆಯಲ್ಲಿರುವ ಗುತ್ತಿಗೆದಾರರ ಸಂಘದ ಕಚೇರಿಯಲ್ಲಿ ದಾಖಲೆಗಳನ್ನು ಪರಿ ಶೀಲಿಸಿದ್ದಾರೆ. ಅಷ್ಟೇ ಅಲ್ಲ, ಅಧ್ಯಕ್ಷರು ಮತ್ತು ಇತರ ಪದಾಧಿಕಾರಿ ಗಳಿಂದ ಪ್ರಾಥಮಿಕ ಮಾಹಿತಿಯನ್ನು ▶ 8ನೇ ಪುಟಕ್ಕೆ

ವರ್ಷದ ನಂತರ ಕೇಂದ್ರ ಗೃಹ ಇಲಾಖೆಯಿಂದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣರಿಗೆ ದಾಖಲೆ ಸಮೇತ ಸಭೆಗೆ ಹಾಜರಾಗಲು ಸೂಚನೆ



# ಕೊಡಗಲ್ಲಿ ವಾರದಲ್ಲಿ 3ನೇ ಬಾರಿ ಭೂ ಕಂಪನ

● ಗಡಿ ಭಾಗದ ಗ್ರಾಮಸ್ಥರಲ್ಲಿ ಆತಂಕ ● ಕಳೆದ ಬಾರಿಗಿಂತ ಅಧಿಕ ತೀವ್ರತೆ

ಮಡಿಕೇರಿ, ಜೂ.28– ಕೊಡಗು ಜಿಲ್ಲೆ ಯಲ್ಲಿ ವಾರದಲ್ಲಿ ಮೂರನೇ ಬಾರಿ ಭೂಮಿ ಕಂಪಿಸಿದ್ದು, ಜಿಲ್ಲೆಯ ಜನರನ್ನು ಚಿಂತೆಗೀಡು ಮಾಡಿದೆ.

ಜಿಲ್ಲೆಯ ಗಡಿಭಾಗದ ಗ್ರಾಮಗಳಲ್ಲಿ ಮಂಗಳವಾರ ಬೆಳಗ್ಗೆ 7 ಗಂಟೆ 45 ನಿಮಿಷ 47 ಸೆಕೆಂಡ್‌ನಲ್ಲಿ ಲಘು ಭೂ ಕಂಪನ ವಾಗಿದ್ದು, ಜನತೆ ಬೆಚ್ಚಿ ಬಿದ್ದಿದ್ದಾರೆ. ಪೆರಾಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇಲ್ಚೆಂಬು ಗ್ರಾಮದ 5.2 ಕಿ.ಮೀ ದೂರದ ವಾಯುವ್ಯ ದಿಕ್ಕಿನ 15 ಕಿ.ಮೀ ಆಳದಲ್ಲಿ ಭೂ ಕಂಪನದ ಕೇಂದ್ರ ಬಿಂದುವಿತ್ತು ಎಂದು ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ ತಿಳಿಸಿದೆ.

ಮಂಗಳವಾರ ಬೆಳಗ್ಗೆ ಸಂಭವಿಸಿದ ಲಘು ಭೂಕಂಪನ ಕುರಿತಂತೆ ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ ಅಧಿಕೃತ ▶ 8ನೇ ಪುಟಕ್ಕೆ



ಮಡಿಕೇರಿ ನಗರದಲ್ಲಿ ಮಂಗಳವಾರ ಬೆಳಗ್ಗೆ ಭೂಕಂಪದ ಅನುಭವವಾಗಿದೆ.

### ಚೆಂಬು ಗ್ರಾಮದಲ್ಲಿ 2 ಬಾರಿ ಕಂಪಿಸಿದ ಭೂಮಿ

ಮಂಗಳವಾರ ಬೆಳಗಿನ ಜಾವ ಲಘು ಭೂ ಕಂಪನಕ್ಕೆ ಸಾಕ್ಷಿಯಾಗಿದ್ದ ಕೊಡಗಿನ ಗಡಿ ಗ್ರಾಮ ಚೆಂಬು ವ್ಯಾಪ್ತಿಯಲ್ಲಿ ಸಂಜೆ ವೇಳೆ ಮತ್ತೊಮ್ಮೆ ಭೂ ಕಂಪನದ ಅನುಭವ ವಾಗಿದೆ. ಸಂಜೆ 4.45 ಗಂಟೆಗೆ ಭೂಮಿ ಒಳಗಿಂದ ಗುಡುಗಿನಂತಹ ಭಾರೀ ಶಬ್ದ ಸಹಿತ ಕೆಲ ಸೆಕೆಂಡ್‌ಗಳ ಕಾಲ ಭೂಮಿ ಕಂಪಿಸಿದ್ದು, ಇದರಿಂದ ಚೆಂಬು, ಸುಳ್ಯ ಗಡಿ ಗ್ರಾಮಗಳಾದ ಗೂನಡ್ಕ, ತೊಡಿಕಾನ, ಕಲ್ಲುಗದ್ದೆ, ಶೆಟ್ಯಡ್ಕ ಗ್ರಾಮಗಳಲ್ಲಿ ಲಘು ಕಂಪನವಾಗಿದೆ. ಆದರೆ ತೀವ್ರತೆ ಬೆಳಗಿನಷ್ಟು ಇರಲಿಲ್ಲ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಕಂಪನದಿಂದ ಭಯಭೀತರಾಗಿರುವ ಗ್ರಾಮಸ್ಥರು, ಭೂ ಗರ್ಭ ಶಾಸ್ತ್ರ ವಿಜ್ಞಾನಿಗಳು ಸ್ಥಳ ಪರಿಶೀಲನೆ ನಡೆಸಬೇಕೆಂದು ಆಗ್ರಹಿಸಿದ್ದಾರೆ.

### ವಾರದಲ್ಲಿ 3ನೇ ಕಂಪನ

**ಕೊಡಗು ಜಿಲ್ಲೆಯಲ್ಲಿ ಕಳೆದೊಂದು ವಾರದಲ್ಲಿ 3ನೇ ಭೂಕಂಪನ ಸಂಭ ವಿಸುತ್ತಿದ್ದು, ಸಹಜವಾಗಿಯೇ ಆತಂಕ ಸೃಷ್ಟಿಸಿದೆ. ಜೂ.23ರಂದು ಮುಂಜಾನೆ 4.37 ಗಂಟೆಗೆ ಕೊಡಗು–ಹಾಸನ ಗಡಿ ಭಾಗದಲ್ಲಿ ಭೂ ಕಂಪನ ಸಂಭವಿಸಿತ್ತು. ಅದರ ತೀವ್ರತೆ ರಿಕ್ಟರ್ ಮಾಪಕದಲ್ಲಿ 3.4ರಷ್ಟಿತ್ತು. ಜೂ.25ರಂದು ಕರಿಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 9 ಗಂಟೆ 10 ನಿಮಿಷಕ್ಕೆ ಮತ್ತೊಮ್ಮೆ ಭೂ ಕಂಪನ ಘಟಿಸಿದ್ದು, ರಿಕ್ಟರ್ ಮಾಪಕದಲ್ಲಿ 2.8ರಷ್ಟು ದಾಖಲಾಗಿತ್ತು. ಮಂಗಳವಾರ ಬೆಳಗೆ 7 ಗಂಟೆ 45 ನಿಮಿಷಕ್ಕೆ ಮತ್ತೊಮ್ಮೆ ಭೂಮಿ ಅದುರಿದ್ದು, ಅದರ ತೀವ್ರತೆ ರಿಕ್ಟರ್ ಮಾಪಕದಲ್ಲಿ 3ರಷ್ಟು ದಾಖಲಾಗಿದೆ.**

## ಭೂ ವಿಜ್ಞಾನಿಗಳು ಜಿಲ್ಲೆಗೆ ಭೇಟಿ ನೀಡಿ ನೈಜಾಂಶ ಪತ್ತೆಗೆ ಕೊರವೇ ಆಗ್ರಹ

**ಮಡಿಕೇರಿ:** ಒಂದೇ ವಾರದಲ್ಲಿ ಕೊಡಗಿನ ವಿವಿಧೆಡೆ ಮೂರು ಬಾರಿ ಭೂಮಿ ಕಂಪಿಸಿದ್ದು, ಹಿರಿಯ ಭೂ ವಿಜ್ಞಾನಿಗಳು ಜಿಲ್ಲೆಗೆ ಭೇಟಿ ನೀಡಿ ನೈಜಾಂಶ ಬಹಿರಂಗಪಡಿಸಬೇಕು ಮತ್ತು ಆತಂಕದಲ್ಲಿರುವ ಜನರಿಗೆ ಅಭಯ ನೀಡಬೇಕೆಂದು ಕೊಡಗು ರಕ್ಷಣಾ ವೇದಿಕೆ (ಕೊರವೇ) ಒತ್ತಾಯಿಸಿದೆ.

ಪತ್ರಿಕಾ ಹೇಳಿಕೆ ನೀಡಿರುವ ಕೊರವೇ ಅಧ್ಯಕ್ಷ ಪವನ್ ಪೆಮ್ಮಯ್ಯ ನಿರಂತರ ಭೂಕಂಪನದಿಂದ ಕೊಡಗು ಜಿಲ್ಲೆಯ ಜನ ಭಯಗೊಂಡಿದ್ದಾರೆ. ಆದರೆ ಅಧಿಕಾರಿ ಗಳು ಮಾತ್ರ ಯಾವುದೇ ಅಪಾಯವಿಲ್ಲ, ಧೈರ್ಯದಿಂದಿರಿ ಎಂದು ಸಮಜಾಯಿಷಿ ನೀಡುತ್ತಿದ್ದಾರೆ. ಜನರ ಆತಂಕ ದೂರ ಮಾಡಬೇಕಾದರೆ ಭೂಕಂಪನದ ಸ್ಥಳಗಳಿಗೆ ಹಿರಿಯ ಭೂ ವಿಜ್ಞಾನಿಗಳು ಭೇಟಿ ನೀಡಿ ವೈಜ್ಞಾನಿಕ ಕಾರಣಗಳನ್ನು ಬಹಿರಂಗ ಪಡಿಸುವುದು ಸೂಕ್ತ ಎಂದು ತಿಳಿಸಿದ್ದಾರೆ. ಭೂಕಂಪನದ ಕೇಂದ್ರ ಬಿಂದು ಕೊಡಗು ಎಂದು ತಿಳಿದು ಬಂದಿದ್ದು, ಜಿಲ್ಲಾಡಳಿತ ಎಚ್ಚೆತ್ತುಕೊಳ್ಳಬೇಕಾಗಿದೆ. ಸತತ ಮೂರು ಬಾರಿ ಭೂಮಿ ಕಂಪಿಸಿರುವುದರಿಂದ ಭಾರೀ ಮಳೆಯಾಗುವ ಸಂದರ್ಭ 2018ರಂತೆ ಅನಾಹುತ ಸಂಭವಿಸುವ ಸಾಧ್ಯತೆಗಳಿವೆ. ಮುಂಜಾ ಗೃತಾ ಕ್ರಮವಾಗಿ ಸೂಕ್ಷ್ಮ ಪ್ರದೇಶಗಳ ಮೇಲೆ ನಿಗಾ ವಹಿಸಿ ಭೂ ವಿಜ್ಞಾನಿಗಳ ಸಲಹೆ ಪಡೆದು ಜನರನ್ನು ರಕ್ಷಿಸುವ ಕಾರ್ಯವನ್ನು ಮಾಡಬೇಕೆಂದು ಅವರು ಒತ್ತಾಯಿಸಿದ್ದಾರೆ.

# ಉದ್ಯಮಗಳ ಬೇಡಿಕೆಯಂತೆ ಕೌಶಲ ತರಬೇತಿಗೆ ಬದ್ಧ

## ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ ನಾರಾಯಣ್ ವಿಶ್ವಾಸ



ಬೆಂಗಳೂರಲ್ಲಿ ಮಂಗಳವಾರ 'ಕೌಶಲ ಕರ್ನಾಟಕ' ಮತ್ತು 'ದೇಶಪಾಡೆ ಫೌಂಡೇಷನ್' ವತಿಯಿಂದ ಐಟಿ/ ಐಟಿಇಎಸ್ ವಲಯದ ಉದ್ಯಮ ನಾಯಕರು ಮತ್ತು ನವೋದ್ಯಮಿಗಳೊಂದಿಗೆ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್ ನಾರಾಯಣ ಸಂವಾದ ನಡೆಸಿದರು.

"ರಾಜ್ಯದ ಕಾಲೇಜುಗಳಲ್ಲಿ ಒಟ್ಟಾರೆ ಪ್ರವೇಶಾತಿ ಅನುಪಾತ (ಜಿಇಆರ್) ಕಳೆದ 3 ವರ್ಷಗಳಲ್ಲಿ ಶೇ.6ಕ್ಕಿಂತಲೂ ಜಾಸ್ತಿಯಾಗಿದೆ. ಪಾಲಿಟೆಕ್ನಿಕ್‌ಗೆ ಸೇರುವವರ ಸಂಖ್ಯೆ 30,000ದಿಂದ 75,000ಕ್ಕೆ ಜಾಸ್ತಿಯಾಗಿದೆ, ಜಿಟಿಟಿಸಿ ಮತ್ತು ಐಟಿಐ ಜನಪ್ರಿಯಗೊಂಡಿವೆ. ಒಟ್ಟಾರೆ, ವೈಟ್ ಕಾಲರ್ ವಲಯವಿರಲಿ ಅಥವಾ ಬ್ಲೂ ಕಾಲರ್ ವಲಯವಿರಲಿ ರಾಜ್ಯದಲ್ಲಿ ಮಾನವ ಸಂಪನ್ಮೂಲದ ಕೊರತೆ ಇರಬಾರದು ಎಂಬುದೇ ಸರ್ಕಾರದ ಧ್ಯೇಯವಾಗಿದೆ.
–ಅಶ್ವತ್ಥನಾರಾಯಣ, ಸಚಿವ.

"ಹಿತಾಸಕ್ತಿದಾರರೊಂದಿಗೆ ಸಮಾಲೋಚಿಸಿ ಮುನ್ನಡೆಯಲು ಸರ್ಕಾರ ಮುಕ್ತ ಮನಸ್ಸು ಹೊಂದಿದೆ. ಸರ್ಕಾರವು ಯಾವುದೇ ಅಧಿಕಾರದ ಹಸ್ತಕ್ಷೇಪ ನಡೆಸದೇ ಸುಗಮ ಕಾರ್ಯನಿರ್ವಹಣೆಗೆ ಅನುವು ಮಾಡಿಕೊಡಲಿದೆ. ಉದ್ಯೋಗ, ಕೌಶಲ, ಉದ್ಯಮಶೀಲತೆ ಹೀಗೆ ಎಲ್ಲ ವಲಯಗಳಲ್ಲೂ ತರಬೇತಿ ಕೊಡುವ ಯೋಜನೆ ಹೊಂದಿದೆ. –ಡಾ.ಅಶ್ವತ್ಥ್ ನಾರಾಯಣ

ಬೆಂಗಳೂರು, ಜೂ.28(ಕುಂಿ)–ಉದ್ಯಮಗಳ ಬೇಡಿಕೆಗೆ ತಕ್ಕಂತೆ ಕೌಶಲ ತರಬೇತಿ ನೀಡಲು ಸರ್ಕಾರ ಬದ್ಧವಾಗಿದೆ. ಪ್ರತಿಯೊಬ್ಬ ವ್ಯಕ್ತಿಯನ್ನೂ ಉತ್ಪಾದಕನನ್ನಾಗಿ ಮಾಡುವ ದಿಸೆಯಲ್ಲಿ ಅವಕಾಶಗಳನ್ನು ಸೃಷ್ಟಿಸುವುದೇ ಸರ್ಕಾರದ ಗುರಿಯಾಗಿದೆ ಎಂದು ಕೌಶಲಾಭಿವೃದ್ಧಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

'ಕೌಶಲ ಕರ್ನಾಟಕ' ಮತ್ತು 'ದೇಶಪಾಡೆ ಫೌಂಡೇಷನ್' ವತಿಯಿಂದ ಐಟಿ/ ಐಟಿಇಎಸ್ ವಲಯದ ಉದ್ಯಮ ನಾಯಕರು ಮತ್ತು ನವೋದ್ಯಮಿಗಳೊಂದಿಗೆ "ಕರ್ನಾಟಕವನ್ನು ಕೌಶಲಪೂರ್ಣವಾಗಿಸುವುದು" ಕುರಿತು ಏರ್ಪಡಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉದ್ಯಮ ವಲಯದೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯಾಚರಿಸಲು ಸರ್ಕಾರ ಒತ್ತು ನೀಡಲಿದೆ ಎಂದು ಹೇಳಿದರು.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಇಲ್ಲಿ ಉದ್ಯೋಗಾವಕಾಶ ಹೆಚ್ಚಾಗಿದೆ ಎಂದ ಅವರು, ಇದೇ ವೇಳೆ ಪ್ರತಿಯೊಂದು ಕಂಪನಿಯೂ ಸರ್ಕಾರದ 'ಸ್ಕಿಲ್ ಪೋರ್ಟಲ್'ಗೆ ನೋಂದಣಿಯಾಗಬೇಕು. ಹೀಗಾದಾಗ, ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಎಲ್ಲೆಲ್ಲಿವೆ ಎಂಬುದು ಸುಲಭವಾಗಿ ಗೊತ್ತಾಗುತ್ತದೆ. ಅದನ್ನು ಆಧರಿಸಿ ಉದ್ಯೋಗಾಕಾಂಕ್ಷಿಗಳು ಶುಲ್ಕಾಧಾರಿತ ತರಬೇತಿ, ಉಚಿತ ತರಬೇತಿ, ಸರ್ಕಾರಿ ತರಬೇತಿ ಯಾವುದನ್ನು ಬೇಕಾದರೂ ಪಡೆದುಕೊಳ್ಳಬಹುದು ಎಂದು ಸಚಿವರು ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕೂಡ ಕೌಶಲಗಳಿಗೆ ಒತ್ತು ಕೊಡುತ್ತದೆ. ನಾವು ರಾಜ್ಯದಲ್ಲಿ ಎನ್‌ಇಪಿ ಅಳವಡಿಸಿರುವ ಮಾದರಿಯನ್ನು ದೇಶದ ಬೇರೆ ರಾಜ್ಯಗಳು ಅನುಸರಿಸುತ್ತಿವೆ. ನಾವು ಅನುಷ್ಠಾನಗೊಳಿಸಿದ ಎಲ್‌ಎಂಎಸ್ ಉತ್ತಮ ಗುಣಮಟ್ಟದಿಂದ ಕೂಡಿದ್ದು, ಕಲಿಕಾ ರೀತಿ ಸಂಪೂರ್ಣ ಬದಲಾಗಿದೆ. ಡಿಜಿಟಲ್ ಸಾಕ್ಷರತೆ, ಆರ್ಥಿಕ ಸಾಕ್ಷರತೆ, ಆರೋಗ್ಯ ಮತ್ತು ಸ್ವಾಸ್ಥ್ಯ ಇವುಗಳನ್ನು ಕಡ್ಡಾಯಗೊಳಿಸಲಾಗಿದೆ. ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಸಂಯೋಜನೆಗೊಳಿಸಲಾಗಿದೆ ಎಂದು ಸಚಿವರು ವಿವರಿಸಿದರು.

### ಅಗ್ನಿಪಥ್ ಯೋಜನೆ ಟೀಕಿಸುವ ಭರದಲ್ಲಿ ಸವಿತಾ ಸಮಾಜ ನಿಂದಿಸಿದ ಆರೋಪ

# ಮಾಜಿ ಸಿಎಂ ಕುಮಾರಸ್ವಾಮಿ ವಿರುದ್ಧ ಪ್ರತಿಭಟನೆ



ಮೈಸೂರಿನ ಗಾಂಧಿ ಚೌಕದಲ್ಲಿ ಕರ್ನಾಟಕ ರಾಜ್ಯ ಸವಿತಾ ಸಮಾಜ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜೂ.28(ಪಿಎಂ)– ಕೇಂದ್ರ ಸರ್ಕಾರದ ಅಗ್ನಿಪಥ್ ಯೋಜನೆ ಬಗ್ಗೆ ಟೀಕಿಸುವ ಭರದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಸವಿತಾ ಸಮಾಜದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ಸವಿತಾ ಸಮಾಜ ಮೀಸಲಾತಿ ಹೋರಾಟ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿ ಚೌಕದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಅಗ್ನಿಪಥ್ ಯೋಜನೆ ಟೀಕಿಸುವ ಭರದಲ್ಲಿ ಕುಮಾರಸ್ವಾಮಿಯವರು ಸವಿತಾ ಸಮಾಜದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಇವರು ಹೀಗೆ ಮಾತನಾಡಿರುವುದು ಅವರಿಗೆ ಶೋಭೆಯಲ್ಲ. ಅವರು ಕೂಡಲೇ ಕ್ಷಮೆಯಾಚಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸವಿತಾ ಸಮಾಜ ನಿಂದಿಸಿದ ಆರೋಪದಡಿ ಕುಮಾರಸ್ವಾಮಿಯವರ ವಿರುದ್ಧ ಮೊಕದ್ದಮೆ ದಾಖಲಿಸಲು ಸರ್ಕಾರ ಕ್ರಮ ವಹಿಸಬೇಕು. ನಮ್ಮ ಸಮುದಾಯದ ಬಗ್ಗೆ ಆಗಾಗ್ಗೆ ರಾಜಕಾರಣಿಗಳು ಲಘುವಾಗಿ ಮಾತನಾಡಿ ತೇಜೋವಧೆ ಮಾಡುತ್ತಿರುತ್ತಾರೆ. ಹಾಗಾಗಿ ನಮ್ಮ ಜನಾಂಗದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಲು ಕಾನೂನು ರೂಪಿಸಬೇಕು ಎಂದು ಆಗ್ರಹಿಸಿದರು.

ನಮ್ಮ ಸಮುದಾಯ ಹಾಗೂ ನಮ್ಮ ವೃತ್ತಿ ಬಗ್ಗೆ ಅವಹೇಳನ ಮಾಡುವವರ ವಿರುದ್ಧ ಉಗ್ರ ಹೋರಾಟ ಮಾಡುತ್ತೇವೆ. ಅಂತಹವರ ಮುಖಕ್ಕೆ ಮಸಿ ಬಳಿದು, ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇವೆ ಎಂದು ಎಚ್ಚರಿಸಿದರು. ಸಮಿತಿ ರಾಜ್ಯಾಧ್ಯಕ್ಷ ತಿಪಟೂರು ನಾಗರಾಜ್, ಜಿಲ್ಲಾಧ್ಯಕ್ಷ ರಾಜೇಶ್, ಗೌರವಾಧ್ಯಕ್ಷ ವಿ.ಮಂಜುನಾಥ್, ನಗರಾಧ್ಯಕ್ಷ ಪಿ.ಅಶೋಕ್‌ಕುಮಾರ್, ಮುಖಂಡರಾದ ಸಿ.ಶಂಕರ್, ಎಂ.ರಮೇಶ್, ಧನರಾಜ್, ರಾಜ್‌ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಆರೋಗ್ಯ–ಸಂತೋಷಕ್ಕಾಗಿ ಜು.1, ಬಯಾಥ್ಲಾನ್

### ಜು.2ರಂದು ಕೆಜಿಎಫ್ ಚಿತ್ರದಲ್ಲಿ ಯಶ್ ತಾಯಿ ಪಾತ್ರದಲ್ಲಿ ನಟಿಸಿರುವ ಅರ್ಚನಾ ಆಗಮನ



ಮೈಸೂರು,ಜೂ.28(ಆರ್‌ಕೆಬಿ)– ಮಹಾರಾಜ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ಕಾಲೇಜಿನ 15ನೇ ವಾರ್ಷಿಕೋತ್ಸವ ಮಹಾ ದಸರಾ ಅಂಗವಾಗಿ 'ಎಲ್ಲರಿಗೂ ಆರೋಗ್ಯ ಮತ್ತು ಸಂತೋಷ' ಎಂಬ ಧ್ಯೇಯದೊಂದಿಗೆ ಜು.1ರಂದು ಬಯಾಥ್ಲಾನ್ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಸಂಚಾಲಕ ಡಾ.ರವಿಚಂದ್ರ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯದ ಪ್ರವೇಶದ್ವಾರದಲ್ಲಿರುವ ಕುವೆಂಪು ಪ್ರತಿಮೆ ಬಳಿ ಪ್ರಾರಂಭವಾಗಿ ಜೆ.ಕೆ.ಮೈದಾನದ ಮೂಲಕ ಎಂಐಟಿ ಕಾಲೇಜು ಆವರಣದಲ್ಲಿ ಕಾರ್ಯಕ್ರಮ ಮುಕ್ತಾಯವಾಗಲಿದೆ. ಬಯಾಥ್ಲಾನ್ ಅನ್ನು ಎರಡು ವಿಭಾಗಗಳಾಗಿ ಆಯೋಜಿಸಲಾಗಿದೆ. ಸ್ಪರ್ಧಿಗಳು ಮೈವಿವಿ ಆವರಣದಿಂದ ಜೆ.ಕೆ. ಮೈದಾನದವರೆಗೆ 5 ಕಿಲೋ ಮೀಟರ್ ಓಡಬೇಕು. ನಂತರ ಜೆ.ಕೆ. ಮೈದಾನದಿಂದ ಸೈಕ್ಲಿಂಗ್ ಮೂಲಕ 10 ಕಿಲೋಮೀಟರ್ ದೂರದ ಎಂಐಟಿ ಕಾಲೇಜಿಗೆ ತಲುಪಬೇಕು. ಈ ಸ್ಪರ್ಧೆಯಲ್ಲಿ ಇಬ್ಬರು ಒಂದು ಗುಂಪಾಗಿ ಭಾಗವಹಿಸಬೇಕು. ಸ್ಪರ್ಧಿಗಳೇ ಸೈಕಲ್ ತರಬೇಕು. ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದ್ದು, ಭಾಗವಹಿಸುವವರಿಗೆ ಉಚಿತ ಟಿ–ಶರ್ಟ್ ನೀಡಲಾಗುತ್ತದೆ ಎಂದರು.

ಸ್ಪರ್ಧೆಯ ವಿಜೇತರಿಗೆ 6 ಸಾವಿರ ರೂ. ಮೊದಲ ಬಹುಮಾನ, 4 ಸಾವಿರ ರೂ. ದ್ವಿತೀಯ ಬಹುಮಾನ ನೀಡಲಾಗುವುದು. ಎಂಐಟಿ ಕಾಲೇಜಿನ ವಿದ್ಯಾರ್ಥಿಗಳಿಗೆ ಕ್ರಮವಾಗಿ 3 ಸಾವಿರ, 2 ಸಾವಿರ ರೂ. ನಗದು ಪುರಸ್ಕಾರ ನೀಡಲಾಗುವುದು ಎಂದು ಹೇಳಿದರು.

ಜು.1ರಂದು ಬೆಳಗ್ಗೆ 6.30ಕ್ಕೆ ಅರಂಭವಾಗುವ ಬಯಾಥ್ಲಾನ್‌ನಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಶಾಸಕ ಎಲ್.ನಾಗೇಂದ್ರ, ಡಿಎಚ್‌ಓ ಡಾ.ಕೆ.ಎಚ್.ಪ್ರಸಾದ್, ಡಿಸಿಪಿ ಎಂ.ಎಸ್.ಗೀತಾ, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕ ಡಾ.ಎಂ.ಎನ್.ರವಿ, ಕಾಲೇಜಿನ ಪ್ರಾಚಾರ್ಯ ಡಾ.ಎಂ.ಎನ್.ರವಿ ಚಾಲನೆ ನೀಡಲಿದ್ದಾರೆ. ಮಹಾ ದಸರಾ ಅಂಗವಾಗಿ ಜೂ.30ರಂದು ಕಾಲೇಜು ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಸುಮಾರು 15ಕ್ಕೂ ಹೆಚ್ಚು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಜು.2ರಂದು ಸಂಜೆ 7.30ಕ್ಕೆ ಪ್ರಸಿದ್ಧ ಡಿಜೆ ಜೂಲಿಯಾ ಬ್ಲಿಸ್ ಅವರ ಕಾರ್ಯಕ್ರಮ ಏರ್ಪಡಿಸಿದೆ. ಕೆಜಿಎಫ್ ಸಿನಿಮಾದಲ್ಲಿ ಯಶ್ ಅವರ ತಾಯಿ ಪಾತ್ರದಲ್ಲಿ ನಟಿಸಿರುವ ಅರ್ಚನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ. 9480849443 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಆಡಳಿತಾಧಿಕಾರಿ ಎ.ಎಂ. ಅನಿರುದ್ಧ, ಡಾ.ಶರತ್‌ಕುಮಾರ್ ಉಪಸ್ಥಿತರಿದ್ದರು.

## ಜು.5, 6ರಂದು ಶ್ರೀ ಚಾಮುಂಡೇಶ್ವರಿ ಪೂಜಾ ಮಹೋತ್ಸವ



ಮೈಸೂರು, ಜೂ.28(ಆರ್‌ಕೆಬಿ)– ಮೈಸೂರಿನ ಕುಂಬಾರಕೊಪ್ಪಲು ಕಾವೇರಿ ಬಡಾವಣೆ ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಯುವಕರ ಭಕ್ತ ಮಂಡಳಿ ವತಿಯಿಂದ 22ನೇ ವರ್ಷದ ಚಾಮುಂಡೇಶ್ವರಿ ಪೂಜಾ ಮಹೋತ್ಸವ ಜು.5 ಮತ್ತು 6ರಂದು ನಡೆಯಲಿದೆ.

ಜು.5ರಂದು ಬೆಳಗ್ಗೆ 8:30ಕ್ಕೆ ಕುಂಬಾರಕೊಪ್ಪಲಿನ ಶ್ರೀ ಆದಿಶಕ್ತಿ ಬನ್ನಿ ಮರದಮ್ಮ ದೇವಸ್ಥಾನದಿಂದ ಚಾಮುಂಡೇಶ್ವರಿ ಅಮ್ಮನವರ ಕಳಸ, ಬೆಳ್ಳಿ ಮುಖವಾಡ ಹಾಗೂ ಮೂರ್ತಿಯನ್ನು ಮಂಗಳವಾದ್ಯದೊಂದಿಗೆ ಕೊಂಡೊಯ್ದು ಪ್ರತಿಷ್ಠಾಪನೆ ಮಾಡಲಾಗುವುದು. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಸಂಜೆ 6ರಿಂದ ರಾತ್ರಿ 9ರವರೆಗೆ ಅಮ್ಮನವರಿಗೆ ಆರತಿ ಪೂಜೆ ನೆರವೇರಿಸಲಾಗುವುದು. ಜು.6ರಂದು ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 5 ಗಂಟೆಗೆ ಶ್ರೀರಂಗಪಟ್ಟಣದ ನಿಮಿಷಾಂಬ ದೇವಸ್ಥಾನದ ಕಾವೇರಿ ನದಿಯಲ್ಲಿ ದೇವಿಯ ವಿಸರ್ಜನೆ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ರಾಜು ಕುತ್ನೀಕರ್ ತಿಳಿಸಿದ್ದಾರೆ.

### ಆಷಾಢ ಪೂಜಾ ಸಭೆಗೆ ಕಡೇ ಘಳಿಗೆಯಲ್ಲಿ ಕರೆಸಿದರು

# ಜಿಲ್ಲಾಡಳಿತದ ವಿರುದ್ಧ ಮೇಯರ್ ಆಕ್ರೋಶ



ಮೈಸೂರು,ಜೂ.28(ಆರ್‌ಕೆ)–ಆಷಾಢ ಶುಕ್ರವಾರ ಆಚರಣೆ ಪೂರ್ವಭಾವಿ ಸಭೆಗೆ ತಮ್ಮನ್ನು ಆಹ್ವಾನಿಸದೇ ಅವಮಾನಿಸಲಾಗಿದೆ ಎಂದು ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ಮೈಸೂರು ಮಿತ್ರ'ನಲ್ಲಿ ತಮ್ಮ ಅಸಮಾಧಾನ ತೋಡಿಕೊಂಡ ಅವರು, ಸೋಮವಾರ ಸಂಜೆ 5 ಗಂಟೆಗೆ ಡಿಸಿ ಕಚೇರಿಯಲ್ಲಿ ಆಷಾಢ ಮಾಸ ಕಾರ್ಯಕ್ರಮದ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿತ್ತು. ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಗೆ ಸಂಸದರು, ಶಾಸಕರು, ಪರಿಷತ್ ಸದಸ್ಯರೂ ಸೇರಿದಂತೆ ಇತರ ಜನಪ್ರತಿನಿಧಿಗಳು, ಅಧಿಕಾರಿಗಳನ್ನು ಆಹ್ವಾನಿಸಲಾಗಿತ್ತಾದರೂ, ಮೈಸೂರಿನ ಪ್ರಥಮ ಪ್ರಜೆಯಾದ ತಮಗೆ ಆಹ್ವಾನವಿರಲಿಲ್ಲ ಎಂದರು.

ಸಂಜೆ 5.45 ಗಂಟೆ ವೇಳೆಗೆ ಸಚಿವರು ತಮ್ಮ ಆಪ್ತ ಸಹಾಯಕರ ಮೂಲಕ ಫೋನ್ ಮಾಡಿಸಿ ನನ್ನನ್ನು ಕರೆಸಿಕೊಂಡರಾದರೂ, ಅಲ್ಲಿ ರಿಜಿಸ್ಟರ್‌ಗೆ ಎಲ್ಲರ ಸಹಿ ಪಡೆಯಲಾಯಿತಾದರೂ, ನನ್ನನ್ನು ಸಹಿ ಹಾಕಿ ಎಂದು ಕೇಳದೆ ನಾಮಕಾವಸ್ಥೆಗೆ ಕರೆದು ಮೇಯರ್ ಸ್ಥಾನಕ್ಕೇ ಅವಮಾನ ಮಾಡಲಾಯಿತು ಎಂದು ಅಸಮಾಧಾನ ಹೊರ ಹಾಕಿದರು.

ಆಷಾಢ ಶುಕ್ರವಾರಕ್ಕೆ ಚಾಮುಂಡಿಬೆಟ್ಟದಲ್ಲಿನ ಸ್ವಚ್ಛತೆ, ಕುಡಿಯುವ ನೀರು, ಪ್ಲಾಸ್ಟಿಕ್ ಬಳಕೆ ನಿಷೇಧದಂತಹ ಸೌಲಭ್ಯ ಕಲ್ಪಿಸುವವರು ಪಾಲಿಕೆಯವರು, ಯಾವುದೇ ತೊಂದರೆಯಾದರೂ ಸ್ಪಂದಿಸಲು ಪಾಲಿಕೆ ಬೇಕು. ಆದರೆ ಆ ಸಂಬಂಧದ ಸಭೆಗೆ ಮೇಯರ್ ಆಹ್ವಾನಿಸಬೇಕೆಂಬ ಕನಿಷ್ಠ ಜವಾಬ್ದಾರಿಯೂ ಜಿಲ್ಲಾಡಳಿತಕ್ಕಿರಲಿಲ್ಲ ಎಂಬುದು ಬೇಸರ ತಂದಿದೆ ಎಂದು ಮೇಯರ್ ಸುನಂದಾ ಪಾಲನೇತ್ರ ತಿಳಿಸಿದರು.

## ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜು.5ರಂದು ಪಡಿತರ ವಿತರಕರ ಪ್ರತಿಭಟನೆ

ಮೈಸೂರು,ಜೂ.28(ಆರ್‌ಕೆಬಿ)– ಸರ್ಕಾರಿ ಪಡಿತರ ವಿತರಕರ ಸಮಸ್ಯೆ ಬಗೆಹರಿಸಬೇಕು ಎಂಬ ಬೇಡಿಕೆ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘದ ಆಶ್ರಯದಲ್ಲಿ ಜು.5ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಟಿ.ಕೃಷ್ಣಪ್ಪ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯದ ವರದಿ ಆಧರಿಸಿ ಪ್ರತೀ ಕ್ವಿಂಟಾಲ್‌ಗೆ 440 ರೂ. ಕಮಿಷನ್ ಶಿಫಾರಸು ಮುಂದೂಡಿರುವುದನ್ನು ವಿರೋಧಿಸಿ ಹಾಗೂ ಪ್ರತೀ ಕ್ವಿಂಟಾಲ್‌ಗೆ 440 ರೂ. ಕಮಿಷನ್ ನೀಡಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಇಟ್ಟುಕೊಂಡು ಪ್ರತಿಭಟನೆ ನಡೆಸಲಾಗುತ್ತದೆ ಎಂದರು.

ಅಕ್ಕಿ, ಗೋಧಿ, ಸಕ್ಕರೆಯಂತಹ ಆಹಾರ ಪದಾರ್ಥಗಳ ಜೊತೆಗೆ ತೈಲ, ಬೇಳೆ, ಸಕ್ಕರೆ ಹಾಗೂ ದಿನನಿತ್ಯದ ಆಹಾರ ಪದಾರ್ಥಗಳ ಮಾರಾಟಕ್ಕೂ ಅನುಮತಿ ನೀಡಬೇಕು. ಆಹಾರ ಪದಾರ್ಥಗಳನ್ನು ಸೆಣಬಿನ ಚೀಲದಲ್ಲೇ ನೀಡಬೇಕು. ಪ್ಲಾಸ್ಟಿಕ್ ಚೀಲ ಬಳಕೆ ಮಾಡಬಾರದು ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸುವುದಾಗಿ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಗೋಪಾಲ್, ಶಿವರಾಜು, ರಾಜು, ರವಿಕುಮಾರ್ ಉಪಸ್ಥಿತರಿದ್ದರು.

## ಪೌರಕಾರ್ಮಿಕರ ಸಂಘದ ನಗರ ಪದಾಧಿಕಾರಿಗಳ ಆಯ್ಕೆ

**ಮೈಸೂರು:** ರಾಜ್ಯ ಪೌರಕಾರ್ಮಿಕರ ಸಂಘದ ನಗರ ಘಟಕದ ಪದಾಧಿಕಾರಿಗಳಾಗಿ ಪಳನಿ–ಅಧ್ಯಕ್ಷ, ಕುಮಾರಸ್ವಾಮಿ–ಕಾರ್ಯಾಧ್ಯಕ್ಷ, ಶೇಖರ್–ಉಪಾಧ್ಯಕ್ಷ, ಮಂಜು–ಪ್ರಧಾನ ಕಾರ್ಯದರ್ಶಿ, ಸೋಮಯ್ಯ ಕಾರ್ಯದರ್ಶಿ, ಕುಮಾರ–ಜಂಟಿ ಕಾರ್ಯದರ್ಶಿ, ಕುದುರೆಮಾಳ ಕುಮಾರ–ಸಹ ಕಾರ್ಯದರ್ಶಿ, ಮಹದೇವ– ಖಜಾಂಚಿ, ರಂಜಿತ್–ಮಾಧ್ಯಮ ಪ್ರತಿನಿಧಿ, ಮುರುಗೇಶ್–ಸಂಘಟನಾ ಕಾರ್ಯದರ್ಶಿ, ಗಣೇಶ–ನಿರ್ದೇಶಕ, ಮಾದೇವ, ಸುಬ್ರಹ್ಮಣ್ಯ, ಮಹದೇವ, ಮಾದೇವ, ಆರ್ಮುಗಂ ಸದಸ್ಯರು ಆಯ್ಕೆಯಾಗಿದ್ದಾರೆ.

## ಭಾವನಾಗೆ ಪಿಎಚ್.ಡಿ



**ಮೈಸೂರು:** ಡಾ.ಕುಮುದಿನಿ ಅಚ್ಚಿ ಮಾರ್ಗದರ್ಶನದಲ್ಲಿ ವಿ.ಭಾವನಾ ಸಮಾಜ ಕಾರ್ಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

# ನಾಳೆ ವಿಶೇಷಚೇತನ ನಿರುದ್ಯೋಗಿಗಳಿಗಾಗಿ ರಾಜ್ಯ ಮಟ್ಟದ ಉದ್ಯೋಗ ಮೇಳ

ಮೈಸೂರು, ಜೂ.28(ಆರ್‌ಕೆಬಿ)– ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯ ಕರ್ಜನ್ ಪಾರ್ಕ್‌ನ ಡಾ.ಎಂ.ಹೆಚ್.ಮರಿಗೌಡ ಸಭಾಂಗಣದಲ್ಲಿ ಜೂ.30ರಂದು ಯುವ ವಿಕಲ ಚೇತನರಿಗೆ ರಾಜ್ಯ ಮಟ್ಟದ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಸಮರ್ಥನಂ ಸಂಸ್ಥೆಯ ಕೌಶಲ್ಯ ವಿಭಾಗದ ಮುಖ್ಯಸ್ಥ ಕೆ.ಎನ್. ಚಂದ್ರಶೇಖರ್ ತಿಳಿಸಿದರು.




ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಉದ್ಯೋಗ ಮೇಳ ನಡೆಯಲಿದೆ. ಸುಮಾರು 300ರಿಂದ 400 ಉದ್ಯೋಗಾಕಾಂಕ್ಷಿಗಳು ಭಾಗವಹಿಸುವ ನಿರೀಕ್ಷೆ ಇದೆ. ಬಿಪಿಒ, ರೀಟೇಲ್, ಐಟಿ ಹಾಗೂ ಬ್ಯಾಂಕಿಂಗ್ ವಿಭಾಗ ಸೇರಿದಂತೆ ವಿವಿಧ 20 ಕಂಪನಿಗಳು ಇದರಲ್ಲಿ ಭಾಗವಹಿಸುತ್ತಿವೆ ಎಂದರು. ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮಾ ಮತ್ತು ಯಾವುದೇ ವಿದ್ಯಾರ್ಹತೆ ಹೊಂದಿರುವ 18ರಿಂದ 35 ವರ್ಷದೊಳಗಿನ ವಿಶೇಷಚೇತನರು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದರು. ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ ಎಂ.ಶಿವರಾಜ್–6364867818, ಸುಭಾಷ್–9449864693, ವೀರಭದ್ರ–9480812121 ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಉದ್ಯೋಗ ನಿಯೋಜನಾಧಿಕಾರಿ ವೀರಭದ್ರ ಪಾಟೀಲ್, ಮೈಸೂರು ವಿಭಾಗದ ಸಂಚಾಲಕ ಎಂ.ಶಿವರಾಜ್, ಜವರೇಗೌಡ ಉಪಸ್ಥಿತರಿದ್ದರು.

## ಜೂ.30, ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಜೂ. 28–ನಗರದ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜೂ.30ರಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಏರ್ಪಡಿಸಿದೆ. ಕ್ಯಾನ್ಸರ್ ಪತ್ತೆಯಾದ ರೋಗಿಗಳಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲಾಗುವುದು. ಬೆಳಗ್ಗೆ 10ರಿಂದ ಸಂಜೆ 8ರವರೆಗೆ ಶಿಬಿರ ನಡೆಯಲಿದೆ. ಹೆಚ್ಚಿನ ಈ ಮಾಹಿತಿಗೆ ದೂ. 0821– 4259259 ಸಂಪರ್ಕಿಸಬಹುದು.

# ಟೌನ್‌ಹಾಲ್ ಆವರಣದ ಪಾರಂಪರಿಕ ಶೌಚಾಲಯ ಆ.15ರೊಳಗೆ ಸಾರ್ವಜನಿಕರ ಬಳಕೆಗೆ ಮುಕ್ತ





ಮೈಸೂರು, ಜೂ.28(ಆರ್‌ಕೆ)–ಪುರಭವನ ಆವರಣದಲ್ಲಿ ನಿರ್ಮಾಣಗೊಂಡಿರುವ ಹೈಟೆಕ್ ಪಾರಂಪರಿಕ ಶೌಚಾಲಯ ಆಗಸ್ಟ್ 15ರೊಳಗೆ ಸಾರ್ವಜನಿಕರ ಬಳಕೆಗೆ ಮುಕ್ತಗೊಳ್ಳಲಿದೆ. ನಮ್ಮ ಮೈಸೂರು ಫೌಂಡೇಷನ್ (NMF) ಸಂಸ್ಥೆಯು 1.4 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸುತ್ತಿರುವ ಪಾರಂಪರಿಕ ವಿನ್ಯಾಸದ ಈ ಶೌಚಾಲಯ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ಫೌಂಡೇಷನ್ ಮುಖ್ಯಸ್ಥ ದಶರಥ ತಿಳಿಸಿದ್ದಾರೆ.

ಪುರಭವನದ ಆವರಣದ ಪಶ್ಚಿಮ ಭಾಗ (ಗಾಂಧಿ ಸ್ಕ್ವೇರ್ ಕಡೆ) 40X60 ಅಡಿ ಅಳತೆ ಜಾಗದಲ್ಲಿ ಶೌಚಾಲಯ ನಿರ್ಮಿಸಲು ಮೈಸೂರು ಮಹಾನಗರ ಪಾಲಿಕೆಯು ಅನುಮತಿ ನೀಡಿ, ಪಾರಂಪರಿಕ ಶೈಲಿಯ ನಕ್ಷೆ ವಿನ್ಯಾಸಕ್ಕೂ ಅನುಮೋದನೆ ನೀಡಲಾಗಿತ್ತು. ಪಾಲಿಕೆಯಿಂದ ಯಾವುದೇ ಅನುದಾನ ಪಡೆಯದೇ ನಮ್ಮ ಮೈಸೂರು ಫೌಂಡೇಷನ್‌ನಿಂದಲೇ ನಿರ್ಮಿಸುತ್ತಿರುವ ಶೌಚಾಲಯವನ್ನು 5 ವರ್ಷಗಳ ಕಾಲ ನಿರ್ವಹಣೆ ಮಾಡಿ ನಂತರ ಯಥಾವತ್ತಾಗಿ ಪಾಲಿಕೆಗೆ ಬಿಟ್ಟುಕೊಡಬೇಕೆಂಬ ಷರತ್ತಿನೊಂದಿಗೆ ಜಾಗ ನೀಡಿ ಯೋಜನೆಗೆ ಅನುಮೋದನೆ ನೀಡಲಾಗಿದೆ. ಕಟ್ಟಡದಲ್ಲಿ ಮಹಿಳೆಯರು, ಪುರುಷರು, ಅಂಗವಿಕಲರಿಗೆ ಪ್ರತ್ಯೇಕ ವ್ಯವಸ್ಥೆ, ತಾಯಂದಿರು–ಮಕ್ಕಳಿಗೆ ಹಾಲುಣಿಸಲು ವಿಶೇಷ ಕೊಠಡಿ, ಸ್ಟೋರ್ ರೂಂ, ಜನರೇಟರ್ ಕೊಠಡಿ, ನೀರಿನ ಸಂಪ್‌ಗಳು ಬರಲಿದ್ದು, ಈ ಶೌಚಾಲಯವು ಪ್ರಥಮ ಪ್ರಯೋಗವಾಗಲಿದೆ ಎಂದು ದಶರಥ ನುಡಿದರು.

## ಪುರುಷೋತ್ತಮ ನಾಯಕ್‌ಗೆ ಡಿ.ವಿ.ಹಾಲಮನಿ ಪ್ರಶಸ್ತಿ



ಮೈಸೂರು,ಜೂ.28(ಎಸ್‌ಪಿಎನ್)–ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಧಾರವಾಡದ ಬೆಲ್ಲದ ಶಿಕ್ಷಣ ಮತ್ತು ಕೃಷಿ ಪ್ರತಿಷ್ಠಾನದ ಸಹಯೋಗದೊಂದಿಗೆ ಪ್ರತಿ ವರ್ಷ ಕೊಡಮಾಡುವ 2021ನೇ ಸಾಲಿನ ಕಲಾ ಗುರು ಡಿ.ವಿ.ಹಾಲಭಾವಿ ಪ್ರಶಸ್ತಿಗೆ ಪುರುಷೋತ್ತಮ ನಾಯಕ್ ಆಯ್ಕೆಯಾಗಿದ್ದಾರೆ. ಡಿ.ವಿ.ಹಾಲಭಾವಿಯವರ ಹೆಸರಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಕೃಷಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪುರುಷೋತ್ತಮ ನಾಯಕ್ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ಇವರು ಕೆ.ವಿಠ್ಠಲದಾಸ್ ನಾಯಕ್ ಮತ್ತು ಕೆ.ಮೀರಾ ನಾಯಕ್ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೂ ಕಲೆಯ ಬಗ್ಗೆ ಆಸಕ್ತಿ ಬೆಳಸಿಕೊಂಡು ಮಂಗಳೂರಿನ ಮಹಾಲಸ ಸ್ಕೂಲ್ ಆಫ್ ಆರ್ಟ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದಾರೆ.

ಇವರು ಬಾದಾಮಿ, ಪಟ್ಟದಕಲ್ಲು, ಧರ್ಮಸ್ಥಳ, ಮೈಸೂರು, ಮೂಡಬಿದ್ರೆ ಮತ್ತು ಮಂಗಳೂರು ಮುಂತಾದೆಡೆ ನಡೆದ ರಾಜ್ಯ ಮತ್ತು ರಾಷ್ಟ್ರಮಟ್ಟದ ಚಿತ್ರಕಲಾ ಶಿಬಿರಗಳಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದಾರೆ. ಕಿನ್ನಾಳ, ಗಂಜೀಫಾ ಮತ್ತು ಕಲಾಂಕಾರಿ ಶೈಲಿಯ ದೇಶಿಯ ವರ್ಣಚಿತ್ರಕ್ಕೆ ಸಂಬಂಧಿಸಿದ ಅನೇಕ ಕಾರ್ಯಾಗಾರಗಳನ್ನು ರಾಜ್ಯಾದ್ಯಂತ ಆಯೋಜಿಸಿದ್ದಾರೆ. ಇವರ ಕಲಾಸೇವೆಯನ್ನು ಗುರುತಿಸಿ 2021ನೇ ಸಾಲಿನ ಕಲಾಗುರು ಡಿ.ವಿ.ಹಾಲಭಾವಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಈ ಪ್ರಶಸ್ತಿಯು ಸ್ವಸ್ತಿವಾಚನ, ಪ್ರಶಸ್ತಿ ಫಲಕ ಮತ್ತು ನಗದು ಪುರಸ್ಕಾರವನ್ನು ಒಳಗೊಂಡಿರುತ್ತದೆ.

## ಬಹುಭಾಷಾ ನಟಿ ಮೀನಾ ಪತಿ ವಿದ್ಯಾಸಾಗರ್ ವಿಧಿವಶ




ಚೆನ್ನೈ, ಜೂ.28– ಬಹುಭಾಷಾ ನಟಿ ಮೀನಾ ಪತಿ ವಿದ್ಯಾ ಸಾಗರ್ ವಿಧಿವಶರಾಗಿದ್ದಾರೆ. ಅನಾರೋಗ್ಯದ ಹಿನ್ನಲೆಯಲ್ಲಿ ಚೆನ್ನೈನ ಖಾಸಗಿ ಆಸ್ಪತ್ರೆಗೆ ಅವರು ದಾಖಲಾಗಿದ್ದರು.

ಮಂಗಳವಾರ ರಾತ್ರಿ ಮೀನಾ ಪತಿ ವಿದ್ಯಾ ಸಾಗರ್ ನಿಧನ ಹೊಂದಿದ್ದಾರೆ. ಶ್ವಾಸಕೋಶದ ಸೋಂಕಿನಿಂದ ಅವರು ಬಳಲುತ್ತಿದ್ದರು, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಟ್ವಿಟರ್‌ನಲ್ಲಿ ಹಲವಾರು ಗಣ್ಯರು ಮೀನಾಗೆ ಸಂತಾಪ ಸೂಚಿಸುತ್ತಿದ್ದಾರೆ. ಕನ್ನಡ ಸೇರಿದಂತೆ ವಿವಿಧ ಭಾಷೆಗಳಲ್ಲಿ ನಟಿಸಿರುವ ಮೀನಾ ಬೆಂಗಳೂರು ಮೂಲದ ವಿದ್ಯಾ ಸಾಗರ್ ವಿವಾಹವಾಗಿದ್ದರು. ದಂಪತಿಗೆ ನೈನಿಕಾ ಎಂಬ ಮಗಳಿದ್ದಾಳೆ.

ವಿದ್ಯಾ ಸಾಗರ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ವಿವಾಹದ ಬಳಿಕ ವಿದ್ಯಾ ಸಾಗರ್ ಮತ್ತು ಮೀನಾ ಚೆನ್ನೈನಲ್ಲಿ ವಾಸ್ತವ್ಯ ಹೂಡಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

29.06.2022 ಬುಧವಾರ, ಮಳೆ ನಕ್ಷತ್ರ : ಆರಿದ್ರ್ 22.06.2022 ರಿಂದ 05.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ
ತಿಥಿ: ಅಮಾವಾಸ್ಯೆ, ನಕ್ಷತ್ರ : ಆರಿದ್ರ್, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಕರ್ನಾಟಕ ರಾಜ್ಯ ಅನಿಕೇತನ ಸಾಂಸ್ಕೃತಿಕ ವೇದಿಕೆ :** ರಾಜ್ಯ ಮಟ್ಟದ ವಿಚಾರ ಸಂಕಿರಣ, ಕವಿಗೋಷ್ಠಿ ಹಾಗೂ ರಾಜ್ಯ ಅನಿಕೇತನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಖ್ಯಾತ ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ, ವಿಷಯ ಮಂಡನೆ : ವಿಮರ್ಶಕ ಪ್ರೊ ಎನ್. ಬೋರಲಿಂಗಯ್ಯ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಮುಖ್ಯ ಅತಿಥಿಗಳು : ಕಾಲೇಜು ಪ್ರಿನ್ಸಿಪಾಲ್ ಡಾ. ಬಿ.ಆರ್. ಜಯಕುಮಾರಿ, ಕರ್ನಾಟಕ ರಾಜ್ಯ ಅನಿಕೇತನ ಸಾಂಸ್ಕೃತಿಕ ವೇದಿಕೆ ರಾಜ್ಯಾಧ್ಯಕ್ಷ ಕೆ. ಮುನಿಕೃಷ್ಣಪ್ಪ, ಸ್ಥಳ : ವಿವೇಕಾನಂದ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10 ರಿಂದ.

■ **ರೋಟರಿ ಮೈಸೂರು ಉತ್ತರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಕನ್ನಡದ ಕಣ್ಮಣಿ 'ಮೆನ್ನಾ ಸದಸ್ಯ' ರಿಷಿ ಶಿವಪ್ರಸನ್ನ ಅವರೊಂದಿಗೆ ಸಂವಾದ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ರೋಟರಿ ಜಿಲ್ಲಾ ಗವರ್ನರ್ ಎ.ಆರ್. ರವೀಂದ್ರ ಭಟ್, ಅಧ್ಯಕ್ಷತೆ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ಎಲ್. ಚನ್ನಬಸವರಾಜು, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತ್ ಕುಮಾರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್. ಚೆನ್ನಪ್ಪ, ರೋಟರಿ ಮೈಸೂರು ಉತ್ತರ ನಿರ್ದೇಶಕ ಬಿ. ರಾಮಾರಾಧ್ಯ, ಸ್ಥಳ: ಕರ್ನಾಟಕ ಕಲಾಮಂದಿರ, ವಿನೋಬ ರಸ್ತೆ, ಮಧ್ಯಾಹ್ನ 3ಕ್ಕೆ.

■ **ಯುವರಾಜ ಕಾಲೇಜು:** ಯುರೇಕಾ–2022, ಸಾಂಸ್ಕೃತಿಕ ಸಂಜೆ, ಸ್ಥಳ: ಮಾನಸಗಂಗೋತ್ರಿ ಬಯಲು ರಂಗ ಮಂದಿರ, ಸಂಜೆ 5.30ಕ್ಕೆ.

■ **ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ :** ಚಾಮುಂಡಿಬೆಟ್ಟದ 1101 ಮೆಟ್ಟಿಲುಗಳ ಸ್ವಚ್ಛತಾ ಕಾರ್ಯಕ್ರಮ, ಚಾಲನೆ : ಸಾಹಿತಿ ಬನ್ನೂರು ಕೆ. ರಾಜು, ಮಾಜಿ ಉಪಮೇಯರ್ ಸಿದ್ದರಾಜು, ಸ್ಥಳ: ಚಾಮುಂಡಿಬೆಟ್ಟದ ಪಾದದ ಬಳಿ, ಬೆಳಗ್ಗೆ 6.30ಕ್ಕೆ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಪಿ. ಸುರಭಿ, ಡಾ. ಪ್ರದೀಪ್ ಕುಮಾರ್ ಹೆಬ್ರಿ, 7.15 ಭಾವಗೀತೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ–ಬಾನುಲಿ ಸರಣಿ, 10.00 ಹಿಂದೂಸ್ಥಾನಿ ಸಂಗೀತ–ಪಂಡಿತ್ ವಿಶ್ವ ಮೋಹನ್ ಭಟ್–ಗಿಟಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ವೆಂಕಟೇಶ್ ಗೋಡ್ ಕಿಂಡಿ, ವೃಂದಗಾನ, 12.45 ಲಾಕ್‌ಡೌನ್ ಕಥಾ ನಾಟಕ, ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ 'ಹಸಿವು', ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ್, 1.20ಭಾವಗೀತೆ– ಆರ್.ಕೆ. ಪ್ರಸಾದ್, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ, ಪರಿಕಲ್ಪನೆ ಮತ್ತು ಪ್ರಸ್ತುತಿ ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ಹಿಮಾಲಯದ ತಪ್ಪಲಿನಲ್ಲಿ ಸೈಕಲ್ ಸವಾರಿ ಮೂಡಿ ಬಂದ ವೀಣಾ ದೀಪಕ್ ಹಾಗೂ ಯಶೋದಾ ಅವರೊಂದಿಗೆ ಮಾತುಕತೆ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.50 ಕೃಷಿರಂಗ–ಕಿಸಾನ್‌ವಾಣಿ, 9.05 ಕ್ಷಿತಿಜ-Literacy ಗುರು –ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.00 ಹಳ್ಳೀಹಾಡು– ಭಾಗವಹಿಸುವವರು ಯಳಂದೂರು ತಾಲ್ಲೂಕ್ ಹೊನ್ನೂರಿನ ಜವರಯ್ಯ ಮತ್ತು ತಂಡ, ಪ್ರಸ್ತುತಿ– ಅಬ್ದುಲ್ ರಶೀದ್

## ರಾಷ್ಟ್ರಪತಿ ಚುನಾವಣೆ: ಜುಲೈ 3 ರಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆದ ಸಿದ್ದರಾಮಯ್ಯ



ಬೆಂಗಳೂರು, ಜೂ.28– ರಾಷ್ಟ್ರಪತಿ ಚುನಾವಣೆಗೆ ಇನ್ನೇನು ಕೆಲವೇ ದಿನಗಳು ಬಾಕಿ ಉಳಿದಿವೆ. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆದಿದ್ದಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಜುಲೈ 3ರಂದು ಬೆಳಗ್ಗೆ 11 ಗಂಟೆಗೆ ಶಾಸಕಾಂಗ ಪಕ್ಷದ ಸಭೆ ಆಯೋಜನೆಗೊಂಡಿದೆ. ಖಾಸಗಿ ಹೋಟೇಲ್‌ನಲ್ಲಿ ನಡೆಯಲಿರುವ ಈ ಸಭೆಯಲ್ಲಿ ಜುಲೈ 18 ರಂದು ರಾಷ್ಟ್ರಪತಿ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಮುಂಬರುವ ರಾಷ್ಟ್ರಪತಿ ಹುದ್ದೆಗೆ ಯಶವಂತ್ ಸಿನ್ಹಾ ಅವರು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಜುಲೈ 3ರಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ಕಡ್ಡಾಯವಾಗಿ ಶಾಸಕರು, ಪರಿಷತ್ ಸದಸ್ಯರು ಹಾಜರಿರುವಂತೆ ಸೂಚನೆ ನೀಡಲಾಗಿದೆ. ಈ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಬಿ.ಕೆ.ಹರಿಪ್ರಸಾದ್, ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಶಾಸಕಾಂಗ ಪಕ್ಷದ ಉಪ ನಾಯಕರಾದ ಯು.ಟಿ.ಖಾದರ್, ವಿಧಾನಪರಿಷತ್ತಿನ ವಿರೋಧ ಪಕ್ಷದ ಉಪ ನಾಯಕರಾದ ಕೆ.ಗೋವಿಂದರಾಜ್, ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷರಾದ ಎಂ.ಬಿ.ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷರು ಭಾಗಿಯಾಗಲಿದ್ದಾರೆ.

## ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.28– ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ 2022–23 ನೇ ಸಾಲಿನ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕೆ ಎಸ್ಸೆಸ್ಸೆಲ್ಸಿ ಪಾಸಾದ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸೀಮಿತ ಸಂಖ್ಯೆ ಸೀಟುಗಳು ಮಾತ್ರ ಲಭ್ಯವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ.

**ಕೋರ್ಸ್‌ಗಳ ವಿವರಗಳು:** diploma in tool and diemaking, precission manufacturing ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ:155267 ಅಥವಾ ವೆಬ್‌ಸೈಟ್ www.gttc.karnataka.gov.in ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚಾಮುಂಡಿಬೆಟ್ಟದ ದೇವಿಕೆರೆ, ಹಿರೇಕೆರೆ ಅಭಿವೃದ್ಧಿಗೆ ಗುದ್ದಲಿ ಪೂಜೆ

### ದೇವಿಕೆರೆ ಪಾವಿತ್ರ್ಯತೆ ಸಾರಿದ ಶಾಸಕದ್ವಯರು



ಮೈಸೂರು, ಜೂ.28(ಎಂಟಿವೈ)– ಚಾಮುಂಡಿಬೆಟ್ಟದ ದೇವಿಕೆರೆ ಮತ್ತು ಹಿರೇಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಮಂಗಳವಾರ ಬೆಳಗ್ಗೆ ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ಎಸ್.ಎ.ರಾಮದಾಸ್ ಅವರು ಗುದ್ದಲಿ ಪೂಜೆ ನೆರವೇರಿಸಿದರು.

ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಆಗಮಿಕ ಡಾ.ಶಶಿಶೇಖರ್ ದೀಕ್ಷಿತ್ ಅವರು ಶಾಸ್ತ್ರೋಕ್ತವಾಗಿ ವಿಧಿ–ವಿಧಾನ ನೆರವೇರಿಸಿದ ಬಳಿಕ ಉಭಯ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

**ಎಚ್ಚರಿಕೆಯಿಂದ ಕೆಲಸ ಮಾಡಿ:** ಇದೇ ವೇಳೆ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ದೇವಿಕೆರೆಯಿಂದ ಚಾಮುಂಡೇಶ್ವರಿ ದೇವಾಲಯದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ಕೆ ನಿತ್ಯ ನೀರನ್ನು ತೆಗೆದುಕೊಂಡು ಹೋಗುವ ಪದ್ಧತಿ ಮೊದಲಿನಿಂದಲೂ ಇದೆ. ಈ ಹಿನ್ನೆಲೆಯಲ್ಲಿ ದೇವಿಕೆರೆ ಹೆಚ್ಚಿನ ಮಹತ್ವ ಪಡೆದುಕೊಂಡಿದೆ. ಅದರ ಪಾವಿತ್ರ್ಯತೆ ಕಾಪಾಡಿಕೊಂಡು ಕೆರೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಅಭಿವೃದ್ಧಿ ಮಾಡಿದ ನಂತರ ಯಾವುದೇ ಕಾರಣಕ್ಕೂ ಕಲುಷಿತ ನೀರು ಕೆರೆ ಸೇರದಂತೆ ಎಚ್ಚರ ವಹಿಸಬೇಕು. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡುವುದರೊಂದಿಗೆ ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

**ಬೆಟ್ಟಕ್ಕೆ ಮೆರಗು:** ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಚಾಮುಂಡಿಬೆಟ್ಟದ ದೇವಿಕೆರೆ ಪುರಾಣ ಪ್ರಸಿದ್ಧ ಕೆರೆಯಾಗಿದೆ. ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಲು ಪ್ರತಿದಿನ ದೇವಿಕೆರೆಯಿಂದ ನೀರನ್ನು ತೆಗೆದುಕೊಂಡು ಹೋಗುವ ಪದ್ಧತಿ ಇಂದಿಗೂ ಅನುಸರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಧಾರ್ಮಿಕ ಪರಂಪರೆಯಲ್ಲೂ ದೇವಿಕೆರೆಯ ಮಹತ್ವವಿದೆ. ಇದರೊಂದಿಗೆ ಬೆಟ್ಟದಲ್ಲಿರುವ ಹಿರೇಕೆರೆಯನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವತಿಯಿಂದ ಕಾಮಗಾರಿ ನಡೆಸಲಾಗುತ್ತಿದೆ ಎಂದರು.

ದೇವಿಕೆರೆಯಲ್ಲಿ ತುಂಬಿರುವ ಹೂಳು ತೆಗೆದು, ಮೆಟ್ಟಿಲುಗಳನ್ನು ಸುಭದ್ರವಾಗಿ ಜೋಡಣೆ ಮಾಡಲಾಗುತ್ತದೆ. ಕೆರೆಗೆ ಇನ್ನೆಂದೂ ಕಲುಷಿತ ನೀರು ಸೇರದಂತೆ ಅಭಿವೃದ್ಧಿ ಕಾಮಗಾರಿ ನಡೆಸಲಾಗುತ್ತದೆ. ಹೂಳೆತ್ತುವುದರಿಂದ ಅಂತರ್ಜಲದಿಂದ ಕೆರೆ ತುಂಬುವ ವ್ಯವಸ್ಥೆ ಮಾಡಲಾಗುತ್ತದೆ. ಚಾಮುಂಡೇಶ್ವರಿ ದೇವಾಲಯಕ್ಕೆ ಕೆರೆಯಿಂದ ನೀರನ್ನು ಕೊಂಡೊಯ್ಯುವ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ಅಲ್ಲದೆ ರಸ್ತೆಯಲ್ಲಿ ರೇಲಿಂಗ್ಸ್ ಅಳವಡಿಸುವ ಮೂಲಕ ಹಿರಿಯ ನಾಗರಿಕರು ದೇವಾಲಯದತ್ತ ಸುಗಮವಾಗಿ ಸಾಗುವಂತೆ ರಸ್ತೆಯನ್ನು ಮಾರ್ಪಡಿಸಲಾಗುತ್ತದೆ ಎಂದು ತಿಳಿಸಿದರು.

ಚಾಮುಂಡಿಬೆಟ್ಟದುದ್ದಕ್ಕೂ ನೂರಕ್ಕೂ ಹೆಚ್ಚು ಸಣ್ಣ ಸಣ್ಣ ಕೊಳಗಳಿರುವುದು ನಕ್ಷೆಯಲ್ಲಿ ಪತ್ತೆಯಾಗಿದೆ. ಅವುಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು. ಬೆಟ್ಟದಲ್ಲಿರುವ ಕೆರೆ ಮತ್ತು ಕೊಳಗಳ ಅಭಿವೃದ್ಧಿಗೆ ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ 7.5 ಕೋಟಿ ರೂ. ಬಿಡುಗಡೆ ಮಾಡಿದ್ದರು. ಆ ಅನುದಾನದಲ್ಲಿ ಈಗ ಕಾಮಗಾರಿ ಆರಂಭಿಸಲಾಗಿದೆ.

**ಭಕ್ತರಿಂದ ಶ್ರಮದಾನ ಸೇವೆ:** ಆಷಾಢ ಮಾಸದ ಎರಡನೆಯ ಶುಕ್ರವಾರ (ಜು.8) ದೇವಿಯ ದರ್ಶನ ಪಡೆಯಲು ಬರುವ ಭಕ್ತರು 1 ಗಂಟೆ ಸ್ವಚ್ಛತಾ ಸೇವೆ ಮಾಡುವಂತೆ ಕೋರುತ್ತೇನೆ. ಈಗಾಗಲೇ ನೂರಾರು ಭಕ್ತರು ಅಂದು ಬೆಟ್ಟದಲ್ಲಿ ಸ್ವಚ್ಛತಾ ಅಭಿಯಾನ ನಡೆಸಲು ಮುಂದೆ ಬಂದಿದ್ದಾರೆ. ಇವರೊಂದಿಗೆ ಭಕ್ತರು ಕೈಜೋಡಿಸಿದರೆ, ಬೆಟ್ಟದ ಪರಿಸರಕ್ಕೆ ಮಾರಕವಾಗಿರುವ ಪ್ಲಾಸ್ಟಿಕ್ ಸೇರಿದಂತೆ ನಿರುಪಯುಕ್ತ ವಸ್ತುಗಳನ್ನು ತೆರವುಗೊಳಿಸಿ ಬೆಟ್ಟದ ಪರಿಸರವನ್ನು ಕಾಪಾಡುವುದರೊಂದಿಗೆ ಬೆಟ್ಟದಲ್ಲಿ ನೆಲೆಸಿರುವ ಪ್ರಾಣಿ–ಪಕ್ಷಿ ಸಂಕುಲದ ಉಳಿವಿಗೆ ಕೈಗೂಡಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಚಾಮುಂಡಿಬೆಟ್ಟ ಗ್ರಾ.ಪಂ ಅಧ್ಯಕ್ಷ ಕೆ.ಭರತ್ ಕಾಳಯ್ಯ, ಮುಜರಾಯಿ ತಹಶೀಲ್ದಾರ್ ಕೃಷ್ಣ, ಮುಖಂಡ ನವಿಲು ನಾಗರಾಜು, ಗ್ರಾಪಂ ಸದಸ್ಯರು, ಗ್ರಾಮದ ಮುಖಂಡರು, ದೇವಾಲಯದ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು ಹಾಗೂ ಚಾಮುಂಡಿ ಬೆಟ್ಟದ ಗ್ರಾಮಸ್ಥರು ಉಪಸ್ಥಿತರಿದ್ದರು.

# ಫಾರ್ಮಸಿ ಕೋರ್ಸ್ ಮಾಡಿದವರಿಗೆ ಉದ್ಯೋಗ ಖಾತರಿ

**ಮೋಹನ್ ಕಾಯಕ**

ಮೈಸೂರು, ಜೂ.28– ವಿಶ್ವದಲ್ಲಿಯೇ ತಲ್ಲಣ ಸೃಷ್ಟಿಸಿದ ಕೊರೊನಾ ಸೋಂಕಿನಿಂದಾಗಿ ಡಿ–ಫಾರ್ಮಾ ಮತ್ತು ಬಿ–ಫಾರ್ಮಾ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಫಾರ್ಮಸಿ ಕೋರ್ಸ್‌ಗಳನ್ನು ಅಧ್ಯಯನ ಮಾಡಿದವರಿಗೆ ಉದ್ಯೋಗ ಪಕ್ಕಾ ಎನ್ನುವಂತಾಗಿದೆ.

ವಿಫುಲ ಅವಕಾಶಗಳಿರುವ ವೈದ್ಯಕೀಯ ಕೋರ್ಸ್‌ಗಳತ್ತಾ ವಿದ್ಯಾರ್ಥಿಗಳು ಮುಖ ಮಾಡಿದ್ದು, ಅದರಲ್ಲೂ ಫಾರ್ಮಸಿಸ್ಟ್ ಆಗುವತ್ತ ಗಮನ ಹರಿಸಿದ್ದಾರೆ. ಪ್ರವೇಶ ಪರೀಕ್ಷೆ ಇಲ್ಲದೆ ಕೋರ್ಸ್ ಮುಗಿಸಿ, ಕೆಲಸಕ್ಕೆ ಸೇರುವ ಅವಕಾಶದ ಜೊತೆಗೆ ಸ್ವಯಂ ಉದ್ಯೋಗಕ್ಕೂ ಫಾರ್ಮಸಿ ಅನುಕೂಲವಾಗಲಿದೆ.

ಫಾರ್ಮಸಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ವೈದ್ಯರಾಗದೆಯೇ ವೈದ್ಯಕೀಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಉದ್ಯೋಗ ಪಡೆಯಬೇಕು. ಒಂದಷ್ಟು ಸಾಧನೆ ಮಾಡಬೇಕು ಎನ್ನುವ ವಿದ್ಯಾರ್ಥಿಗಳು ಫಾರ್ಮಸಿ ಕೋರ್ಸ್‌ಗಳನ್ನು ಆಯ್ದುಕೊಳ್ಳಬಹುದಾಗಿದೆ. ಔಷಧ ಮಾರುಕಟ್ಟೆ ವಿಸ್ತಾರಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ವೃತ್ತಿಪರ ಫಾರ್ಮಾಸಿಸ್ಟ್‌ಗಳಿಗೆ ಔಷಧ ಕಂಪೆನಿಗಳು ಎದುರು ನೋಡುತ್ತಿವೆ.

**ಫಾರ್ಮಸಿ ಕೋರ್ಸ್‌ಗಳ ಬಗ್ಗೆ:** ದ್ವಿತೀಯ ಪಿಯುಸಿ(ಪಿಸಿಎಂಬಿ) ಆದ ಬಳಿಕ 4 ವರ್ಷಗಳ ಕೋರ್ಸ್ ಆಗಿರುವ ಬಿ–ಫಾರ್ಮಾ(ಬ್ಯಾಚುಲರ್ ಇನ್ ಫಾರ್ಮಸಿ) ಮಾಡಬಹುದು. ಇದು ನಾಲ್ಕು ವರ್ಷಗಳ ಅವಧಿಯ ಕೋರ್ಸ್ ಆಗಿದ್ದು, ಔಷಧ,



ಸಾಂದರ್ಭಿಕ ಚಿತ್ರ

ಫಾರ್ಮಾಸ್ಯುಟಿಕಲ್ ಇಂಜಿನಿಯರ್, ಮೆಡಿಸಿನಲ್ ಕೆಮಿಸ್ಟ್ರಿ, ಬಯೋಕೆಮಿಕಲ್ ಸೈನ್ಸ್ ಮತ್ತು ಹೆಲ್ತ್‌ಕೇರ್ ಮೊದಲಾದ ವಿಷಯಗಳನ್ನು ಅಧ್ಯಯನ ಮಾಡಬಹುದಾಗಿದೆ. ಆಲ್‌ಇಂಡಿಯಾ ಕೌನ್ಸಿಲ್ ಆಫ್ ಟೆಕ್ನಿಕಲ್ ಎಜುಕೇಶನ್(ಎಐಸಿಟಿಇ) ಮತ್ತು ಫಾರ್ಮಸಿ ಕೌನ್ಸಿಲ್ ಆಫ್ ಇಂಡಿಯಾ (ಪಿಸಿಐ) ಮಾನ್ಯತೆ ಪಡೆದಿರುವ ಕೋರ್ಸ್ ಇದಾಗಿದೆ. ಎರಡು ವರ್ಷದ ಡಿ–ಫಾರ್ಮಾ(ಡಿಪ್ಲೊಮಾ ಇನ್ ಫಾರ್ಮಾ) ಕೂಡ ಮಾಡಬಹುದಾಗಿದ್ದು, ಕೋರ್ಸ್ ಮುಗಿದ ಬಳಿಕ ಲ್ಯಾಟರಲ್ ಎಂಟ್ರಿ ಮೂಲಕ ನೇರವಾಗಿ ಬಿ–ಫಾರ್ಮಾ ಎರಡನೇ ವರ್ಷಕ್ಕೆ ಸೇರಿಕೊಳ್ಳಲು ಅವಕಾಶವಿದೆ. ಬಿ–ಫಾರ್ಮಾ ಮಾಡಿದವರು ಎಂ–ಫಾರ್ಮಾ (ಮಾಸ್ಟರ್ ಆಫ್ ಫಾರ್ಮಸಿ) ಮಾಡಬಹುದು. ಅಲ್ಲದೆ ಫಾರ್ಮಾ–ಡಿ (ಡಾಕ್ಟರೇಟ್ ಇನ್ ಫಾರ್ಮಸಿ) ಮಾಡಲು ಕೂಡ ಅವಕಾಶವಿದ್ದು, ಅಧ್ಯಯನ ಹೆಚ್ಚಾದಂತೆ ಬೇಡಿಕೆ ಮತ್ತು ಗಳಿಕೆಯ ಅವಕಾಶಗಳೂ ಅಧಿಕವಾಗುತ್ತವೆ.

**ವಿಫುಲ ಉದ್ಯೋಗಾವಕಾಶ:** ಫಾರ್ಮಸಿ ಶಿಕ್ಷಣ ಪಡೆದವರಿಗೆ ವಿಫುಲ ಉದ್ಯೋಗಾವಕಾಶಗಳಿದ್ದು, ಸರ್ಕಾರಿ ಆಸ್ಪತ್ರೆಗಳಿಗಿಂತಲೂ ಖಾಸಗಿ ಆಸ್ಪತ್ರೆಗಳಲ್ಲಿ ಅತ್ಯಧಿಕ ಬೇಡಿಕೆ ಇದೆ. ಔಷಧಿ ತಯಾರಿಕೆ, ಡ್ರಗ್ ಇನ್‌ಸ್ಪೆಕ್ಟರ್ ನಂತಹ ಹಲವು ಹುದ್ದೆಗಳ ಜೊತೆಗೆ ದೇಶ–ವಿದೇಶಗಳಲ್ಲಿ ಬೆಳೆಯುತ್ತಿರುವ ಫಾರ್ಮಾಸ್ಯುಟಿಕಲ್ ಕಂಪೆನಿಗಳಲ್ಲಿ ಫಾರ್ಮಾಸಿಸ್ಟ್ ಆಗಿ, ಉತ್ಪಾದನೆ, ಮಾರ್ಕೆಟಿಂಗ್ ವಿಭಾಗದಲ್ಲಿ ಹಾಗೂ ಖಾಸಗಿ ಮೆಡಿಕಲ್ ಸಂಸ್ಥೆಗಳಲ್ಲಿಯೂ ಕೆಲಸ ಮಾಡಬಹುದು.

ಬಿ–ಫಾರ್ಮಾ, ಡಿ–ಫಾರ್ಮಾ ಅಥವಾ ಫಾರ್ಮಸಿಯ ಇತರ ಕೋರ್ಸ್‌ಗಳನ್ನು ಮಾಡಿದವರಿಗೆ ಬೆಂಗಳೂರು, ಹೈದರಾಬಾದ್, ಪುಣೆ, ಗುಜರಾತ್ ಸೇರಿದಂತೆ ಹಲವೆಡೆ ಉತ್ತಮ ಬೇಡಿಕೆ ಇದೆ. ಸ್ಥಳೀಯವಾಗಿಯೂ ಉದ್ಯೋಗ ಪಡೆಯಬಹುದು. ದೊಡ್ಡ ಕಂಪೆನಿಗಳು ಉತ್ತಮ ವೇತನವನ್ನು ನೀಡುತ್ತಿದ್ದು, ವೃತ್ತಿ ಅನುಭವ ಪಡೆದ ನಂತರ ತಮ್ಮದೆ ಕಂಪನಿ ಆರಂಭಿಸಬಹುದು. ವಿದೇಶಗಳಲ್ಲಿಯೂ ಉದ್ಯೋಗಾವಕಾಶವಿದೆ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯ ಹೆಣ್ಣುಮಕ್ಕಳು ಕೂಡ ಫಾರ್ಮಸಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಕಾವೇರಿ ಕಾಲೇಜ್ ಆಫ್ ಫಾರ್ಮಸಿಯ ಪ್ರೊ.ಆರ್. ರವೀಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

**ಜನೌಷಧಿ ಕೇಂದ್ರಗಳ ಸ್ಥಾಪನೆಗೆ ಅನುಕೂಲ:** ಯಾರು ಬೇಕಾದರೂ ಜನೌಷಧಿ ಕೇಂದ್ರ ತೆರೆಯಲು ಅವಕಾಶವಿದೆ. ಆದರೆ ಫಾರ್ಮಸಿ ಅಧ್ಯಯನ ನಡೆಸಿದವರನ್ನು ಕೆಲಸಕ್ಕೆ ಸೇರಿಸಿಕೊಳ್ಳಬೇಕು. ಕೇಂದ್ರ ಸರ್ಕಾರದಿಂದ 5 ಲಕ್ಷ ರೂ., ಸಬ್ಸಿಡಿ ದೊರಕಲಿದ್ದು, ರಾಜ್ಯ ಸರ್ಕಾರದಿಂದ ಉಚಿತ ಮಳಿಗೆ ನೀಡಲಾಗುತ್ತದೆ. ಜನೌಷಧಿ ಕೇಂದ್ರದಲ್ಲಿ ನಡೆಯುವ ವ್ಯವಹಾರದಲ್ಲಿ ಶೇ.20ರಷ್ಟು ಲಾಭವಿರಲಿದೆ ಎಂದು ಹೇಳಿದರು.

> ಫಾರ್ಮಾ ಕೋರ್ಸ್‌ಗಳ ಅಧ್ಯಯನದಿಂದ ಕೆಮಿಕಲ್–ಡ್ರಗ್ ಟೆಕ್ನೀಷಿಯನ್, ಬಯೋ ಟೆಕ್ನಾಲಜಿ ಇಂಡಸ್ಟ್ರೀಸ್, ಡ್ರಗ್ ಥೆರಫಿಸ್ಟ್, ಡ್ರಗ್ ಇನ್‌ಸ್ಪೆಕ್ಟರ್, ಹಾಸ್ಪಿಟಲ್ ಡ್ರಗ್ ಕೋ–ಆರ್ಡಿನೇಟರ್, ಹೆಲ್ತ್ ಇನ್‌ಸ್ಪೆಕ್ಟರ್, ಫಾರ್ಮಾಸಿಸ್ಟ್, ಪೊಟೋಗ್ರಾಫಿಕಲ್ ಲ್ಯಾಬ್, ರಿಸರ್ಚ್ ಅಂಡ್ ಡೆವಲಪ್‌ಮೆಂಟ್, ಸಂಶೋಧನಾ ಅಧಿಕಾರಿ ಇನ್ನಿತರೆ ಉದ್ಯೋಗಗಳನ್ನು ಪಡೆದುಕೊಳ್ಳಬಹುದಾಗಿದೆ.
> – ಪ್ರೊ.ಆರ್.ರವೀಂದ್ರ

### ಟಿಪ್ಪು ಸುಲ್ತಾನ್ 230ನೇ ಗಂಧದ ಉರುಸ್

# ಮೈಸೂರಲ್ಲಿ ಗೌರವಾರ್ಪಣೆ, ಪವಿತ್ರ ಗಂಧದ ಮೆರವಣಿಗೆ



ಮೈಸೂರು, ಜೂ.28(ಎಸ್‌ಬಿಡಿ)– ಟಿಪ್ಪು ಸುಲ್ತಾನ್ 230ನೇ ಗಂಧದ ಉರುಸ್ ಅಂಗವಾಗಿ ಮೈಸೂರಿನಲ್ಲಿ ಹಜ್ರತ್ ಟಿಪ್ಪು ಸುಲ್ತಾನ್ ವೆಲ್‌ಫೇರ್ ಮತ್ತು ಉರುಸ್ ಸಮಿತಿ ವತಿಯಿಂದ ಮಂಗಳವಾರ ಗೌರವಾರ್ಪಣೆ ಸಭೆ ಹಾಗೂ ಮೆರವಣಿಗೆ ನೆರವೇರಿಸಲಾಯಿತು.

ಮೀನಾ ಬಜಾರ್‌ನ ಟಿಪ್ಪು ಹಾಲ್‌ನಲ್ಲಿ ಅಹ್ಮದ್ ಷಾಹ ಖಾದ್ರಿ ಅವರ ನೇತೃತ್ವದಲ್ಲಿ ಸಾಮೂಹಿಕ ಪ್ರಾರ್ಥನೆ ನೆರವೇರಿಸಿದ ನಂತರ ಪವಿತ್ರ ಗಂಧವನ್ನು ಅಶೋಕ ರಸ್ತೆಯ ಮಿಲಾದ್ ಬಾಗ್‌ಗೆ ಬರಮಾಡಿಕೊಂಡು ಗೌರವ ಸಮರ್ಪಣೆ ಮಾಡಲಾಯಿತು. ನಂತರ ಆ ಗಂಧವನ್ನು ಶಾಸಕ ತನ್ವೀರ್ ಸೇಠ್ ಅವರು ತಲೆಮೇಲೆ ಹೊತ್ತು ಹೆಜ್ಜೆಹಾಕಿದರು.

ಬಳಿಕ ಸಾರೋಟ್‌ನಲ್ಲಿ ಕುಳಿತು ಮೆರವಣಿಗೆ ಮುಂದುವರೆಸಲಾಯಿತು. ಅನೇಕ ದಫ್ ಕಲಾವಿದರು ಹಾಗೂ ಸೂಫಿ ಸಂತರು ಮೆರವಣಿಗೆಯಲ್ಲಿ ಭಾಗಿಯಾಗಿದ್ದರು. ಅಶೋಕ ರಸ್ತೆ, ಸೇಂಟ್ ಫಿಲೋಮಿನಾ ಚರ್ಚ್ ವೃತ್ತ, ಬಡಾಮಕಾನ್, ಟಿಪ್ಪು ವೃತ್ತದವರೆಗೆ ಮೆರವಣಿಗೆಯಲ್ಲಿ ಸಾಗಿ, ಅಲ್ಲಿಂದ ಪವಿತ್ರ ಗಂಧವನ್ನು ಲಾರಿ ಮೂಲಕ ಶ್ರೀರಂಗಪಟ್ಟಣದ ದರಿಯಾ ದೌಲತ್ ಬಾಗ್‌ಗೆ ಕೊಂಡೊಯ್ಯಲಾಯಿತು.

ಇದಕ್ಕೂ ಮುನ್ನ ಮಿಲಾದ್ ಬಾಗ್‌ನಲ್ಲಿ ನಡೆದ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಬಸವ ಧ್ಯಾನ ಮಂದಿರದ ಬಸವಲಿಂಗ ಸ್ವಾಮಿ ಶ್ರೀಗಳು ಮಾತನಾಡಿ, ದಲಿತರಿಗೆ ಮೊದಲು ಭೂಮಿ ಹಂಚಿಕೆ ಮಾಡಿದ್ದು ಟಿಪ್ಪು ಸುಲ್ತಾನ್. ಇದರಿಂದ ಮೈಸೂರು ಸಂಸ್ಥಾನವಷ್ಟೇ ಅಲ್ಲದೆ ಕೇರಳ, ತಮಿಳುನಾಡು, ಆಂಧ್ರ ಸೇರಿದಂತೆ ದಕ್ಷಿಣ ಭಾರತದೆಲ್ಲೆಡೆ ದಲಿತರು ಭೂಮಿಯ ಹಕ್ಕು ಪಡೆದರು ಎಂದು ತಿಳಿಸಿದರು.

ಟಿಪ್ಪು ಸುಲ್ತಾನ್ ಭೌಗೋಳಿಕ ಪ್ರದೇಶ ವಿಸ್ತರಣೆ ಮಾಡದಿದ್ದರೆ ಮೈಸೂರು ಸಂಸ್ಥಾನ ಒಂದು ಚಿಕ್ಕ ಸಂಸ್ಥಾನವಾಗಿ ಉಳಿಯುತ್ತಿತ್ತು. ಟಿಪ್ಪು ಸುಲ್ತಾನ್ ಅವರಿಂದಾಗಿ ಕೃಷ್ಣಾನದಿಯಿಂದ ತಮಿಳುನಾಡಿನ ದಿಂಡಿಗಲ್‌ವರೆಗೆ ಸಾಮ್ರಾಜ್ಯ ವಿಸ್ತಾರವಾಯಿತು. ಟಿಪ್ಪು ರಾಕೆಟ್ ಉಡಾವಣೆ ತಂತ್ರಜ್ಞಾನ ಪರಿಚಯಿಸಿದರು. ಈ ಬಗ್ಗೆ ದಿವಂಗತ ಅಬ್ದುಲ್ ಕಲಾಂ ಅವರು ಪುಸ್ತಕದಲ್ಲಿ ದಾಖಲಿಸಿದ್ದಾರೆ ಎಂದರು.

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯಕ್ಕೆ ಪಚ್ಚೆಲಿಂಗ ನೀಡಿದ ಟಿಪ್ಪು, ಮರಾಠರು ಶೃಂಗೇರಿ ಮಠದ ಮೇಲೆ ದಾಳಿ ನಡೆಸಿದಾಗ ರಕ್ಷಣೆ ಜೊತೆಗೆ ಧನ–ಕನಕವನ್ನೂ ನೀಡಿದ್ದರು. ಶೃಂಗೇರಿ ಮಠದೊಂದಿಗೆ ಕನ್ನಡದಲ್ಲೇ ವ್ಯವಹರಿಸಿರುವ ಬಗ್ಗೆ ಪತ್ರಗಳು ಲಭ್ಯವಾಗಿವೆ. ಮೈಸೂರು ಅರಸರನ್ನು ಎಂದೂ ಅಗೌರವದಿಂದ ಕಾಣಲಿಲ್ಲ. ಕರ್ನಾಟಕ ಕೀರ್ತಿ ಬೆಳಗಿದ ಟಿಪ್ಪು ವಿರುದ್ಧ ಕನ್ನಡ ವಿರೋಧಿ, ಮೈಸೂರು ಅರಸರ ವಿರೋಧಿ ಎಂದು ಅಪಪ್ರಚಾರ ಮಾಡುವುದು ಖಂಡನೀಯ. ಇತಿಹಾಸವನ್ನು ಸರಿಯಾಗಿ ತಿಳಿದುಕೊಳ್ಳದೆ ಕೆಲವರು ಅಜ್ಞಾನ ಪ್ರದರ್ಶಿಸುತ್ತಿದ್ದಾರೆ. ಸಾಮ್ರಾಜ್ಯದಲ್ಲಿ ಸೌಹಾರ್ದ ಪರಂಪರೆ ಕಟ್ಟಿದ್ದ ಟಿಪ್ಪು ಕನ್ನಡದ ಸುಪುತ್ರ ಎನ್ನುವುದಕ್ಕೆ ಸಾಕಷ್ಟು ಸಾಕ್ಷಿಗಳಿವೆ ಎಂದು ಹೇಳಿದರು.

ಮೈಸೂರಿನ ಸರ್‌ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್, ಕನ್ನಡ ಚಳವಳಿ ವಾಟಾಳ್ ಪಕ್ಷದ ಸಂಸ್ಥಾಪಕ ಅಧ್ಯಕ್ಷ ವಾಟಾಳ್ ನಾಗರಾಜ್, ಜಿಲ್ಲಾ ವಕ್ಫ್ ಬೋರ್ಡ್ ಸಲಹಾ ಸಮಿತಿಯ ಅಧ್ಯಕ್ಷ ಗಯಾಜ್ ಅಹಮದ್(ಅಕ್ರಮ್), ಮಾಜಿ ಕಾರ್ಪೊರೇಟರ್ ನಸೀರುದ್ದೀನ್ ಬಾಬು, ಹಜ್ರತ್ ಟಿಪ್ಪು ಸುಲ್ತಾನ್ ಷಹೀದ್ ವೆಲ್‌ಫೇರ್ ಮತ್ತು ಉರುಸ್ ಕಮಿಟಿ ಕಾರ್ಯದರ್ಶಿ ಅಫ್ರೋಜ್ ಪಾಷ(ಅಪ್ಪು) ಮತ್ತಿತರರ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಆ್ಯಪ್ ಮೂಲಕ ರೈತರು ನಾನಾ ಸೌಲಭ್ಯ ಪಡೆದುಕೊಳ್ಳುವ ಅವಕಾಶ

ಮೈಸೂರು, ಜೂ.28(ಎಂಕೆ)– ಮುಂಗಾರು ಹಂಗಾಮಿನಲ್ಲಿ ರೈತರು 'ಆ್ಯಪ್' ಮೂಲಕ ತಮ್ಮ ಜಮೀನುಗಳಲ್ಲಿ ಬೆಳೆದಿರುವ ಬೆಳೆಗಳ ಸಮೀಕ್ಷೆ ನಡೆಸಿ ಬೆಳೆ ವಿಮೆ, ಬೆಳೆ ನಷ್ಟ ಪರಿಹಾರ, ಬೆಂಬಲ ಬೆಲೆ, ಕೃಷಿ ಸಾಲ–ಸೌಲಭ್ಯ ಪಡೆದುಕೊಳ್ಳಬಹುದಾಗಿದೆ.

'ಆ್ಯಪ್' ಬಳಸಿ ಸಮೀಕ್ಷೆಯನ್ನು ಮಾಡಿ ವಿವರಗಳನ್ನು ಅಪ್‌ಲೋಡ್ ಮಾಡುವ ಮೂಲಕ ತಾವು ಬೆಳೆದಿರುವ ಬೆಳೆಗಳ ಮಾಹಿತಿಯನ್ನು ನಿಖರವಾಗಿ ದಾಖಲಿಸಿ, ಸರ್ಕಾರದ ವಿವಿಧ ಯೋಜನೆಗಳಡಿ ಸವಲತ್ತುಗಳನ್ನು ಪಡೆದುಕೊಳ್ಳುವುದರ ಜೊತೆಗೆ ಆರ್‌ಟಿಸಿಯಲ್ಲಿ ಬೆಳೆ ಮಾಹಿತಿ ಅಳವಡಿಸಲು ಅನುಕೂಲವಾಗುತ್ತದೆ.

**ಆ್ಯಪ್ ಡೌನ್‌ಲೋಡ್ ಮತ್ತು ಬಳಸುವುದು ವಿಧಾನ:** ಗೂಗಲ್ ಪ್ಲೇ ಸ್ಟೋರ್‌ನಲ್ಲಿ 'Kharif Farmer Crop 2022-23' ಎಂದು ಟೈಪ್ ಮಾಡಿ ಅಥವಾ https://play.google.com/store/apps/details?id=com.csk.Khariffarmer22_23.cropsurvey ಲಿಂಕ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬೇಕು. ನಂತರ ತಮ್ಮ ಆಧಾರ್ ಕಾರ್ಡ್‌ನಲ್ಲಿರುವ QR Code ಅನ್ನು ಸ್ಕ್ಯಾನ್ ಮಾಡಿ ತಮ್ಮ ಮೊಬೈಲ್ ಸಂಖ್ಯೆಗೆ ಬರುವ OTP ನಮೂದಿಸಿ ನೊಂದಾಯಿಸಿಕೊಂಡು ತಮ್ಮ ಜಮೀನಿನ ವಿವರಗಳನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು. ಆನಂತರ ತಮ್ಮ ಜಮೀನುಗಳಿಗೆ ತೆರಳಿ ಸಂಬಂಧಪಟ್ಟ ಸರ್ವೆ ನಂಬರ್ ನಲ್ಲಿ ಬೆಳೆದಿರುವ ಬೆಳೆಗಳ ಛಾಯಾಚಿತ್ರಗಳನ್ನು ತೆಗೆದು ಅಪ್ ಲೋಡ್ ಮಾಡಬೇಕು.

ರೈತರು ತಾವು ಬೆಳೆದ ಬೆಳೆ ವಿವರಗಳನ್ನು ಅಪ್‌ಲೋಡ್ ಮಾಡದಿದ್ದಲ್ಲಿ ಸರ್ಕಾರದ ವಿವಿಧ ಯೋಜನೆಗಳಿಂದ ದೊರೆಯುವ ಸವಲತ್ತುಗಳನ್ನು ಪಡೆಯುವುದರಿಂದ ವಂಚಿತರಾಗುವ ಸಂಭವವಿರುತ್ತದೆ. ಆದ್ದರಿಂದ, ಎಲ್ಲಾ ರೈತರು ಹೆಚ್ಚಿನ ಆಸಕ್ತಿಯೊಂದಿಗೆ ಪ್ರಸಕ್ತ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯದಲ್ಲಿ ಪಾಲ್ಗೊಂಡು ತಮ್ಮ ಜಮೀನಿನ ಬೆಳೆ ಮಾಹಿತಿಯನ್ನು ತಾವೇ ಖುದ್ದಾಗಿ ದಾಖಲಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರ, ರೇಷ್ಮೆ, ತೋಟಗಾರಿಕೆ, ಕಂದಾಯ ಇಲಾಖೆ ಕಚೇರಿಗಳನ್ನು ಅಥವಾ ಆಯಾ ಗ್ರಾಮಗಳಿಗೆ ನಿಯೋಜಿಸಲಾಗಿರುವ ಖಾಸಗಿ ನಿವಾಸಿಗಳನ್ನು ಅಥವಾ ಬೆಳೆ ಸಮೀಕ್ಷೆ ಸಹಾಯವಾಣಿ ಸಂಖ್ಯೆ 8448447715 ಅನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

# ಲಕ್ಷ್ಮಣ ಫಲ, ಬೆಟ್ಟದ ನೆಲ್ಲಿಕಾಯಿಗೆ ಡಿಮ್ಯಾಂಡ್



ಮೈಸೂರು, ಜೂ.28(ಎಸ್‌ಪಿಎನ್) ಕ್ಯಾನ್ಸರ್ ಸೇರಿದಂತೆ ಇತರೆ ರೋಗಗಳಿಗೆ ರಾಮಬಾಣವಾಗಿರುವ 'ಲಕ್ಷ್ಮಣ ಫಲ' ಹಾಗೂ ಸಕ್ಕರೆ ಕಾಯಿಲೆಗೆ ರಾಮಬಾಣವಾಗಿರುವ 'ಬೆಟ್ಟದ ನೆಲ್ಲಿಕಾಯಿ'ಗೆ ಭಾರೀ ಡಿಮ್ಯಾಂಡ್ ಬಂದಿದೆ. ಲಕ್ಷ್ಮಣ ಫಲ ಒಂದು ಕೆಜಿಗೆ 300 ರೂ. ಹಾಗೂ 'ಬೆಟ್ಟದ ನೆಲ್ಲಿಕಾಯಿ' ಒಂದು ಕೆಜಿ 100 ರೂ.ಗಳಿಗೆ ಮಾರಾಟವಾಗುತ್ತಿದೆ ಎಂದು ಮೈಸೂರು ವಿವಿ ಕ್ರಾಫರ್ಡ್ ಭವನದ ಮುಂಭಾಗದ ಬೀದಿ ವ್ಯಾಪಾರಿ ಮಹೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

'ಲಕ್ಷ್ಮಣ ಫಲ' ಹಣ್ಣುಗಳು ಚಾಮರಾಜನಗರ ಗಡಿಗೆ ಹೊಂದಿಕೊಂಡಿರುವ ತಾಳವಾಡಿ ಹಾಗೂ ಗುಂಡ್ಲುಪೇಟೆಯ ಕೆಲವು ಪ್ರದೇಶಗಳಲ್ಲಿ ಬೆಳೆಯುತ್ತಿದ್ದು, ಇತ್ತೀಚೆಗೆ 'ಲಕ್ಷ್ಮಣ ಫಲ' ಹಾಗೂ 'ಬೆಟ್ಟದ ನೆಲ್ಲಿಕಾಯಿ' ಖರೀದಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಮಾಹಿತಿ ನೀಡಿದರು.

ಇದರ ಜೊತೆಗೆ ಖರ್ಜೂರ, ಜುಮ್ ನೆರಳೆ, ತೋತಾಪುರಿ ಹಣ್ಣುಗಳಿಗೆ ಗ್ರಾಹಕರಿಂದ ಬೇಡಿಕೆ ಇದೆ. ಗ್ರಾಹಕರ ಪ್ರಕಾರ 14 ಬಗೆಯ ಕ್ಯಾನ್ಸರ್‌ಗಳಿಗೆ 'ಲಕ್ಷ್ಮಣ ಫಲ' ಸೇವನೆಯಿಂದ ಪರಿಣಾಮ ಬೀರುತ್ತಿದ್ದು, ಈ ಹಣ್ಣು ಬೇಕಾದವರು ಹುಡುಕಿಕೊಂಡು ಬಂದು ಇಲ್ಲಿ ಖರೀದಿಸುತ್ತಾರೆ. ದಿನನಿತ್ಯ 8ಕೆಜಿಗೂ ಅಧಿಕ ಮಾರಾಟವಾಗುತ್ತಿದೆ. ಈ ಹಣ್ಣನ್ನು ಬೇರೆ ಕಡೆಗಳಲ್ಲೂ ಖರೀದಿಸುತ್ತಾರೆ ಎಂದು ಮಾಹಿತಿ ನೀಡಿದರು.

## ಚಾಮುಂಡಿಬೆಟ್ಟಕ್ಕೆ ಆಷಾಢ ಶುಕ್ರವಾರಗಳಂದು ಸುಸ್ಥಿತಿಯಲ್ಲಿರುವ ಬಸ್ ಓಡಿಸಲು ಮನವಿ

ಮೈಸೂರು, ಜೂ.28(ಎಂಕೆ)– ಚಾಮುಂಡಿಬೆಟ್ಟಕ್ಕೆ ಆಷಾಢ ಶುಕ್ರವಾರಗಳಂದು ಉಚಿತ ಬಸ್ ಸೌಕರ್ಯ ಕಲ್ಪಿಸಿರುವುದು ಒಳ್ಳೆಯ ನಿರ್ಧಾರ. ಆದರೆ ಹೊಸದಾದ, ಸುಸ್ಥಿತಿಯಲ್ಲಿರುವ ಹಾಗೂ ಶುಚಿಯಾಗಿರುವ ಬಸ್‌ಗಳನ್ನು ಕಲ್ಪಿಸುವಂತೆ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಶಂಕರೇಗೌಡ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಕಾರಿನಲ್ಲಿ ಹೋಗಿ–ಬರುವ ಭಕ್ತರು ತಮ್ಮ ಕಾರನ್ನು ಬಿಟ್ಟು ಬಸ್ಸಿನಲ್ಲಿ ಚಾಮುಂಡಿಬೆಟ್ಟಕ್ಕೆ ಹೋಗಬೇಕಾದರೆ ಬಸ್‌ಗಳು ಆಕರ್ಷಕ, ಶುಚಿ ಹಾಗೂ ಸುಸ್ಥಿತಿಯಲ್ಲಿರಬೇಕು ಎಂದು ಬಯಸುತ್ತಾರೆ. ಅಲ್ಲದೆ ಸಾಮಾನ್ಯ ಬೆಟ್ಟಕ್ಕೆ ಹೋಗುವಂತಹವರು ಅಲಂಕಾರ ಮಾಡಿಕೊಂಡು, ಒಳ್ಳೆ ಬಟ್ಟೆಗಳನ್ನು ಧರಿಸಿ ಬರುವ ಭಕ್ತರ ಹಿತದೃಷ್ಟಿಯಿಂದ ಉತ್ತಮ ಬಸ್‌ಗಳನ್ನು ಕಲ್ಪಿಸುವಂತೆ ಮನವಿ ಮಾಡಿದ್ದಾರೆ. ಪ್ರತಿನಿತ್ಯ ಚಾಮುಂಡಿಬೆಟ್ಟಕ್ಕೆ ಡಕೋಟಾ ಬಸ್‌ಗಳು ಸಂಚರಿಸುತ್ತಿವೆ. ಆದರೆ ಆಷಾಢ ಶುಕ್ರವಾರಗಳಂದು ಇಂತಹ ಬಸ್‌ಗಳ ಬದಲಿಗೆ ಉತ್ತಮ ಬಸ್‌ಗಳನ್ನು ಕಲ್ಪಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

## ಶ್ರೀ ನಟರಾಜ ಕಾಲೇಜಿನಲ್ಲಿ ಪ್ರತಿಭಾನ್ವೇಷಣೆ



ಮೈಸೂರು, ಜೂ.28(ಎಸ್‌ಪಿಎನ್)–ಮೈಸೂರಿನ ಶ್ರೀ ನಟರಾಜ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಪ್ರತಿಭಾನ್ವೇಷಣಾ ಕಾರ್ಯಕ್ರಮ ನಡೆಯಿತು.

ಪ್ರತಿಭಾನ್ವೇಷಣಾ ಕಾರ್ಯಕ್ರಮದ ಪ್ರಯುಕ್ತ ಏರ್ಪಡಿಸಿದ್ದ ರ್‍ಯಾಂಪ್ ವಾಕ್ (ವೈವಿಧ್ಯತೆಯನ್ನು ಸಾರುವ ನಡಿಗೆ)ನಲ್ಲಿ ವಿಜೇತರಾದ ತೃತೀಯ ಬಿ.ಕಾಂ ವಿದ್ಯಾರ್ಥಿನಿ ಅಮೃತ(ಪ್ರಥಮ), ಉಮಾ (ದ್ವಿತೀಯ) ಹಾಗೂ ತೃತೀಯ ಬಿಎ ವಿದ್ಯಾರ್ಥಿನಿ ನಿಖಿತ(ತೃತೀಯ) ಅವರಿಗೆ ಪ್ರಾಂಶುಪಾಲೆ ಡಾ.ಎಂ.ಶಾರದ ಅವರು ಬಹುಮಾನ ವಿತರಿಸಿ, ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲರಾದ ಡಾ.ಜಿ. ಪ್ರಸಾದಮೂರ್ತಿ, ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಎನ್.ಜಿ.ಲೋಕೇಶ್, ಇತಿಹಾಸ ವಿಭಾಗದ ಮುಖ್ಯಸ್ಥೆ ತ್ರಿವೇಣಿ, ನಟರಾಜ ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಸತ್ಯಸುಲೋಚನ, ನಟರಾಜ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಬಿ.ರಾಧ, ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ನಟರಾಜ ಸ್ನಾತಕೋತ್ತರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಎಂ.ಎನ್.ಬೋಜಮ್ಮ ಉಪಸ್ಥಿತರಿದ್ದರು.

### ಅಂತರ ಕಾಲೇಜು ವಿಜ್ಞಾನ ಉತ್ಸವ 'ಯುರೇಕಾ-2022'ರ ಪ್ರಯುಕ್ತ ಮ್ಯಾರಥಾನ್

# ಶಾಲಾ–ಕಾಲೇಜು ವಿದ್ಯಾರ್ಥಿಗಳು ಸೇರಿ 192 ಮಂದಿ ಭಾಗಿ; ನಗದು ಬಹುಮಾನ



ಮೈಸೂರು, ಜೂ.28(ಪಿಎಂ)– ನಗರದ ಯುವರಾಜ ಕಾಲೇಜಿನ ವಾರ್ಷಿಕ ಅಂತರ ಕಾಲೇಜು ವಿಜ್ಞಾನ ಉತ್ಸವ 'ಯುರೇಕಾ–2022'ರ ಅಂಗವಾಗಿ ಮಂಗಳವಾರ ಬೆಳಂಬೆಳಗ್ಗೆ 'ಆರೋಗ್ಯವೇ ಭಾಗ್ಯ' ಘೋಷವಾಕ್ಯದಡಿ ನಡೆದ ಮ್ಯಾರಥಾನ್‌ನಲ್ಲಿ ಶಾಲಾ ಮಕ್ಕಳು, ಕಾಲೇಜು ವಿದ್ಯಾರ್ಥಿಗಳು ಉತ್ಸಾಹದ ಹೆಜ್ಜೆ ಹಾಕಿದರು.

ಕಾಲೇಜು ಆವರಣದಿಂದ ಆರಂಭವಾದ ಮ್ಯಾರಥಾನ್, ಕೃಷ್ಣರಾಜ ಬುಲೇವಾರ್ಡ್ ರಸ್ತೆ, ಕಾಂತರಾಜ ಅರಸ್ ರಸ್ತೆ, ಬಲ್ಲಾಳ್ ವೃತ್ತ ಸೇರಿದಂತೆ ಇನ್ನಿತರ ರಸ್ತೆಗಳಲ್ಲಿ ಕ್ರಮಿಸಿ ಮತ್ತೆ ಕಾಲೇಜು ಆವರಣದಲ್ಲಿ ಮುಕ್ತಾಯಗೊಂಡಿತು. 13ರಿಂದ 25 ವರ್ಷದೊಳಗಿನ ಪುರುಷರು, ಮಹಿಳೆಯರು, 6ರಿಂದ 12 ವರ್ಷದೊಳಗಿನ ಮಕ್ಕಳ ವಿಭಾಗ ಸೇರಿದಂತೆ ಮೂರು ವಿಭಾಗಗಳಲ್ಲಿ 5 ಕಿ.ಮೀ. (ಎಲ್ಲಾ ವಿಭಾಗಕ್ಕೂ) ಮ್ಯಾರಥಾನ್ ನಡೆಯಿತು.

13ರಿಂದ 25 ವರ್ಷದೊಳಗಿನ ಪುರುಷರ ವಿಭಾಗದಲ್ಲಿ ಬಾಸುದೇವ ಸೋಮಾನಿ ಕಾಲೇಜು ವಿದ್ಯಾರ್ಥಿ ಪಿ.ಮಣಿಕಂಠ ಹಾಗೂ ಇದೇ ವಯೋಮಾನದ ಮಹಿಳೆಯರ ವಿಭಾಗದಲ್ಲಿ ಹರಿವಿದ್ಯಾಲಯದ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಜಿ.ದಿಶಾ ಅವರು ಪ್ರಥಮ ಸ್ಥಾನಕ್ಕೆ ಭಾಜನರಾಗುವ ಮೂಲಕ ತಲಾ 4 ಸಾವಿರ ರೂ. ನಗದು ಬಹುಮಾನ ಪಡೆದರು.

6ರಿಂದ 12 ವರ್ಷದೊಳಗಿನ ಮಕ್ಕಳ ವಿಭಾಗದಲ್ಲಿ ಸಮನಾಗಿ ಗುರಿ ತಲುಪಿದ ಸ್ಕೌಟ್ ಅಂಡ್ ಗೈಡ್ಸ್ ಶಾಲೆಯ ಗಗನ್ ಹಾಗೂ ಬೇಡನ್ ಪೊವೆಲ್ ಶಾಲೆಯ ಕೃಷ್ಣ ಸಿಂಗ್ ತಲಾ 2 ಸಾವಿರ ರೂ. ನಗದು ಬಹುಮಾನ ಪಡೆದರು. ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದ ಒಟ್ಟು 192 ಮಂದಿಗೂ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

ಇದಕ್ಕೂ ಮುನ್ನ ಕಾಲೇಜಿನ ಆವರಣದಲ್ಲಿ ಮ್ಯಾರಥಾನ್‌ಗೆ ಚಾಲನೆ ನೀಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಯುವರಾಜ ಕಾಲೇಜು ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ರಾಜ್ಯದ ಪ್ರತಿಷ್ಠಿತ ಕಾಲೇಜುಗಳ ಸಾಲಿನಲ್ಲಿ ಸ್ಥಾನ ಪಡೆದಿದೆ. ಉತ್ತಮ ಶಿಕ್ಷಣ ನೀಡುವುದಕ್ಕೆಪೂರಕವಾಗಿ ಪ್ರಯೋಗಾಲಯಗಳನ್ನು ಹೊಂದುವ ಮೂಲಕ ಹೆಚ್ಚು ವಿದ್ಯಾರ್ಥಿಗಳನ್ನು ಕಾಲೇಜು ಆಕರ್ಷಿಸುತ್ತಿದೆ. ವಿಶೇಷವಾಗಿ ಗ್ರಾಮೀಣಾ ಪ್ರದೇಶದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು.

ಈ ಜ್ಞಾನ ದೇಗುಲದಿಂದ ಹಲವರು ವಿದ್ಯಾವಂತರಾಗಿ ಉತ್ತಮ ಸ್ಥಾನಮಾನ ಅಲಂಕರಿಸಿದ್ದಾರೆ. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಇ.ಎಸ್.ವೆಂಕಟ ರಾಮಯ್ಯ, ಸಾಹಿತಿ ಡಾ.ಎಸ್.ಎಲ್.ಭೈರಪ್ಪ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ, ಸಿದ್ದರಾಮಯ್ಯ ಅವರಂತಹ ಹಲವು ಗಣ್ಯರು ಶಿಕ್ಷಣ ಪಡೆದ ಸಂಸ್ಥೆ ಇದಾಗಿದೆ ಎಂದು ತಿಳಿಸಿದರು. ಕ್ರೀಡೆಯಿಂದ ವಿದ್ಯಾರ್ಥಿಗಳು ಕ್ರಿಯಾಶೀಲರಾಗಲು ಸಾಧ್ಯ ಹಾಗಾಗಿ ಕ್ರೀಡಾ ಚಟುವಟಿಕೆಗಳ ಹವ್ಯಾಸ ಹೊಂದುವುದೂ ಮುಖ್ಯ. ಡಾ.ಬಿ.ಆರ್. ಅಂಬೇಡ್ಕರ್ ಅವರು ಹೇಳಿದಂತೆ ಅದೃಷ್ಟದ ಮೇಲೆ ನಂಬಿಕೆ ಹೊಂದದೇ ನಿಮ್ಮ ಪ್ರಯತ್ನ, ಪರಿಶ್ರಮದ ಮೇಲೆ ನಂಬಿಕೆ ಇಡಬೇಕೆಂದು ಸಲಹೆ ನೀಡಿದರು.

ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ. ಎಂ.ರುದ್ರಯ್ಯ, ಪ್ರಾಂಶುಪಾಲರಾದ ಪ್ರೊ.ಬಿ. ಎನ್.ಯಶೋಧಾ, ಯುರೇಕಾ ಉತ್ಸವದ ಸಂಯೋಜಕಿ ಡಾ.ರೂಬಿ ಸೆಲ್ವಿನಾ, ಅಧ್ಯಾಪಕರಾದ ಮಂದ್ರಾ, ಉಷಾ, ಕ್ರೀಡಾ ಕಾರ್ಯದರ್ಶಿ ಕಾರ್ತಿಕ್, ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಗೌತಮ್ ಬುದ್ಧ, ವಿದ್ಯಾರ್ಥಿಗಳಾದ ವಿಶ್ವ, ಮಹದೇವ್ ಮತ್ತಿತರರು ಹಾಜರಿದ್ದರು.

## ನಕ್ಕರೆ ಅದೇ ಸ್ವರ್ಗ

ಟಿಕೆಟ್ ಕಲೆಕ್ಟರ್ : ಎಲ್ಲಿ? ನಿಮ್ಮ ಟಿಕೆಟ್ ತೋರಿಸಿ.
ಪ್ರಯಾಣಿಕ : ಇದೋ, ತಗೊಳ್ಳಿ ಸಾರ್!
ಟಿಕೆಟ್ ಕಲೆಕ್ಟರ್ : ಇದು ಹಳೆಯ ಟಿಕೆಟ್ ಕಣ್ರೀ!
ಪ್ರಯಾಣಿಕ : ಮತ್ತೆ ನೀವೇನು ಟ್ರೇನನ್ನ ಈಗಷ್ಟೇ ಶೋರೂಮ್‌ನಿಂದ ತಗೊಂಡು ಬಂದಿದ್ದೀರಾ?!

ಮೈಸೂರು ಮಿತ್ರ
ಬುಧವಾರ, 29 ಜೂನ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

### ಅಮೃತವಾಹಿನಿ

ಅಜ್ಞಾನಿಯನ್ನು ಕಷ್ಟಪಟ್ಟು ಪ್ರಸನ್ನ ಚಿತ್ತನನ್ನಾಗಿ ಮಾಡಬಹುದು. ಆದರೆ ಅರ್ಧ ತಿಳಿವಳಿಕೆಯ ಮನುಷ್ಯನನ್ನು ಸಂತೋಷಗೊಳಿಸುವುದು ಬ್ರಹ್ಮನಿಂದಲೂ ಆಗದು.–ಬರ್ತೃಹರಿ

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಭತ್ತ ತಿನ್ನೋನಿಗೆ ಅಕ್ಕಿ ಯಾವ ಲೆಕ್ಕ?

## ನಿಮ್ಮ ಪತ್ರಗಳು

### ಮೈಸೂರಿಗೆ ಕೋಟಿ, ಯಾವ ಮೂಲೆಗೆ

ಮಾನ್ಯರೆ,

ಮೈಸೂರು ವೇಗವಾಗಿ ಬೆಳೆಯುತ್ತಿರುವ ನಗರ. ಬೆಳೆವಣಿಗೆಯ ಜೊತೆ ಜೊತೆಗೆ ಅಪರಾಧಗಳ ಸಂಖ್ಯೆಯೂ ಬೆಳೆಯುತ್ತಿರುವುದು ಅಂಕಿ ಅಂಶಗಳಿಂದ ಗಮನಿಸಬಹುದು. ಪೊಲೀಸ್ ಆಯುಕ್ತರ ಪ್ರಸ್ತಾವನೆಯ ಸಲ್ಲಿಕೆಯನ್ನು ಪುರಸ್ಕರಿಸಿ, ಕೇವಲ ಒಂದು ಕೋಟಿಯನ್ನು ಕ್ಯಾಮರಾಗಳಿಗಾಗಿ ನೀಡಿರುವುದು ಸರಿಯೇ? ಉಳಿದ ಅವ್ಯವಸ್ಥೆಗಳನ್ನು ಬಲಪಡಿಸಲು ಪೊಲೀಸ್ ವ್ಯವಸ್ಥೆಯನ್ನು ಮೊದಲು ಬಲಪಡಿಸಿ. ಸಿಬ್ಬಂದಿ ಕಡಿತ ಹಾಗೂ ತಂತ್ರಜ್ಞಾನದಿಂದ ಆಗುವ ಪ್ರಯೋಜನಗಳನ್ನು ಮೋದಿಯವರ ಅಚ್ಚು ಮೆಚ್ಚಿನ ನಂಬಿಕೆಗಳ ಉದಾಹರಣೆಯಾಗಿ ಸೈನಿಕರ 'ಅಗ್ನಿಪಥ್' ಯೋಜನೆ ಹೆಸರಿಸಬಹುದು. ಹಾಗೆಯೇ ನಗರಗಳಿಗೂ ಕಾನೂನು ಸುವ್ಯವಸ್ಥೆ, ಶಿಸ್ತಿನ ಸಂಚಾರದ ಬಗ್ಗೆ ಹೇಳುವುದಾದರೆ ಸರ್ಕಾರ ಸಂಚಾರ ವ್ಯವಸ್ಥೆಗೆ ಪ್ರೋತ್ಸಾಹ ನೀಡಬೇಕಾದ ಅವಶ್ಯಕತೆ ಇದೆಯಲ್ಲವೆ? ಶಿಸ್ತು ಸಂಚಾರಕ್ಕೆ ಸಿಬ್ಬಂದಿ ಕಡಿತವನ್ನು ಯಶಸ್ವಿಯಾಗಿ ಅಳವಡಿಸಲು ಮೈಸೂರು ನಗರವನ್ನು ಸರ್ಕಾರ ಮರೆತಂತೆ ಇದೆ. ವಿಪರೀತವಾದ ಸಣ್ಣ ಮತ್ತು ದೊಡ್ಡ ಅಪಘಾತಗಳಿಗೆ ಬರವಿಲ್ಲ. ಹಿಟ್ ಅಂಡ್ ರನ್ ಕೇಸುಗಳಲ್ಲಿ ಹೆಚ್ಚಳ. ಆರೋಪಿ ಯಾರೆಂದು ಕಂಡು ಹಿಡಿಯಲು ಕ್ಯಾಮರಾಗಳಿಲ್ಲ ಮತ್ತು ವೇಗವನ್ನು ತಡೆಯಲು ಬ್ಯಾರಿಕೇಡ್‌ಗಳೂ ಸಾಲದು. ವಿಐಪಿಗಳ ಸತತ ಆಗಮನದ ಸಲುವಾಗಿ ಅವರ ರಕ್ಷಣೆಗಾಗಿ ಅಗತ್ಯತೆಯನ್ನು ಅನುಸರಿಸಿ ಬ್ಯಾರಿಕೇಡ್‌ಗಳನ್ನು ಅಲ್ಲಿಂದಿಲ್ಲಿ, ಇಲ್ಲಿಂದಲ್ಲಿ ಬದಲಾಯಿಸಿಕೊಂಡು ಕಾಲ ಕಳೆಯುವ ಶೋಚನೀಯ ಪರಿಸ್ಥಿತಿ ಒದಗಿದೆಯೆಂದರೆ ಸರ್ಕಾರ ನಂಬುತ್ತದೆಯೇ? ಅಲ್ಲದೆ, ಯಾವುದೇ ಸರ್ಕಾರಕ್ಕೆ ಇಂತಹ ಬಡತನ ಶೋಭೆ ತರಬಹುದೇ? ಉನ್ನತ ದರ್ಜೆಯ ಸಿಗ್ನಲ್‌ಗಳು, ಪೆಲಿಕಾನ್ ಬೆಳಕಿನ ಸಿಗ್ನಲ್‌ಗಳೂ, ಸಂಚಾರ ಚಿನ್ಹೆಗಳ ಬೋರ್ಡ್‌ಗಳೂ ಅತಿ ವಿರಳಾತಿ ವಿರಳ. ಪ್ರವಾಸ ಪ್ರಧಾನ ನಗರ ಮೈಸೂರಿಗೆ ಆಧುನಿಕ ಶೈಲಿಯ ಸಂಚಾರ ನಿರ್ವಹಣಾ ಕೇಂದ್ರ ಉನ್ನತೀಕರಿಸುವ ಅಗತ್ಯವಿದೆಯೆಂದು ಹೇಳುವ ಅಗತ್ಯವೇನಿದೆ. ಮೈಸೂರು, ಪಾರ್ಕಿಂಗ್ ವ್ಯವಸ್ಥೆಯೇ ಇಲ್ಲದ ನಗರವೆಂದು ಇಡೀ ಜಗತ್ತಿಗೆ ಗೊತ್ತಿರುವ ವಿಷಯ. ನೋ ಪಾರ್ಕಿಂಗ್, ಇನ್ನಿತರೆ ಸಂಚಾರ ಉಲ್ಲಂಘನೆಗಳನ್ನು ದಾಖಲೀಕರಿಸಲು ಸಿಬ್ಬಂದಿ ತಮ್ಮ ಮೊಬೈಲ್‌ಗಳನ್ನು ಬಳಸುತ್ತಿದ್ದಾರೆ. ಇಂತಹ ವ್ಯವಸ್ಥೆ ಜನರ ದೈನಂದಿನ ಬದುಕುಗಳ ಮೇಲೆ ಅಸಮಾಧಾನದ ಋಣಾತ್ಮಕ ಪರಿಣಾಮಗಳು ಬೀರಲಾರವೆ? ವೀಲ್ ಕ್ಲಾಂಪ್‌ಗಳು, ಬ್ಯಾರಿಕೇಡ್‌ಗಳು, ಆಧುನಿಕ ಶೈಲಿಯ ಕುಡುಕ ಚಾಲಕರ ಉಸಿರಾಟದ ವಿಶ್ಲೇಷಣೆಗಳು, ರಸ್ತೆಯ ಗುರುತುಗಳು ಹಾಕುವ ವೆಚ್ಚ, ರಸ್ತೆ ಬೋರ್ಡ್‌ಗಳು, ರಸ್ತೆಯ ಜಂಕ್ಷನ್‌ಗಳ ಉನ್ನತೀಕರಣದ ವೆಚ್ಚ, ಸಿಗ್ನಲ್ ದೀಪಗಳು ಇವೆಲ್ಲಾ ಮೈಸೂರು ನಗರವನ್ನು ಬೆಂಗಳೂರಿನ ಸಂಚಾರ ವ್ಯವಸ್ಥೆಯಂತೆಯೇ ಉನ್ನತ ದರ್ಜೆಗೆ ಏರಿಸುವ ನಿಟ್ಟಿನಲ್ಲಿ ಸರ್ಕಾರ ಎಂ ಟ್ರ್ಯಾಕ್ ಯೋಜನೆಯ ಅಡಿಯಲ್ಲಿ ಅನುದಾನ ನೀಡಿದಲ್ಲಿ ಮೈಸೂರಿನ ಸಂಚಾರ ಪೊಲೀಸರಿಗೆ ಸಂಚಾರ ಶಿಸ್ತನ್ನು ನಿರ್ವಹಿಸಲು ಮಹದೋಪಕಾರವಾಗುತ್ತದೆ.

–ಆರ್.ಎನ್. ಸತ್ಯನಾರಾಯಣರಾವ್, ದಟ್ಟಗಳ್ಳಿ, ಮೈಸೂರು

### ತುರ್ತು ಕಾಯಕಲ್ಪಕ್ಕೆ ಕಾದಿರುವ ಕಿರು ಸೇತುವೆ



ಮಾನ್ಯರೆ,

ಪಿರಿಯಾಪಟ್ಟಣದ ಅರೇನಹಳ್ಳಿ ಗ್ರಾಮದ ಹೊರವಲಯದ ನೀರು ಹರಿಯುವ ಕಾಲುವೆ ಅಡ್ಡಾಳದ ಮಧ್ಯದಲ್ಲಿ ಇರುವ ಈ ಕಿರುಸೇತುವೆ ಈಗ ಶಿಥಿಲಗೊಂಡು ಬಿರುಕುಬಿಟ್ಟಿದೆ. ಗ್ರಾಮದಿಂದ ಜಮೀನಿಗೆ ಉಳುಮೆ ಮಾಡಲು, ಕೃಷಿ ಅಗತ್ಯ ಚಟುವಟಿಕೆಗಳನ್ನು ನಿರ್ವಹಿಸಲು ಎತ್ತಿನಗಾಡಿ, ಈ ಪುಟ್ಟ ವಾಹನಗಳ ಮೂಲಕ ಈ ಕಿರು ಸೇತುವೆಯ ಮೂಲಕವೇ ಹಾದುಹೋಗಬೇಕು. ಈ ಮೊದಲಿಗೆ ಇಲ್ಲಿ ಒಂದು ಕಲ್ಲುಮಣ್ಣಿನ ಹಾಗೂ ಜಲ್ಲಿಕಲ್ಲುಗಳ ರಸ್ತೆ ನಿರ್ಮಾಣವಾಗಿತ್ತು. ಆದರೆ ಅದನ್ನು ಡಾಂಬರೀಕರಣ ಹಾಗೂ ನೈಜ ನಿರ್ವಹಣೆ ಇಲ್ಲದೇ ಬರೇ ಹಳ್ಳದಿಣ್ಣೆಗಳೇ ಈಗ ತುಂಬಿಹೋಗಿದೆ. ರಸ್ತೆ ಓಡಾಡಲು ಸಮತಟ್ಟಾಗಿಲ್ಲ. ಈ ಸೇತುವೆಯ ಮೇಲ್ದಂಡೆಯಲ್ಲಿ ಈಗಾಗಲೇ ಮೂರು ನಾಲ್ಕು ಮನೆಗಳು ವಾಸ ಮಾಡುತ್ತಿವೆ. ಅವರು ಕತ್ತಲೆಯಲ್ಲಿ ಸಂಚಾರ ಮಾಡುವಾಗ ಅಪಾಯ ಎದುರಾಗಬಹುದು. ಅಪಾಯಕ್ಕೆ ಆಹ್ವಾನ ನೀಡುವಂತಿರುವ ಈ ಸೇತುವೆಯ ದುರಸ್ತಿ ಕಾರ್ಯ ಅತಿ ಶೀಘ್ರದಲ್ಲಿ ಆರಂಭವಾಗಬೇಕಾಗಿದೆ. ಅನಾಹುತ ಘಟಿಸುವ ಮುನ್ನ ಗ್ರಾಮಾಡಳಿತ ತುರ್ತು ಕ್ರಮ ಕೈಗೊಳ್ಳಲು ಮುಂದಾಗಬೇಕು.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

### ಸಂಸದ ಪ್ರತಾಪ್ ಸಿಂಹ ಅವರ ಗಮನಕ್ಕೆ

ಮಾನ್ಯರೆ,

ಮೈಸೂರು–ಕೊಡಗು ಸಂಸದರಾದ ಪ್ರತಾಪ್ ಸಿಂಹ ಅವರಿಗೆ ಈ ಪತ್ರದ ಮೂಲಕ ಕೆಲವು ವಿಷಯಗಳನ್ನು ನಿವೇದಿಸಿಕೊಳ್ಳುತ್ತೇನೆ.

1) ಸಾಮಾನ್ಯ ಜನರು ತೋರಿಕೆ ಹಾಗೂ ವಿಜೃಂಭಣೆಗೆ ಬಹುಬೇಗನೆ ಮರುಳಾಗಿ ಹಾಗೂ ಅಷ್ಟೇ ಬೇಗನೆ ಅದರಿಂದ ವಿಮುಖರಾಗುತ್ತಾರೆ.

2) ಶೇ. 50 ರಷ್ಟು ಮತದಾರರು ಜನಪ್ರತಿನಿಧಿಗಳ ಮಾತು ಮತ್ತು ಕೃತಿಗಳನ್ನು ಮೌನವಾಗಿ ಗಮನಿಸುತ್ತಾ ಇರುತ್ತಾರೆ. ಹಾಗೂ ಸರ್ಕಾರಗಳ ಬದಲಾವಣೆಗೆ ಸಮಯ ಬಂದಾಗ ಮತ ಪತ್ರದಲ್ಲಿ ಮುನ್ನುಡಿ ಬರೆಯುತ್ತಾರೆ.

3) ಯೋಗ ಧ್ಯಾನ, ದೈಹಿಕ ಚಟುವಟಿಕೆ, ಪ್ರಾರ್ಥನೆ, ಆಹಾರ ಕ್ರಮ ಮತ್ತು ನಿತ್ಯ ಕಾಯಕಗಳು, ಜನರ ವೈಯಕ್ತಿಕ ವಿಷಯಗಳಾಗಿದ್ದು ಮಾನವನ ನಾಗರಿಕತೆಯ ಏಳಿಗೆಗೆ ಅವಿಭಾಜ್ಯ ಅಂಗಗಳಾಗಿವೆಯೇ ಹೊರತು ಜನಪ್ರತಿನಿಧಿಗಳ ಸಂಬಂಧಿತ ವಿಷಯಗಳಲ್ಲ.

4) ಜೂನ್ 21ರಂದು ನಡೆದ ವಿಶ್ವ ಯೋಗ ದಿನಾಚರಣೆಗೆ ವಿನಿಯೋಗಿಸಿದ ತೆರಿಗೆದಾರನ ಹಣವನ್ನು ವಿಜೃಂಭಣೆಯಿಂದ ವ್ಯಯಿಸುವ ಬದಲು ಸುಮಾರು ಏಳೆಂಟು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ದೇವರಾಜ ಮಾರುಕಟ್ಟೆ ಕಟ್ಟಡಗಳ ಮತ್ತು ಅನೇಕ ಸಾರ್ವಜನಿಕರಿಗೆ ಅತ್ಯವಶ್ಯವಾಗಿರುವ ಕೆಲಸಗಳಿಗೆ ವಿನಿಯೋಗಿಸಬಹುದಿತ್ತಲ್ಲವೆ?

5) ಇತ್ತೀಚಿನ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣಾ ಫಲಿತಾಂಶವು ಪ್ರಜ್ಞಾವಂತ ನಾಗರಿಕರ ಈಗಿನ ಮನೋಸ್ಥಿತಿಗೆ ಹಿಡಿತ ಕೈಗನ್ನಡಿಯಾಗಿದೆ. ತಾವು ಇದನ್ನು ಕಳಕಳಿಯಿಂದ ಗಮನಿಸುವಿರೆಂದು ಆಶಿಸುತ್ತೇನೆ.

–ಡಾ. ಷಡಕ್ಷರಸ್ವಾಮಿ, ಮೈಸೂರು.



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

# ಉಷಸ್ತಿ ಎಂಬ ವಿದ್ವಾಂಸನ ಕಥೆ

ಉಪನಿಷತ್ತುಗಳಲ್ಲಿ ಗಂಭೀರವಾದ ಆಧ್ಯಾತ್ಮಿಕ ಚಿಂತನೆಗಳಿರುವಂತೆ ಆ ಚಿಂತನೆಗಳನ್ನು ಶ್ರೋತೃಗಳಿಗೆ ಅಥವಾ ಓದುಗರಿಗೆ ಮನದಟ್ಟು ಮಾಡಿಕೊಡಲು ಅನುಕೂಲವಾಗುವ ಕಥೆಗಳೂ ಸೇರಿಕೊಂಡಿವೆ. ಛಾಂದೋಗ್ಯೋಪನಿಷತ್ತಿನಲ್ಲಿರುವ ಒಂದು ಕಥೆ ಉಷಸ್ತಿ ಎಂಬ ವಿದ್ವಾಂಸನ ಬಗೆಗೆ ಇದೆ. ಛಾಂದೋಗ್ಯವೆಂಬ ಉಪನಿಷತ್ತು ಸಾಮವೇದಕ್ಕೆ ಸೇರಿದುದು. ಛಂದಸ್ ಎಂದರೆ ವೇದಮಂತ್ರ **ಛಂದೋ ಗಾಯಂತಿ ಇತಿ ಛಂದೋಗಾಃ** ಎಂಬ ವ್ಯುತ್ಪತ್ತಿಯಿಂದ ಛಂದೋಗರು ಎಂದರೆ ವೇದಮಂತ್ರಗಳನ್ನು ಹಾಡುವವರು. ಅವರಿಗೆ ಸಂಬಂಧಿಸಿದುದು ಛಾಂದೋಗ್ಯ. ವೇದಗಳಲ್ಲಿ ಪರಮ ಮುಖ್ಯವಾದ ಸಾಮವೇದದವರು ಯಜ್ಞಾದಿ ಕಾರ್ಯಗಳಲ್ಲಿ ವೇದಮಂತ್ರಗಳನ್ನು ಹಾಡುತ್ತಿದ್ದರು. ಸಾಮ ಎಂದರೆ ಹಾಡು. **ಗೀತಿಷು ಸಾಮಾಖ್ಯಾ** ಎಂದು ಸಾಯಣಾಚಾರ್ಯರು ವಿವರಿಸಿದ್ದಾರೆ. ಛಾಂದೋಗ್ಯೋಪನಿಷತ್ತು ದೊಡ್ಡದು. ಬೃಹದಾರಣ್ಯಕೋಪನಿಷತ್ತನ್ನು ಬಿಟ್ಟರೆ ಉಳಿದ ಎಲ್ಲಾ ಉಪನಿಷತ್ತುಗಳಿಗಿಂತ ಛಾಂದೋಗ್ಯವೇ ದೊಡ್ಡದು. ಇದರಲ್ಲಿ ಹಲವು ಕಥೆಗಳಿವೆ. ಉಷಸ್ತಿಯ ಕಥೆಯೂ ಅವುಗಳಲ್ಲೊಂದು.

ಕುರು ದೇಶದಲ್ಲಿ ಒಮ್ಮೆ ಅನಾವೃಷ್ಟಿಯಿಂದ ದೀರ್ಘ ಕಾಲದ ಕ್ಷಾಮ ಬಂದು ದುರ್ಭಿಕ್ಷವಾಗಿತ್ತಂತೆ. ಅಷ್ಟು ಸಾಲದೆ ಮಿಡತೆಗಳ ಹಿಂಡುಗಳು ಎಲ್ಲಿಂದಲೋ ಬಂದು ಎಲ್ಲಾ ಸಸ್ಯಗಳನ್ನು ತಿಂದು ಹಾರಿ ಹೋದುವು. ಇದರಿಂದ ಪ್ರಾಣಿಗಳಿಗೂ, ಪಕ್ಷಿಗಳಿಗೂ ಆಹಾರವಿಲ್ಲವಾಯಿತು. ಮನುಷ್ಯರ ಪಾಡಂತೂ ಹೇಳತೀರದಾಯಿತು.

ಇಂತಹ ಸಂದರ್ಭದಲ್ಲಿ ಒಂದು ಹಳ್ಳಿಯಲ್ಲಿ ವಾಸ ಮಾಡುತ್ತಿದ್ದ ಉಷಸ್ತಿ ಎಂಬ ವಿದ್ವಾಂಸ ವೇದ ವೇದಾಂಗಗಳಲ್ಲಿ ಪಾರಂಗತ. ಅವನ ಹೆಂಡತಿ ಆಟಿಕಾ. ಇನ್ನೂ ಹುಡುಗಿ. ತಿನ್ನಲು ಆಹಾರವಿಲ್ಲದೆ ಇಬ್ಬರೂ ಸಣಕಲಾಗಿದ್ದರು. ದೇಶದಲ್ಲಿ ಯಜ್ಞಯಾಗಗಳು ನಡೆದರೆ ತಾನೆ ಉಷಸ್ತಿಗೆ ಪೌರೋಹಿತ್ಯ ದೊರಕುವುದು? ಯಾವ ಉದ್ಯೋಗವೂ ಇಲ್ಲದೆ ಉಷಸ್ತಿ ದರಿದ್ರನಾಗಿಬಿಟ್ಟ, ಮನೆಯಲ್ಲಿ ಅಕ್ಕಿಯ ಕಥೆ ಹಾಗಿರಲಿ, ಮನೆಯಲ್ಲಿ ಯಾವ ಕಾಳೂ ಇರಲಿಲ್ಲ. ಹಸಿವಿನಿಂದ ಕಂಗೆಟ್ಟು ಉಷಸ್ತಿ ಊರಿನಲ್ಲಿದ್ದ ಒಬ್ಬ ಹಣವಂತನ ಮನೆಗೆ ಭಿಕ್ಷಕ್ಕೆ ಹೋದನು. ಹಣವಂತನ ಸ್ಥಿತಿಯೂ ಉತ್ತಮವಾಗಿರಲಿಲ್ಲ. ಅವನು ಹೇಗೋ ಒಂದಷ್ಟು ಹುರುಳಿಯನ್ನು ಬೇಯಿಸಿಕೊಂಡು ತಿನ್ನುತ್ತಿದ್ದನು. ಉಷಸ್ತಿಯು ಅವರ ಬಳಿಗೆ ಹೋಗಿ "ನಾನು ಎಷ್ಟೋ ದಿನ ಗಳಿಂದ ಏನನ್ನೂ ತಿಂದಿಲ್ಲ. ಈಗ ಏನಾದರೂ ಆಹಾರವು ನನಗೆ ದೊರಕದಿದ್ದರೆ ನನ್ನ ಪ್ರಾಣವೇ ಹೋಗಬಹುದು. ಏನನ್ನಾದರೂ ಕೊಡು" ಎಂದು ದೈನ್ಯದಿಂದ ಯಾಚಿಸಿದನು. ಆ ಸಾಹುಕಾರನಿಗೆ ಕರುಣೆ ಬಂತು. ಆದರೆ ಉಷಸ್ತಿಗೆ ಕೊಡಲು ಅವನಲ್ಲೂ ಏನೂ ಇರಲಿಲ್ಲ. "ನೋಡು, ನಾನು ತಿನ್ನುತ್ತಿರುವ ಈ ಬೆಂದ ಹುರುಳಿ ಕಾಳನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಇದು ಈಗ ಎಂಜಲಾಗಿದೆ" ಎಂದು ಹೇಳಿದರು.

ವೇದ ವೇದಾಂಗ ಪಾರಂಗತನೂ ಯಜ್ಞಗಳಲ್ಲಿ ಋತ್ವಿಕ್ ಆಗಿ ಕಾರ್ಯನಿರ್ವಹಿಸುವವನೂ ಆಗಿದ್ದ ಉಷಸ್ತಿಯು ಪ್ರಾಣಧಾರಣೆಗಾಗಿ "ಚಿಂತೆಯಿಲ್ಲ. ಆ ಹುರುಳಿಯನ್ನೇ ಕೊಡು. ತಿಂದು ಪ್ರಾಣ ಉಳಿಸಿಕೊಳ್ಳುತ್ತೇನೆ" ಎಂದನು. ಆ ವ್ಯಕ್ತಿಯು ತಾನು ತಿಂದು ಮಿಕ್ಕಿದ್ದ ಹುರುಳಿಯ ಕಾಳುಗಳನ್ನೇ ಉಷಸ್ತಿಗೆ ಕೊಟ್ಟನು. ಅವನು ತಿಂದು ಪ್ರಾಣ ಉಳಿಸಿಕೊಂಡನು. ಆಗ ಆ ಇಭ್ಯ (ಹಣವಂತ)ನು ತನ್ನ ಕುಡಿಯುವ ಪಾತ್ರೆಯಲ್ಲಿ ಉಳಿದಿದ್ದ ನೀರನ್ನು ಅನುಪಾನವೆಂದು ಉಷಸ್ತಿಗೆ ನೀಡಿದನು. ಆದರೆ ಉಷಸ್ತಿಯು ಅದನ್ನು ಅನುಪಾನವೆಂದು "ಅದು ಎಂಜಲು ನೀರು – ನನಗೆ ಬೇಡ" ಎಂದನು. "ಈಗ ತಾನೆ ಎಂಜಲು ಹುರುಳಿಯನ್ನು ತಿಂದಿಯಲ್ಲವೆ?" ಎಂದು ಆ ವ್ಯಕ್ತಿಯು ಕೇಳಲು "ಅದು ಪ್ರಾಣಧಾರಣೆಗಾಗಿ ತಿಂದಿದ್ದು. ಈಗ ಶಕ್ತಿಬಂದಿದೆ. ಮನೆಗೆ ಹೋಗಿ ಎಂಜಲು ಆಗದ ನೀರನ್ನು ಕುಡಿಯುವೆನು" ಎಂದು ಹೇಳಿ ಕೊಟ್ಟು ತಿಂದಿದುದರಲ್ಲಿ ಮಿಕ್ಕ ಹುರುಳಿಯನ್ನು ಹೆಂಡತಿ ಗಾಗಿ ತೆಗೆದುಕೊಂಡು ಉಷಸ್ತಿ ಮನೆಗೆ ಹೋದನು.

ಅಷ್ಟು ಹೊತ್ತಿಗೆ ಅವನ ಹೆಂಡತಿ ಎಲ್ಲೋ ಭಿಕ್ಷಕ್ಕೆ ಹೋಗಿ ಸಿಕ್ಕಿದ್ದ ಅಹಾರವನ್ನು ತಿಂದಿದ್ದಳು. ಉಷಸ್ತಿ ತಂದಿದ್ದ ಬೆಂದ ಹುರುಳಿ ಕಾಳನ್ನು ಮಾರನೆಯ ದಿನಕ್ಕಾಗಿ ತೆಗೆದಿಟ್ಟರು. ರಾತ್ರಿ ಕಳೆಯಿತು. ಮತ್ತೆ ಬೆಳಗಾಯಿತು. ಪ್ರಾತರ್ವಿಧಿಗಳನ್ನೂ ಸ್ನಾನಾದಿಗಳನ್ನೂ ಮುಗಿಸಿದ ಉಷಸ್ತಿ ಹೆಂಡತಿಗೆ ಹೇಳಿದನು. "ಒಬ್ಬ ರಾಜನು ತನ್ನ ರಾಜ್ಯದಲ್ಲಿ ಒಂದು ಯಜ್ಞವನ್ನು ಮಾಡುವನಂತೆ. ಅಲ್ಲಿಗೆ ಹೋದರೆ ಅವನು ನನ್ನನ್ನು ಆರ್ತ್ವಿಜ್ಯ (ಪೌರೋಹಿತ್ಯ)ಕ್ಕೆ ನೇಮಿಸಿಕೊಳ್ಳಬಹುದು. ಅದರಿಂದ ನಮ್ಮ ಜೀವನಕ್ಕೆ ಒಂದು ದಾರಿ ದೊರಕಬಹುದು. ಹೋಗಿ ಬರುತ್ತೇನೆ. ನಡೆಯುವ ಶಕ್ತಿಗಾಗಿ ಏನನ್ನಾದರೂ ತಿನ್ನಬೇಕು. ಆ ಹುರುಳಿಯನ್ನೇ ಕೊಡು" ಎಂದನು.

ಆ ಹುರುಳಿ ಹಳಸಿತ್ತು. ಆದರೂ ಅದನ್ನೇ ತಿಂದು ಉಷಸ್ತಿ ಪ್ರಯಾಣ ಬೆಳೆಸಿದನು. ಎಷ್ಟೋ ದೂರ ನಡೆದು ರಾಜನ ಯಜ್ಞವು ನಡೆಯುತ್ತಿದ್ದ ಸ್ಥಳವನ್ನು ತಲುಪಿದನು. ಯಜ್ಞವನ್ನು ಸಾಗಿಸಲು ಉದ್‌ಗಾತೃವೂ ಪ್ರಸ್ತೋತೃವೂ ಪ್ರತಿಹರ್ತೃವೂ ಸಿದ್ಧರಾಗಿದ್ದರು. ಉಷಸ್ತಿ ಅವರ ಬಳಿ ಸಾರಿ ಕುಳಿತು ಪ್ರಸ್ತೋತೃ ಎಂಬ ಪುರೋಹಿತನನ್ನು ಕುರಿತು ಹೇಳಿದನು. "ಎಲೈ ಪ್ರಸ್ತೋತೃವೆ, ಈ ಪ್ರಸ್ತಾವಕ್ಕೆ ಸಂಬಂಧಿಸಿದ ದೇವತೆ ಯಾರು ಎಂಬುದನ್ನು ಅತಿರಿರುವೆಯಾ? ಅದನ್ನು ಅರಿಯದೆ ಯಜ್ಞ ಕಾರ್ಯವನ್ನು ಮಾಡಿದೆಯಾದರೆ, ನಿನ್ನ ತಲೆ ಉರುಳಿ ಬೀಳುವುದು." ಇದನ್ನು ಕೇಳಿದ ಪ್ರಸ್ತೋತೃವಿಗೆ ದಿಗಿಲಾಯಿತು. ಅವನು ದಿಙ್ಮೂಢನಾಗಿ ಸುಮ್ಮನೆ ಕುಳಿತನು.

ಆಗ ಉಷಸ್ತಿ ಉದ್‌ಗಾತೃವಿಗೆ ಹೇಳಿದನು "ಎಲೈ ಉದ್ಗಾತೃವೆ, ಉದ್ಗೀಥದ ಮಂತ್ರಗಳನ್ನು ಹೇಳಲು ಹೊರಟಿರುವೆ. ಉದ್ಗೀಥಕ್ಕೆ ಸಂಬಂಧಿಸಿದ ದೇವತೆ ಯಾವುದೆಂಬುದನ್ನು ತಿಳಿದಿವೆಯಾ? ಅದನ್ನು ತಿಳಿಯದೆ ನೀನು ಮಂತ್ರಗಳನ್ನು ಉಚ್ಚರಿಸಿದರೆ ನಿನ್ನ ತಲೆ ಉರುಳಿ ಬೀಳುವುದು."

ಇದನ್ನು ಕೇಳಿದ ಉದ್ಗಾತೃವಿಗೆ ದಿಕ್ಕು ತೋಚದಂತಾಯಿತು. ಅವನು ತೆಪ್ಪಗೆ ಕುಳಿತನು.

ಅನಂತರ ಉಷಸ್ತಿ ಪ್ರತಿಹರ್ತೃವಿಗೆ ಹೇಳಿದನು "ಪ್ರತಿಹರ್ತೃವೆ, ಪ್ರತಿಹಾರಕ್ಕೆ ಸಂಬಂಧಿಸಿದ ದೇವತೆ ಯಾವುದೆಂಬುದು ನಿನಗೆ ಗೊತ್ತೆ? ಗೊತ್ತಿಲ್ಲದೆ ಪ್ರತಿಹರಣವನ್ನು ಮಾಡಿದೆಯಾದರೆ ನಿನ್ನ ತಲೆ ಉರುಳಿ ಬೀಳುವುದು."

ಇದನ್ನು ಕೇಳಿ ಪ್ರತಿಹರ್ತೃವಿನ ನಾಲಗೆ ಒಣಗಿ ಹೋಯಿತು. ಅವನು ಏನೂ ಮಾತನಾಡಲು ಆಗಲಿಲ್ಲ. ಹೀಗೆ ಎಲ್ಲ ಪುರೋಹಿತರೂ ನಿಶ್ಶಬ್ದವಾಗಿ ಕುಳಿತುಕೊಂಡಾಗ ಯಜಮಾನನು, ಎಂದರೆ ಯಜ್ಞವನ್ನು ಮಾಡುತ್ತಿದ್ದ ರಾಜನು ಉಷಸ್ತಿಗೆ ಕೈ ಮುಗಿದು "ಪೂಜ್ಯರೆ, ತಾವು ಯಾರೆಂದು ನನಗೆ ತಿಳಿಯದು. ನನ್ನಲ್ಲಿ ದಯೆಯಿಟ್ಟು ತಮ್ಮ ಪರಿಚಯವನ್ನು ಹೇಳೋಣವಾಗಲಿ" ಎಂದು ಕೇಳಿಕೊಂಡನು.

"ರಾಜನ್, ನಾನು ಚಕ್ರವಂಶೋದ್ಭೂತನಾದ ಚಾಕ್ರಾಯಣ ಉಷಸ್ತಿ" ಎಂದು ಉಷಸ್ತಿ ತನ್ನ ಪರಿಚಯವನ್ನು ಹೇಳಿದನು. ರಾಜನು ಅವನ ಪಾದಗಳನ್ನು ಮುಟ್ಟಿ ನಮಸ್ಕರಿಸಿ "ಭಗವಾನ್, ತಮ್ಮ ಪಾಂಡಿತ್ಯದ ಬಗ್ಗೆ ಕೇಳಿ ತಿಳಿದಿದ್ದೇನೆ. ನಾನು ಯಜ್ಞವನ್ನು ಮಾಡಬೇಕೆಂದು ಸಂಕಲ್ಪಿಸಿದಾಗ ತಾವೇ ಋತ್ವಿಕ್ ಆಗಿ ಬರಬೇಕು ಎಂದು ನನ್ನ ಅಪೇಕ್ಷೆಯಾಗಿತ್ತು. ಎಷ್ಟು ಹುಡುಕಿಸಿದರೂ ತಾವು ಸಿಕ್ಕಲಿಲ್ಲ. ಆದ್ದರಿಂದ ಅನ್ಯರನ್ನು ಕರೆಯಬೇಕಾಗಿ ಬಂತು. ಈಗ ನಮ್ಮ ಸೌಭಾಗ್ಯದಿಂದ ತಾವೇ ಇಲ್ಲಿಗೆ ದಯ ಮಾಡಿಸಿರುವಿರಿ. ತಾವು ಯಜ್ಞದ ಮುಖ್ಯ ಋತ್ವಿಕ್ ಆಗಿ ಕಾರ್ಯವು ಸಂಪನ್ನವಾಗುವಂತೆ ಮಾಡಬೇಕು" ಎಂದು ಬೇಡಿದನು.

ತಥಾಸ್ತು ಎಂದು ಹೇಳಿ ಉಷಸ್ತಿಯು ಪ್ರಸ್ತೋತೃ, ಉದ್ಗಾತೃ, ಪ್ರತಿಹರ್ತೃ ಎಂಬ ಪುರೋಹಿತರಿಗೆ ಅವರ ದೇವತೆಗಳು ಕ್ರಮವಾಗಿ ಪ್ರಾಣ, ಆದಿತ್ಯ, ಅನ್ನ ಎಂಬುದಾಗಿ ತಿಳಿಸಿ ಅವರಿಂದ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ಮಾಡಿಸಿ ಯಜ್ಞವು ಸುಸಂಪನ್ನವಾಗುವಂತೆ ಮಾಡಿದನು. ಸಂತುಷ್ಟನಾದ ರಾಜನು ಉಳಿದ ಎಲ್ಲಾ ಪುರೋಹಿತರಿಗೆ ಕೊಟ್ಟ ಒಟ್ಟು ದಕ್ಷಿಣೆಯಷ್ಟು ದಕ್ಷಿಣೆಯನ್ನು ಉಷಸ್ತಿಗೆ ಸಮರ್ಪಿಸಿದನು. ಉಷಸ್ತಿಯ ದಾರಿದ್ರ್ಯವು ತೊಲಗಿತು. ಯಜ್ಞದ ಫಲವಾಗಿ ದೇಶದಲ್ಲೆಲ್ಲಾ ಸುವೃಷ್ಟಿಯಾಗಿ ಸುಭಿಕ್ಷವು ನೆಲೆಗೊಂಡಿತು.

ಇದು ಆಖ್ಯಾಯಿಕೆ–ಎಂದರೆ ತತ್ತ್ವಪ್ರತಿಪಾದನೆಗಾಗಿ ಉಪನಿಷತ್ತು ಹೇಳಿರುವ ಕಥೆ. ಆಪತ್ಕಾಲದಲ್ಲಿ ನಿಯಮಗಳನ್ನು ಮೀರಿ ಕೂಡ ಪ್ರಾಣವನ್ನು ಉಳಿಸಿಕೊಳ್ಳಬೇಕು, ಶಕ್ತಿ ಇದ್ದಾಗ ಮಾತ್ರ ಯಾವುದೇ ಕಾರಣದಿಂದ ನಿಯಮವನ್ನು ಮೀರಿ ಹೋಗಬಾರದು, ಯಜ್ಞ ಕಾರ್ಯಗಳಲ್ಲಿ ತೊಡಗುವ ಪುರೋಹಿತರು ಮಂತ್ರದ ಋಷಿ, ದೇವತೆ ಮತ್ತು ಛಂದಸ್ಸುಗಳನ್ನು ತಿಳಿಯದೆ ಅವನ್ನು ಪ್ರಯೋಗಿಸಬಾರದು, ಕಷ್ಟಗಳು ಶಾಶ್ವತವಲ್ಲ, ಜೀವಂತವಾಗಿದ್ದವರಿಗೆ ಇಂದಲ್ಲದಿದ್ದರೆ ನಾಳೆ ಶ್ರೇಯಸ್ಸು ಬರುವುದು ಎಂಬ ಪಾಠಗಳನ್ನು ಕಲಿಸಲು ಉಪನಿಷತ್ತು ಈ ಕಥೆಯನ್ನು ಹೇಳಿದೆ.

ವಿದ್ಯಾವಂತರು ಎಷ್ಟೇ ಕಷ್ಟದಲ್ಲಿದ್ದರೂ ಅವರ ವಿದ್ಯೆ ಪ್ರಕಾಶಕ್ಕೆ ಬಂದಾಗ ಅವರಿಗೆ ಮನ್ನಣೆ ದೊರಕುವುದು ನಿಸ್ಸಂಶಯವೆಂಬುದು ಈ ಕಥೆಯ ಸಂದೇಶವಾಗಿದೆ. ನಮ್ಮ ದೇಶದ ಎಲ್ಲಾ ದರ್ಶನಗಳ ಮೂಲ ಆಕರವಾಗಿರುವ ಉಪನಿಷತ್ತುಗಳ ಅಧ್ಯಯನ ಸದಾ ನಡೆಯುತ್ತಿರಬೇಕು. ಅವನ್ನು ಭಾರತೀಯರು ಮರೆತು ಹೋಗಬಾರದು.

ಮೈಸೂರು ಚರಿತ್ರೆಯ ಒಂದು ಇಣುಕು ನೋಟ

# ಮಹಾರಾಜರು ಮತ್ತು ಪತ್ರಕರ್ತರು



ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನವನ್ನು ಜಗನ್ಮೋಹನ ಅರಮನೆಯಲ್ಲಿ 1951ರಲ್ಲಿ ಉದ್ಘಾಟಿಸಿದ್ದರು. (ಚಿತ್ರ ಕೃಪೆ: ಅರುಣ ಪತ್ರಿಕೆಯ ಸಂಪಾದಕರಾಗಿದ್ದ ದಿವಂಗತ ಕೆ.ರಾಮಣ್ಣನವರ ಸಂಗ್ರಹದಿಂದ)



ಗೌರಿ ಸತ್ಯ
ಹಿರಿಯ ಪತ್ರಕರ್ತರು

ತನ್ನದೇ ಆದ ಭವ್ಯ ಇತಿಹಾಸವನ್ನು ಹೊಂದಿರುವ ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಶತಮಾನ ತುಂಬಲು 12 ವರ್ಷಗಳು ಬಾಕಿ ಇದೆ. ಈ ಭವ್ಯವಾದ ಕಾಲಘಟ್ಟದಲ್ಲಿ, ಹಲವಾರು ಸ್ವಾರಸ್ಯಕರವಾದ ಘಟನೆಗಳು ಸಂಭವಿಸಿವೆ. ಆದರೆ ಪತ್ರಿಕೋದ್ಯಮದಲ್ಲಿ ನಗರವು ಮುಂಚೂಣಿಯಲ್ಲಿದ್ದರೂ ಅವುಗಳ ಪೈಕಿ ಕೆಲವೇ ಕೆಲವು ಮಾತ್ರ ದಾಖಲಾಗಿ ಉಳಿದಿವೆ. ತಾತಯ್ಯ ಎಂದೇ ಕರೆಯಲ್ಪಡುತ್ತಿದ್ದ ಪತ್ರಿಕಾ ರಂಗದ ಭೀಷ್ಮಾಚಾರ್ಯ ದಿವಂಗತ ಎಂ. ವೆಂಕಟಕೃಷ್ಣಯ್ಯ ಮೈಸೂರು ಜಿಲ್ಲೆಯ ಪತ್ರಿಕೋದ್ಯಮದ ಬೆಳವಣಿಗೆಗೆ ಮಹತ್ವಪೂರ್ಣ ಮತ್ತು ವಿಶಿಷ್ಟವಾದ ಕೊಡುಗೆಗಳನ್ನು ನೀಡಿದ್ದಾರೆ.

ಅಂತಹ ಒಂದು ಚಾರಿತ್ರಿಕ ಹಾಗೂ ಮಹತ್ವಪೂರ್ಣ ಘಟನೆಗಳ ಪೈಕಿ ನನ್ನ ಸ್ಮರಣೆಗೆ ಬರುವುದು, 1951ರಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಪತ್ರಕರ್ತರ ರಾಜ್ಯಮಟ್ಟದ ಸಮ್ಮೇಳನದ ಆತಿಥ್ಯ ವಹಿಸಿದ್ದು. ಆ ಕಾಲದಲ್ಲಿ ಶಾಲೆಗೆ ಹೋಗುವ ಓರ್ವ ಬಾಲಕನ ಹಾಗೆ ನಾನು ಕಾರ್ಯಕ್ರಮವನ್ನು ವೀಕ್ಷಿಸಿದ್ದೆನಾದರೂ, ಆ ಘಟನೆಯು ನನ್ನ ಸ್ಮೃತಿಪಟಲದಲ್ಲಿ ಶೋಭಾಯಮಾನವಾಗಿ ಅಚ್ಚಳಿಯದೇ ಉಳಿದಿದೆ. ಏಕೆಂದರೆ ಮುಖ್ಯವಾಗಿ ಪ್ರಾರಂಭದ ದಿನದಂದು ನಡೆದ ಘಟನೆಯ ಪರಿಣಾಮದಿಂದ.

ಆಗ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ನಾಲ್ಕು ವರ್ಷಗಳು ಸಂದಿದ್ದವು. ಹೊಸದಾಗಿ ಪಡೆದ ಸ್ವಾತಂತ್ರ್ಯದ ಗಾಳಿ ಹೊಸತನದಿಂದ ಬೀಸುತ್ತಿತ್ತು. ಜನರು, ಬ್ರಿಟಿಷರ ದಾಸ್ಯದಿಂದ ಮುಕ್ತಿ ಪಡೆದದ್ದಕ್ಕೆ ಹರ್ಷಿತರಾಗಿದ್ದರು. ಅವರಲ್ಲಿ ಒಂದು ರೀತಿಯ ಸಾಧನೆ ಮತ್ತು ಸಂತೃಪ್ತಿಯ ಭಾವ ಮೂಡಿತ್ತು. 1950ರಲ್ಲಿ ದೇಶ ಗಣರಾಜ್ಯವಾಗುವುದರ ಮೂಲಕ ಜನರ ಸಾಧನೆ ಮತ್ತು ಸಂತೃಪ್ತಿಗೆ ಗರಿ ಮೂಡಿತ್ತು.

ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ "ದೇಶವು" ಎಂಬ ಪ್ರಜ್ಞೆಯನ್ನು ನೋಡಬಹುದಾಗಿತ್ತು. ಈ ಸಭೆ ಸಮಾರಂಭಗಳಲ್ಲಿ, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿ ತತ್ವದ ಅನುಯಾಯಿಗಳ ಪೈಕಿ ಅನೇಕರು ಖಾದಿ ಬಟ್ಟೆ ಮತ್ತು ಟೋಪಿಯನ್ನು ಧರಿಸಿ ಹಾಜರಿರುತ್ತಿದ್ದರು. ಈ ವಾತಾವರಣದ ಮಧ್ಯೆ, 1951ರ ನವಂಬರ್‌ನಲ್ಲಿ ಜರುಗಿದ ಪತ್ರಕರ್ತರ ಸಮ್ಮೇಳನ ಸಹ ಒಂದಾಗಿದೆ. ನಂತರ, ಈ ಸಮ್ಮೇಳನವು ರಾಜ್ಯಾದ್ಯಂತ ಹೆಚ್ಚು ಸಂಖ್ಯೆಯ ಪತ್ರಕರ್ತರ ಗಮನ ಸೆಳೆಯಿತು. ಅವರ ಪೈಕಿ, ಬಹುತೇಕರು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಾಂಧಿ ತತ್ವಗಳ ಪ್ರತಿಪಾದಕರಾಗಿದ್ದರು. ಜಗನ್ಮೋಹನ ಅರಮನೆ ವೇದಿಕೆಯಲ್ಲಿ ಹಾಗೂ ಗಣರಾಜ್ಯದ ಅಡಿಯಲ್ಲಿ ರಾಜಮನೆತನವು (ರಾಜ್ಯ ಸಂಸ್ಥಾನವು) ಪ್ರಜಾಪ್ರಭುತ್ವ ರೀತಿಯ ಆಡಳಿತಕ್ಕೆ ಬದಲಾದ ರೀತಿಗೆ ಈ ವೇದಿಕೆ ಸಾಕ್ಷಿಯಾಯಿತು.

ಈ ಸಮಾರಂಭಕ್ಕಾಗಿ ಆತಿಥೇಯ ಸಮಿತಿಯಾದ ಅಂದಿನ "ಅರುಣ" ಪತ್ರಿಕೆಯ ಸಂಪಾದಕರಾದ ಹೆಚ್.ಕೆ. ಕುಮಾರಸ್ವಾಮಿ ಹಾಗೂ ಕಾರ್ಯದರ್ಶಿಯಾದ "ಸಮಾಚಾರ್" ದಿನ ಪತ್ರಿಕೆಯ ಜಿಎಲ್.ಸ್ವಾಮಿಯವರ ನೇತೃತ್ವದಲ್ಲಿ ಅಚ್ಚುಕಟ್ಟಾದ ವ್ಯವಸ್ಥೆ ಮಾಡಿತ್ತು. ಸಮ್ಮೇಳನದ ಅಧ್ಯಕ್ಷರಾಗಿದ್ದ ಹಿರಿಯ ಪತ್ರಕರ್ತ ಕೆ.ಜೀವಣ್ಣ ರಾವ್ ಅವರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿದ್ದರು.

ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಬೆಳಗ್ಗೆ ದೇಶದ ತ್ರಿವರ್ಣ ಧ್ವಜಾರೋಹಣದ ನಂತರ, ಸಮ್ಮೇಳನದ ಪ್ರತಿನಿಧಿಗಳು ಜಗನ್ಮೋಹನ ಅರಮನೆಯ ಸಭಾಂಗಣದಲ್ಲಿ ಮುಖ್ಯ ಸಮಾರಂಭವಾದ ಸಮ್ಮೇಳನದ ಉದ್ಘಾಟನೆಯನ್ನು ವೀಕ್ಷಿಸಲು ಹಾಜರಾದರು. ಕೆಲವು ಪತ್ರಕರ್ತರಿಗೆ ನಂಜರಾಜ ಬಹದ್ದೂರ್ ಛತ್ರದಲ್ಲಿ ಭೋಜನ ಮತ್ತು ವಸತಿ ವ್ಯವಸ್ಥೆ ಮಾಡಲಾಗಿತ್ತು. ಸಮಾರಂಭದ ಉದ್ಘಾಟನೆಗೆ ಬೇರೆ ಯಾರೂ ಅಲ್ಲದೇ ಘನತೆವೆತ್ತ ಮಹಾರಾಜರನ್ನೇ ಆಹ್ವಾನಿಸಲಾಗಿತ್ತು.

ಬಹುಶಃ, ಜಗನ್ಮೋಹನ ಅರಮನೆಯನ್ನು ಈ ರೀತಿಯ ಸಾರ್ವಜನಿಕ ಸಮಾರಂಭವೊಂದಕ್ಕೆ ನೀಡಿದ್ದು ಇದೇ ಮೊದಲು ಎನ್ನಬಹುದು. ಸಾಮಾನ್ಯವಾಗಿ ಸಭಾಂಗಣವು ಅರಮನೆಯ ಸಮಾರಂಭಗಳಿಗೆ ಹಾಗೂ ರಾಜ್ಯ ಸರ್ಕಾರದ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಂತಹ ಸಮಾರಂಭಗಳಿಗೆ ಮೀಸಲಾಗಿರುತ್ತಿತ್ತು.

ವೇದಿಕೆಯ ಮೇಲೆ ಎಲ್ಲಾ ಸಿದ್ಧತೆಗಳನ್ನು ಮಾಡಲಾಗಿತ್ತು. ಶ್ರೀಮನ್ ಮಹಾರಾಜರನ್ನೂ ಒಳಗೊಂಡಂತೆ, ಮುಖ್ಯ ಅತಿಥಿಗಳು ಕುಳಿತುಕೊಳ್ಳಲು ಸರತಿಯ ಪ್ರಕಾರ ಸೂಕ್ತ ಆಸನದ ವ್ಯವಸ್ಥೆ ಮಾಡಲಾಗಿತ್ತು. ಮಹಾರಾಜರು ಯಾವಾಗ ಯಾವುದೇ ಸಮಾರಂಭದಲ್ಲಿ ಭಾಗವಹಿಸುತ್ತಾರೋ, ಅಂತಹ ಸಂದರ್ಭಗಳಲ್ಲಿ, ಹುಜೂರ್ ಕಾರ್ಯದರ್ಶಿ ಹಾಗೂ ಇತರ ಸಿಬ್ಬಂದಿ ವರ್ಗದವರು ಅರಮನೆಯಿಂದ ವೇದಿಕೆಗೆ ಮುಂಚಿತವಾಗಿ ಆಗಮಿಸಿ, ಸಿದ್ಧತೆಗಳು ಸರಿಯಾಗಿವೆಯೇ ಎಂದು ಪರಿಶೀಲಿಸುತ್ತಿದ್ದರು ಹಾಗೂ ಶ್ರೀಮನ್ ಮಹಾರಾಜರ ಭವ್ಯ ಸ್ವಾಗತಕ್ಕೆ ಕೆಂಪು ರತ್ನಗಂಬಳಿ ಹಾಸಲಾಗಿದೆಯೇ ಎಂದು ನೋಡಿಕೊಳ್ಳುತ್ತಿದ್ದರು.

ಸಮ್ಮೇಳನದ ಸಿದ್ಧತೆಗಳನ್ನು ಪರಿಶೀಲಿಸಲು, ಶ್ರೀಮನ್ ಮಹಾರಾಜರ ಕಾರ್ಯದರ್ಶಿಗಳಾಗಿದ್ದ ಜೆ.ಬಿ.ಮಲ್ಲಾರಾದ್ಯ ಸ್ಥಳಕ್ಕೆ ಧಾವಿಸಿ, ಮಹಾರಾಜರು ಕುಳಿತುಕೊಳ್ಳುವ ಕುರ್ಚಿಗಳನ್ನೂ ಒಳಗೊಂಡಂತೆ ಸರತಿಯಲ್ಲಿ ಜೋಡಿಸಿರುವ ಪೀಠಗಳನ್ನು ನೋಡಿದರು. ವೇದಿಕೆಯ ಮೇಲೆ ಇತರ ಗಣ್ಯರ ಜೊತೆ ಮಹಾರಾಜರು ಕುಳಿತುಕೊಳ್ಳುವುದು ಅವರಿಗೆ ಇಷ್ಟವಾಗಲಿಲ್ಲ. ಸಾಮಾನ್ಯವಾಗಿ, ಮಹಾರಾಜರು ಕುಳಿತುಕೊಳ್ಳುವ ಪೀಠ ಬೇರೆಯವರು ಕುಳಿತುಕೊಳ್ಳುವ ಸ್ಥಳದಿಂದ ಸ್ವಲ್ಪ ದೂರ ಇಡಲಾಗುತ್ತಿತ್ತು. ಆದರೆ ಇಲ್ಲಿ ಆ ಪದ್ಧತಿ ವಿರುದ್ಧವಾಗಿತ್ತು. ಇದರ ಬಗ್ಗೆ ಅವರು ಆಕ್ಷೇಪ ವ್ಯಕ್ತಪಡಿಸಿ, ಮಹಾರಾಜರ ಪೀಠವನ್ನು ಗಣ್ಯರು ಕುಳಿತಿರುವ ವೇದಿಕೆಯಿಂದ ಸ್ವಲ್ಪ ದೂರ ಸ್ಥಳದಲ್ಲಿ ಪ್ರತ್ಯೇಕವಾಗಿ ಇರಿಸಲು ಅಪೇಕ್ಷಿಸಿದರು.

ಇದು ಪತ್ರಕರ್ತರ ಸಂಘದ ಪದಾಧಿಕಾರಿಗಳ ನಡುವೆ ಹಾಗೂ ವೇದಿಕೆಯ ಮೇಲೆ ಕುಳಿತ ಗಣ್ಯರಲ್ಲಿ ಪ್ರತಿರೋಧಕ್ಕೆ ಕಾರಣವಾಯಿತು. " ಹಿಂದಿನ ಪದ್ಧತಿಯಲ್ಲಿ ಇದ್ದಂತೆ, ಮಹಾರಾಜರು ಅಧಿಕಾರಸ್ತರಲ್ಲ ಹಾಗೂ ಮೈಸೂರು ರಾಜ ಸಂಸ್ಥಾನ ಅಸ್ತಿತ್ವದಲ್ಲಿಲ್ಲ, ಏಕೆಂದರೆ, ದೇಶಕ್ಕೆ ಸ್ವಾತಂತ್ರ್ಯ ಲಭಿಸಿ, ದೇಶ ಪ್ರಜಾತಂತ್ರ ಗಣರಾಜ್ಯವಾಗಿದೆಯೆಂದು "ಅತೃಪ್ತರು, ಶ್ರೀಮನ್ ಮಹಾರಾಜರ ಕಾರ್ಯದರ್ಶಿಯವರಿಗೆ ಹೇಳಿದರು. ಅದರೆ ಅವರ ಅಹವಾಲನ್ನು ತಿರಸ್ಕರಿಸಲಾಯಿತು. ನೌಕರ ವರ್ಗದವರ ಉದ್ಧಟತನದಿಂದ ಬೇಸರಗೊಂಡ ಪತ್ರಕರ್ತರು, ಸಭಾತ್ಯಾಗಕ್ಕೆ ಮುಂದಾದರು.

ಸಂಘದ ಪದಾಧಿಕಾರಿಗಳ ನೇತೃತ್ವದಲ್ಲಿ, ಜಗನ್ಮೋಹನ ಅರಮನೆಯ ಪ್ರವೇಶ ದ್ವಾರದಲ್ಲಿ ಸಮಾವೇಶಗೊಂಡ ಪತ್ರಕರ್ತರು, ಅಲ್ಲಿ ತಮ್ಮ ಪ್ರತಿಭಟನೆಯ ಮೂಲಕ ಮಹಾರಾಜರನ್ನು ಸ್ವಾಗತಿಸಲು ಆಲೋಚಿಸಿದ್ದರು. ಕೆಲವು ನಿಮಿಷಗಳ ನಂತರ, ಮಹಾರಾಜರು, ಕಾರಿನಲ್ಲಿ ಬಂದರು. ಕಾರಿನ ಚಾಲಕ ಕಾರನ್ನು ಜಗನ್ಮೋಹನ ಅರಮನೆಯ ಮೆಟ್ಟಿಲುಗಳ ಬಳಿ ನಿಲ್ಲಿಸಿದರು. ಮಹಾರಾಜರು ಕಾರಿನಿಂದ ಇಳಿದಾಗ, ಅರಮನೆಯ ಸಿಬ್ಬಂದಿ ವರ್ಗದವರು ಮಹಾರಾಜರನ್ನು ಬರಮಾಡಿಕೊಳ್ಳಲು ಧಾವಿಸಿದರು.

ಪ್ರವೇಶ ದ್ವಾರದಲ್ಲಿ ಹೆಚ್ಚಿನ ಸಂಖ್ಯೆಯ ಪತ್ರಕರ್ತರು ಪ್ರತಿರೋಧ ತೋರಿಸುತ್ತಾ ನಿಂತಿರುವುದನ್ನು ಮಹಾರಾಜರು ಗಮನಿಸಿದರು. ಎಲ್ಲೋ ಏನೋ ಎಡವಟ್ಟಾಗಿದೆ ಎಂಬುದನ್ನು ಮಹಾರಾಜರು ತಕ್ಷಣ ಗ್ರಹಿಸಿದರು. ಮಹಾರಾಜರ ಸಿಬ್ಬಂದಿ ವರ್ಗದವರು ನಡೆದ ಘಟನೆಯನ್ನು ಮಹಾರಾಜರ ಗಮನಕ್ಕೆ ತಂದರು.

ಇದನ್ನು ಆಲಿಸಿದ ಶ್ರೀಮನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್, ತಮ್ಮ ಸಿಬ್ಬಂದಿಗಳನ್ನು ಕುರಿತು, " ಈಗ ಪರಿಸ್ಥಿತಿ ಬದಲಾಗಿದೆ, ಆದ್ದರಿಂದ ಹಿಂದೆ ಇದ್ದಂತಹ ಶಿಷ್ಟಾಚಾರಗಳನ್ನು ಪಾಲಿಸಬೇಕೆಂಬ ಒತ್ತಾಯ ಸರಿಯಲ್ಲ" ಎಂದು ಹೇಳಿದರು.

ಇದನ್ನು ತಿಳಿದ ಸ್ವಾಗತ ಸಮಿತಿ ಪದಾಧಿಕಾರಿಗಳಿಗೆ ಹಾಗೂ ಅವರ ಸಂಗಾತಿಗಳಿಗೆ ನಿರಾಳವಾಯಿತು. ಶ್ರೀಮನ್ ಮಹಾರಾಜರು, ಈ ಸಮಸ್ಯೆಯನ್ನು ಸುಸೂತ್ರವಾಗಿ ಬಗೆಹರಿಸಿದ್ದಕ್ಕಾಗಿ ಹಾಗೂ ತಮ್ಮ ಘನತೆಗೆ ತಕ್ಕಂತೆ ನಡೆದುಕೊಂಡಿದ್ದರಿಂದ ಅವರೆಲ್ಲರೂ ಸಂತೋಷಗೊಂಡರು. ನುತರ ಉದ್ಘಾಟನಾ ಸಮಾರಂಭ ಯಾವುದೇ ವಿಘ್ನವಿಲ್ಲದೇ ಸಲೀಸಾಗಿ ನಡೆಯಿತು. ಹೀಗೆ, 1951ರ ಪತ್ರಕರ್ತರ ಸಮ್ಮೇಳನ ಪತ್ರಿಕೋದ್ಯಮದ ಇತಿಹಾಸದಲ್ಲಿ ಹೊಸ ಚಿಗುರನ್ನು ಮೂಡಿಸಿತ್ತು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ನಕಲಿ ಬಿತ್ತನೆ ಬೀಜ, ಗೊಬ್ಬರ ಮಾರಾಟವಾಗಕೂಡದು

**ಕೃಷಿ ಇಲಾಖೆ ವಿಚಕ್ಷಣಾ ದಳದ ಅಧಿಕಾರಿಗಳಿಗೆ ಸಚಿವರ ಎಚ್ಚರಿಕೆ**

ಬೆಂಗಳೂರು, ಜೂ.28(ಕೆ.ಎಂ.ಶಿ)–ಯಾವುದೇ ಕಾರಣಕ್ಕೂ ನಕಲಿ ಬೀಜ ಮತ್ತು ಗೊಬ್ಬರ ಮಾರಾಟವಾಗಬಾರದು. ರೈತರಿಗೆ ಮೋಸವಾಗಬಾರದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ತಿಳಿಸಿದರು. ವಿಕಾಸಸೌಧದ ತಮ್ಮ ಕಚೇರಿಯಲ್ಲಿ ಕೃಷಿ ವಿಚಕ್ಷಣಾ ದಳದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಕೃಷಿ ಜಾಗೃತಕೋಶವನ್ನು ಮತ್ತಷ್ಟು ಚುರುಕುಗೊಳಿಸಬೇಕು. ಇಲಿ ಹಿಡಿಯದೆ ಹುಲಿಗೆ ಗುರಿ ಇಡಬೇಕು ಎಂದು ಸೂಚಿಸಿದರು.



ರೈತರಿಗೆ ತೊಂದರೆಯಾದ ಮೇಲೆ ಎಚ್ಚೆತ್ತುಕೊಳ್ಳಬೇಡಿ. ಅನಾಹುತ ಆದ ಮೇಲೆ ಎಚ್ಚೆತ್ತುಕೊಳ್ಳಬೇಡಿ. ಅನಾಹುತ ಆಗುವುದಕ್ಕೂ ಮೊದಲೇ ಎಚ್ಚರ ವಹಿಸಿ ಎಂದು ಕೃಷಿ ವಿಚಕ್ಷಣ ದಳದ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

ನಕಲಿ ಜಾಲದ ಬುಡವನ್ನೇ ಕತ್ತರಿಸಿ.ಮಾರ್ಕೆಟಿಂಗ್ ಲೈಸೆನ್ಸ್ ಇಲ್ಲದೇ ಯಾವುದೇ ಉತ್ಪನ್ನ ಮಾರಾಟವಾದಲ್ಲಿ ಕಂಪನಿ ಎಷ್ಟೇ ದೊಡ್ಡದಾದರೂ ನೋಟೀಸ್ ನೀಡಿ ಎಂದು ಸೂಚಿಸಿದರು.

ಕಲಬುರಗಿ, ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ಕೃಷಿ ವಿಚಕ್ಷಣ ದಳದ ಕಚೇರಿಯನ್ನು ಜುಲೈ 5ರಂದು ಮೈಸೂರಿನಲ್ಲಿ ಆರಂಭಿಸಲಾಗುವುದು ಎಂದರು.

# ಅಂಗನವಾಡಿ ಕಾರ್ಯಕರ್ತೆಯರ ಸಂಭವನೀಯ ಆಯ್ಕೆ ಪಟ್ಟಿ

ಮೈಸೂರು, ಜೂ.28– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಶಿಶು ಅಭಿವೃದ್ಧಿ ಯೋಜನೆ ಮೈಸೂರು ಗ್ರಾಮಾಂತರ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇದ್ದ 2 ಅಂಗನವಾಡಿ ಕಾರ್ಯಕರ್ತೆ ಮತ್ತು ಮಿನಿ ಅಂಗನವಾಡಿ ಕಾರ್ಯಕರ್ತೆಯರು–2 ಹುದ್ದೆ ಹಾಗೂ ಸಹಾಯಕಿಯರು –12 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸಂಭವನೀಯ ಆಯ್ಕೆ ಪಟ್ಟಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಮೈಸೂರು ಗ್ರಾಮಾಂತರದಲ್ಲಿ ಜೂನ್ 27ರಂದು ಪ್ರಕಟಿಸಲಾಗಿದೆ.

ಆಯ್ಕೆಗೆ ಸಂಬಂಧಪಟ್ಟಂತೆ ಯಾವುದಾದರೂ ಆಕ್ಷೇಪಣೆಗಳು ಇದ್ದಲ್ಲಿ ಜುಲೈ 4 ರ ಸಂಜೆ 5.30 ಒಳಗಾಗಿ ಪೂರಕ ದಾಖಲಾತಿಗಳೊಂದಿಗೆ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದು ಎಂದು ಮೈಸೂರು ಗ್ರಾಮಾಂತರ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಿಲಯನ್ಸ್ ಜಿಯೋಗೆ ಮುಖೇಶ್ ಅಂಬಾನಿ ರಾಜೀನಾಮೆ

## ಮಗ ಆಕಾಶ್ ನೂತನ ಅಧ್ಯಕ್ಷ

ನವದೆಹಲಿ, ಜೂ.28– ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಮುಖೇಶ್ ಅಂಬಾನಿ ಅವರು ತಮ್ಮ ಸಮೂಹದ ಟೆಲಿಕಾಂ ಸಂಸ್ಥೆ ರಿಲಯನ್ಸ್ ಜಿಯೋ ಮಂಡಳಿಗೆ ರಾಜೀನಾಮೆ ನೀಡಿದ್ದು, ಜಿಯೋ ಕಂಪನಿಯ ಆಡಳಿತವನ್ನು ತಮ್ಮ ಹಿರಿಯ ಮಗ ಆಕಾಶ್‌ಗೆ ಹಸ್ತಾಂತರಿಸಿದ್ದಾರೆ.




ಸ್ಟಾಕ್ ಎಕ್ಸ್‌ಚೇಂಜ್ ಫೈಲಿಂಗ್‌ನಲ್ಲಿ ರಿಲಯನ್ಸ್ ಜಿಯೋ ಇನ್ಫೋಕಾಮ್ ಜೂನ್ 27 ರಂದು ನಡೆದ ಸಭೆಯಲ್ಲಿ ಕಂಪನಿಯ ಕಾರ್ಯನಿರ್ವಾಹಕೇತರ ನಿರ್ದೇಶಕರಾಗಿದ್ದ ಆಕಾಶ್ ಎಂ ಅಂಬಾನಿ ಅವರನ್ನು ಕಂಪನಿಯ ನಿರ್ದೇಶಕರ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸಲು ಒಪ್ಪಿಗೆ ನೀಡಿದೆ ಎಂದು ತಿಳಿಸಿದೆ. ಮುಖೇಶ್ ಅಂಬಾನಿ ಅವರು ತಮ್ಮ ಪುತ್ರ ಆಕಾಶ್ ಅಂಬಾನಿ ಅವರಿಗೆ ರಿಲಯನ್ಸ್ ಜಿಯೋ ಸಂಸ್ಥೆಯನ್ನು ಮುನ್ನಡೆಸಲು ಅವಕಾಶ ಕಲ್ಪಿಸಿಕೊಡಲು ಜೂನ್ 27, 2022 ರಂದು ಕಂಪನಿಯ ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಆಕಾಶ್ ಅಂಬಾನಿ ಅವರು ಕಂಪನಿಯ ನಿರ್ದೇಶಕರ ಮಂಡಳಿಯ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಇತರ ನೇಮಕಾತಿಗಳಲ್ಲಿ, ಪಂಕಜ್ ಮೋಹನ್ ಪವಾರ್ ಅವರನ್ನು ಜೂನ್ 27 ರಿಂದ ಐದು ವರ್ಷಗಳ ಕಾಲ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಿಸಲಾಗಿದೆ. ಅಲ್ಲದೆ ರಮೀಂದರ್ ಸಿಂಗ್ ಗುಜ್ರಾಲ್ ಮತ್ತು ಕೆವಿ ಚೌಧರಿ ಅವರನ್ನು ಸ್ವತಂತ್ರ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

# ಮುಂಬೈನಲ್ಲಿ ಕಟ್ಟಡ ಕುಸಿತ: 17ಕ್ಕೆ ಏರಿದ ಸಾವಿನ ಸಂಖ್ಯೆ

ಮುಂಬೈ, ಜೂ.28– ಸೋಮವಾರ ತಡರಾತ್ರಿ ಮುಂಬೈನ ಹೃದಯ ಭಾಗದಲ್ಲಿರುವ ಕುರ್ಲಾದಲ್ಲಿ 4 ಅಂತಸ್ತಿನ ಕಟ್ಟಡ ಕುಸಿತವಾಗಿದ್ದು ಅವಶೇಷಗಳಡಿ ಸಿಲುಕಿ ಇಲ್ಲಿಯವರೆಗೆ 17 ಮಂದಿ ಮೃತಪಟ್ಟಿದ್ದಾರೆ ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮಾಹಿತಿ ನೀಡಿದೆ.

ಮಹಾರಾಷ್ಟ್ರದ ರಾಜಕೀಯ ಬಿಕ್ಕಟ್ಟಿನ ನಡುವೆ ಘಟಿಸಿರುವ ಭಾರೀ ದುರಂತಕ್ಕೆ ಶಿವಸೇನೆಯ ಬಂಡಾಯ ಶಾಸಕ ಮಂಗೇಶ್ ಕುಡಾಲ್ಕರ್ ಕಂಬನಿ ಮಿಡಿದಿದ್ದಾರೆ. ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 1 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ. ಈ ಘಟನೆ ನಾಯಕ್ ನಗರ ಪ್ರದೇಶದಲ್ಲಿ ನಡೆದಿದ್ದು, ಕಟ್ಟಡಕ್ಕೆ ಈ ಹಿಂದೆಯೇ ಮುಂಬೈ ಪಾಲಿಕೆ ನೋಟಿಸ್ ಕೊಟ್ಟಿತ್ತು. ಆದರೆ ಕಟ್ಟಡವನ್ನು ತೆರವುಗೊಳಿಸಿರಲಿಲ್ಲ. ಆದರೆ ಇದೀಗ ಅಪಾಯದ ಅಂಚಿನಲ್ಲಿದ್ದ ಕಟ್ಟಡ ತೆರವುಗೊಳಿಸದ ತಪ್ಪಿಗೆ ತಾನೇ ನೆಲಸಮವಾಗಿದ್ದು, 17 ಜನರ ಪ್ರಾಣವನ್ನು ತೆಗೆದಿದೆ.

ಈ ಬಗ್ಗೆ ಶಿವಸೇನೆ ಶಾಸಕ ಸಂಜಯ್ ಪೋಟ್ನಿಸ್, 2016ರಲ್ಲಿ ಕಟ್ಟಡವನ್ನು ಸಿ1 ವರ್ಗದಲ್ಲಿ ಪಟ್ಟಿ ಮಾಡಲಾಗಿತ್ತು. ಆಡಿಟ್ ಬಳಿಕ ಅದನ್ನು ಸಿ2 ಅಡಿಯಲ್ಲಿ ಮರು ವರ್ಗೀಕರಿಸಲಾಗಿತ್ತು. ಅದನ್ನು ದುರಸ್ತಿ ಮಾಡಬೇಕಿತ್ತು. ಆದರೆ ಅದು ಆಗಿರಲಿಲ್ಲ. ಇದರಲ್ಲಿ ಬೃಹನ್‌ಮುಂಬೈ ಮುನ್ಸಿಪಲ್ ಕಾರ್ಪೊರೇಷನ್(ಬಿಎಂಸಿ) ನಿರ್ಲಕ್ಷ್ಯ ವಹಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಘಟನೆ ಬಳಿಕ ಸ್ಥಳಕ್ಕೆ ಭೇಟಿ ನೀಡಿದ ಸಚಿವ ಆದಿತ್ಯ ಠಾಕ್ರೆ ಬಿಎಂಸಿ ಸೂಚನೆಯನ್ನು ನಿರ್ಲಕ್ಷಿಸದೇ ಕಟ್ಟಡಗಳನ್ನು ತೆರವುಗೊಳಿಸಬೇಕು ಎಂದು ಒತ್ತಿ ಹೇಳಿದ್ದಾರೆ.

# ಇಂದು ರಸ್ತೆ ಡಾಂಬರೀಕರಣಕ್ಕೆ ಚಾಲನೆ

ಮೈಸೂರು, ಜೂ.28– ಮೈಸೂರಿನ ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯ ತುಳಸಿ ದಾಸಪ್ಪ ವೃತ್ತದಿಂದ ಮಾನಂದವಾಡಿ ಮುಖ್ಯರಸ್ತೆಯ ಮಾರ್ಗವಾಗಿ ನಾಚನಹಳ್ಳಿ ಪಾಳ್ಯದ ರೈಲ್ವೆ ಅಂಡರ್ ಬ್ರಿಡ್ಜ್‌ವರೆಗೂ ರಸ್ತೆ ಡಾಂಬರೀಕರಣಕ್ಕೆ ನಾಳೆ(ಜೂ.29) ಚಾಲನೆ ಸಿಗಲಿದೆ.

ಲೋಕೋಪಯೋಗಿ ಇಲಾಖೆ ವತಿಯಿಂದ ಡಾಂಬರೀಕರಣ ಕಾಮಗಾರಿ ಕೈಗೊಂಡಿದ್ದು, ಶಾಸಕ ಎಸ್.ಎ.ರಾಮದಾಸ್, ಪಾಲಿಕೆ ಸದಸ್ಯರು, ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರೊಂದಿಗೆ ತುಳಸಿದಾಸಪ್ಪ ವೃತ್ತ ಆಂಜನೇಯ ಸ್ವಾಮಿ ದೇವಾಲಯದ ಬಳಿ ಬೆಳಗ್ಗೆ 9ಕ್ಕೆ ಕಾಮಗಾರಿಗೆ ಚಾಲನೆ ನೀಡಲಿದ್ದಾರೆ.

# ಇಂದು ಆರಾಧನಾ ಮಹೋತ್ಸವ

ಮೈಸೂರು, ಜೂ.28– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಸಾಗರಕಟ್ಟೆ ಮಠದಲ್ಲಿ ಶ್ರೀ 1008 ಪ್ರದ್ಯುಮ್ನ ತೀರ್ಥರ ಆರಾಧನಾ ಮಹೋತ್ಸವ ಜರುಗುತ್ತಿದ್ದು, ನಾಳೆ(ಜೂ.29)ಯೂ ವಿವಿಧ ಕೈಂಕರ್ಯಗಳು ನೆರವೇರಲಿವೆ.

# ಪಾಕಿಸ್ತಾನದ ಪತ್ರಕರ್ತರು, ರಾಯಭಾರಿ ಮಿಷನ್‌ನ ಟ್ವಿಟರ್ ಖಾತೆ ನಿಷೇಧಿಸಿದ ಭಾರತ!

ಇಸ್ಲಾಮಾಬಾದ್, ಜೂ.28– ಭಾರತ ಪಾಕಿಸ್ತಾನದ ರಾಯಭಾರಿ ಮಿಷನ್ ಹಾಗೂ ಅಲ್ಲಿನ ಹಲವು ಪತ್ರಕರ್ತರು, ಪ್ರಮುಖ ವ್ಯಕ್ತಿಗಳ ಟ್ವೀಟರ್ ಖಾತೆಗಳನ್ನು ನಿಷೇಧಿಸಿದೆ. ಮಾಹಿತಿ ತಂತ್ರಜ್ಞಾನ ಕಾಯಿದೆ, 2000 ಅಡಿಯಲ್ಲಿ ಟ್ವಿಟರ್ ಖಾತೆಗಳನ್ನು ನಿಷೇಧಿಸಲಾಗಿದೆ ಎಂದು ಇಸ್ಲಾಮಾಬಾದ್ ನಲ್ಲಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಆರೋಪಿಸಿದೆ. ಭಾರತ, ಅಲ್ಲಿನ ಟ್ವಿಟರ್‌ಗೆ ಪಾಕಿಸ್ತಾನದ ಕೆಲವು ಅಧಿಕೃತ ಖಾತೆಗಳಿಂದ ಬರುವ ಮಾಹಿತಿಯ ಹರಿವನ್ನು ನಿರ್ಬಂಧಿಸಿರುವುದು ಅತ್ಯಂತ ಆತಂಕಕಾರಿ ಸಂಗತಿ ಎಂದು ಅಲ್ಲಿನ ಸಚಿವಾಲಯ ಹೇಳಿರುವುದನ್ನು ಜಿಯೋ ನ್ಯೂಸ್ ವರದಿ ಪ್ರಕಟಿಸಿದ್ದು ನಿಷೇಧಕ್ಕೊಳಗಾದ ಟ್ವೀಟ್ ಖಾತೆಗಳ ಪಟ್ಟಿಯನ್ನೂ ನೀಡಿದೆ. ಬ್ರಿಟನ್, ಟರ್ಕಿ, ಇರಾನ್, ಈಜಿಪ್ಟ್ ನಲ್ಲಿರುವ ಪಾಕಿಸ್ತಾನದ ರಾಯಭಾರಿ ಕಚೇರಿ ಖಾತೆಗಳು ನಿಷೇಧಕ್ಕೊಳಗಾಗಿದ್ದು, ಭಾರತದಲ್ಲಿ ಬಹುತ್ವದ ಧ್ವನಿಗೆ ಮತ್ತು ಮಾಹಿತಿಗೆ ಪ್ರವೇಶ ನಿರ್ಬಂಧಿಸುತ್ತಿರುವುದು ಅತ್ಯಂತ ಆತಂಕಕಾರಿ ಸಂಗತಿ ಎಂದು ಪಾಕ್ ಹೇಳಿದೆ ಇದೇ ವೇಳೆ ಪಾಕ್‌ನ ಸಚಿವಾಲಯ ಟ್ವಿಟರ್‌ಗೆ ಸಲಹೆ ನೀಡಿದ್ದು ಸಾಮಾಜಿಕ ಜಾಲತಾಣದ ವೇದಿಕೆಗಳು ಅಂತಾರಾಷ್ಟ್ರೀಯ ನಿಯಮಗಳಿಗೆ ಅನುಗುಣವಾಗಿರಬೇಕು. ಈ ಟ್ವೀಟ್ ಖಾತೆಗಳಿಗೆ ಪ್ರವೇಶವನ್ನು ಮರುಕಲ್ಪಿಸಬೇಕು ಎಂದು ಸರ್ಕಾರ ಒತ್ತಾಯಿಸಿರುವುದಾಗಿ ಹೇಳಿದೆ. ಭಾರತದ ಮಾಹಿತಿ ತಂತ್ರಜ್ಞಾನ ಕಾಯಿದೆ, 2000 ಅಡಿಯಲ್ಲಿ ಲಂಡನ್ ನಲ್ಲಿರುವ ದಿ ನ್ಯೂಸ್ ಹಾಗೂ ಜಿಯೋ ನ ವರದಿಗಾರರು, ಮುರ್ತಾಜ ಅಲಿ ಶಾ ಹಾಗೂ ಸಿಜೆ ವರ್ಲೆಮನ್ ಅವರ ಟ್ವಿಟರ್ ಹ್ಯಾಂಡಲ್ ಗಳನ್ನು ತಡೆಹಿಡಿಯಲಾಗಿದೆ.

# ಮೆಕ್ಕೆ ಜೋಳಕ್ಕೆ ವಕ್ಕರಿಸಿದ 'ಫಾಲ್ ಸೈನಿಕ ಹುಳು'

## ಇಳುವರಿ ಕುಸಿಯುವ ಆತಂಕದಲ್ಲಿ ಅನ್ನದಾತರು




ಪಿರಿಯಾಪಟ್ಟಣ ತಾಲೂಕಿನ ಮುತ್ತೂರಿನ ರೈತರೊಬ್ಬರ ಜಮೀನಿನಲ್ಲಿ ಕೃಷಿ ತಜ್ಞರು ಪರಿಶೀಲನೆ ನಡೆಸುತ್ತಿರುವುದು.



ಪಿರಿಯಾಪಟ್ಟಣ ತಾಲೂಕಿನ ಹಲವು ಭಾಗಗಳಲ್ಲಿ ಬೆಳೆದಿರುವ ಮುಸುಕಿನ ಜೋಳದಲ್ಲಿ ಸೈನಿಕ ಹುಳ ಬಾಧೆ ಕಂಡುಬಂದಿದ್ದು, ಕೂಡಲೇ ರೈತರು ಅಗತ್ಯ ರಸಾಯನಿಕ ಕೀಟನಾಶಕಗಳನ್ನು ಸಿಂಪಡಿಸಿ ರಕ್ಷಣೆ ಮಾಡಬೇಕು. ಇಲ್ಲವಾದರೆ ಇಳುವರಿ ಕಡಿಮೆಯಾಗಲಿದ್ದು, ಬೆಳೆ ನಷ್ಟ ಉಂಟಾಗಲಿದೆ. ರೈತರು ಫಾಲ್ ಸೈನಿಕ ಹುಳು ಹಾವಳಿ ಹತೋಟಿಗೆ ತರಲು ಆಯಾ ತಾಲೂಕು ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ಮಾಹಿತಿ ಪಡೆದುಕೊಂಡು ಕೀಟನಾಶಕಗಳನ್ನು ಪಡೆದುಕೊಳ್ಳಬಹುದಾಗಿದೆ.

– ಡಾ.ಬಿ.ಎಸ್.ಚಂದ್ರಶೇಖರ್,
ಜಂಟಿ ನಿರ್ದೇಶಕ, ಕೃಷಿ ಇಲಾಖೆ

**ಮೋಹನ್ ಕಾಯಕ**

ಮೈಸೂರು, ಜೂ.28– ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ 10,500 ಹೆಕ್ಟೇರ್ ಭೂ ಪ್ರದೇಶದಲ್ಲಿ ಬೆಳೆದಿರುವ ಮೆಕ್ಕೆಜೋಳ(ಮುಸುಕಿನ ಜೋಳ)ದಲ್ಲಿ 'ಫಾಲ್ ಸೈನಿಕ ಹುಳು(ಸ್ಪೋಡೋಪ್ಟೆರಾ ಫ್ರೂಜಿಪರ್ಡಾ)' ಹಾವಳಿ ಕಂಡುಬಂದಿದೆ.

ತಾಲೂಕಿನ ಆಲನಹಳ್ಳಿ, ಭೂತನಹಳ್ಳಿ, ನವಿಲೂರು, ಮಲ್ಲಿನಾಥಪುರ, ತಿರುಮಲಾಪುರ, ದೊಡ್ಡಹರವೆ, ಬೈಲುಕುಪ್ಪೆ, ನಾಗಹಳ್ಳಿ, ಕಂಪಲಾಪುರ, ನಾಗರಘಟ್ಟ, ಮಾಕೋಡು, ಹಿಟ್ನೆಹೆಬ್ಬಾಗಿಲು, ಬೆಟ್ಟದತುಂಗ, ಈಚೂರು, ನಾಗನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಬೆಳೆದಿರುವ ಮುಸುಕಿನ ಜೋಳದಲ್ಲಿ ಫಾಲ್ ಸೈನಿಕ ಹುಳುವಿನ ಬಾಧೆ ಹೆಚ್ಚಾಗಿದ್ದು, ಇಳುವರಿ ಕಡಿಮೆಯಾಗುವ ಸಾಧ್ಯತೆಯಿದೆ.

ಮುತ್ತೂರು, ಭೂತನಹಳ್ಳಿ, ಆಲನಹಳ್ಳಿ, ಮರಡಿಯೂರು, ಆವರ್ತಿ ಹಾಗೂ ದೊಡ್ಡಕಮರಹಳ್ಳಿಯ ರೈತ ಹೊಲಗಳಿಗೆ ಭೇಟಿ ನೀಡಿರುವ ಕೃಷಿ ತಜ್ಞರ ತಂಡ ಮುಸುಕಿನ ಜೋಳದ ತಾಕು(ಗಿಡದ ಸುತ್ತಲಿನ ಪ್ರದೇಶ)ಗಳನ್ನು ಪರಿಶೀಲನೆ ನಡೆಸಿ ರೈತರಿಗೆ ಹತೋಟಿ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಲಹೆ ನೀಡಿದ್ದಾರೆ.

ಪರಿಶೀಲನೆ ನಡೆಸಿದ ಬಹುತೇಕ ಮುಸುಕಿನ ಜೋಳದ ತಾಖುಗಳು ಬೆಳವಣಿಗೆ ಹಂತದಲ್ಲಿದ್ದರೆ, ಕೆಲವೊಂದು ತಾಕುಗಳು ಬಿತ್ತನೆಯಾದ 15–20 ದಿನಗಳ ಹಂತದಲ್ಲಿವೆ. ಪರಿಶೀಲನೆ ನಡೆಸಿದ ತಾಕುಗಳು ಖಾಸಗಿ ಕಂಪನಿಗಳ ತಳಿಗಳಾಗಿದ್ದು, ಬೆಳೆಯುತ್ತಿರುವ ಸುಳಿ ಭಾಗಕ್ಕೆ ಹೆಚ್ಚಿನ ಹಾನಿ ಉಂಟು ಮಾಡುತ್ತಿರುವುದು ಕಂಡುಬಂದಿದೆ.

**ಫಾಲ್ ಸೈನಿಕ ಹುಳು ಹೇಗಿರುತ್ತೇ?:** ಮೈಮೇಲೆ ಅಡ್ಡಗೆರೆ ಹೊಂದಿರುವ ತಲೆಯ ಮೇಲ್ಭಾಗದಲ್ಲಿ ತಲೆಕೆಳಗಾದ Y ಚಿಹ್ನೆ ಉದರದ 8 ಮತ್ತು 9 ನೇ ಭಾಗದಲ್ಲಿ ನಾಲ್ಕು ಉಬ್ಬಿದ ಕಪ್ಪು ಚುಕ್ಕೆಗಳು ಚಚ್ಚೌಕಾರದ ರೀತಿಯಲ್ಲಿ ಕಂಡುಬರುತ್ತದೆ. ಒಂದೂವರೆ ಇಂಚು ಉದ್ದದ ಹುಳುವು ಪತಂಗ(ಚಿಟ್ಟೆ)ಗಳಾಗಿ ಸಾವಿರಾರು ಸಂಖ್ಯೆ ಗಳಲ್ಲಿ ಆಹಾರವನ್ನು ಹುಡುಕಿಕೊಂಡು ಬಹಳ ದೂರ ಸಾಗಿ ಆಹಾರ ಬೆಳೆಯುವ ಪ್ರದೇಶಗಳಲ್ಲಿ ಗಿಡಗಳ ಎಲೆಗಳ ಮೇಲೆ ಮೊಟ್ಟೆಗಳನ್ನು ಇಡುತ್ತವೆ.

ಒಂದು ಹೆಣ್ಣು ಪತಂಗವು ಸರಾಸರಿ 150 ರಿಂದ 200 ಹಸಿರು ಮಿಶ್ರಿತ ಮೊಟ್ಟೆಗಳನ್ನು ಮುಸುಕಿನ ಜೋಳದ ಗರಿಯ ತಳಭಾಗದಲ್ಲಿ ಗುಂಪು ಗುಂಪಾಗಿ ಇಡುತ್ತವೆ. 4–5 ದಿನಗಳ ನಂತರ ಮೊಟ್ಟೆ ಒಡೆದು ಮರಿಗಳು ಹೊರಬಂದು 18–28 ದಿನಗಳವರೆಗೆ ಬೆಳೆಗಳಿಗೆ ಹಾನಿ ಮಾಡುತ್ತವೆ. ಅಲ್ಲದೆ 7–13 ದಿನಗಳಲ್ಲಿ ಮಣ್ಣಿನಲ್ಲಿ ಕೋಶಾವಸ್ಥೆಯಲ್ಲಿರುತ್ತವೆ. ಒಟ್ಟು 32–45 ದಿನಗಳಲ್ಲಿ ಸೈನಿಕ ಹುಳು ಜೀವನ ಚಕ್ರವನ್ನು ಪೂರ್ಣಗೊಳಿಸುತ್ತವೆ.

ಈ ಕೀಟವು ಹಗಲಿನಲ್ಲಿ ಮಣ್ಣು, ಕಾಂಡದ ಮಧ್ಯ ಮತ್ತು ಗರಿಗಳ ತಳ ಭಾಗದಲ್ಲಿ ವಾಸಿಸುತ್ತವೆ. ಸಂಜೆಯ ವೇಳೆ ಹುಳುಗಳು ಚಟುವಟಿಕೆ ಪ್ರಾರಂಭಿಸಿ ಬೆಳೆಯ ಎಲೆಯನ್ನು ಸಂಪೂರ್ಣವಾಗಿ ತಿಂದು ಹಾಕುತ್ತವೆ. ತೀವ್ರವಾಗಿ ಹಾನಿಗೊಳಗಾದ ಬೆಳೆಯಲ್ಲಿ ಎಲೆಯ ದಿಂಡು ಕಾಣ ಸಿಗುತ್ತವೆ.

**ಹತೋಟಿ ಕ್ರಮ:** ಸ್ಪೋಡೋಪ್ಟೆರಾ ಫ್ರೂಜಿಪರ್ಡಾ ಫೆರಮೋನ್ ಟ್ರಾಪ್(ಮೋಹಕ ಬಲೆಗಳು) 8 ಸಂಖ್ಯೆ ಪ್ರತಿ ಎಕರೆಗೆ ಬಿತ್ತನೆಯಾದ ಒಂದು ವಾರದಿಂದ ತೆನೆಯ ಹಂತದವರೆಗೆ ಅಳವಡಿಸಬೇಕು . ಮೋಹಕ ಬಲೆಯ ರಸಾಯನಿಕವನ್ನು ಅಥವಾ ಲ್ಯೂರ್‌ನ್ನು ಪ್ರತಿ 20 ದಿನಗಳಿಗೊಮ್ಮೆ ಬದಲಾಯಿಸಬೇಕು. ತತ್ತಿನಾಶಕ ಕೀಟನಾಶಕವಾದ ಥೈಯೋಡಿಕಾರ್ಬ್ 75 ಡಬ್ಲ್ಯೂ ಪಿ@1 ಗ್ರಾಂ.ಲೀಟರ್(ಲಾರ್ವಿನ್) ಗರಿಗಳ ಮೇಲ್ಭಾಗ ಮೊಟ್ಟೆಗಳ ಗುಂಪು ಕಂಡುಬಂದಾಗ ಸಿಂಪಡಿಸಬೇಕು.

ಆರ್ಥಿಕ ನಷ್ಟ ರೇಖೆಗೆ ಅನುಗುಣವಾಗಿ ಎಮಾಮೆಕ್ಟಿನ್ ಬೆಂಜೋಯೇಟ್ ಶೇ.5ರಷ್ಟು ಎಸ್‌ಜಿ@0.4 ಗ್ರಾಂಅನ್ನು ಲೀಟರ್ ನೀರಿಗೆ ಬೆರಸಿ ಸಿಂಪಡಿಸಬೇಕು. ಪೀಡೆ ಬಾಧೆಯು ಹೆಚ್ಚಾದಾಗ ರಸಾಯನಿಕ ಕೀಟನಾಶಕಗಳಾದ ನೊವಲ್ಯೂರಾನ್ ಇಮಾಮೆಕ್ಟಿನ್ ಬೆಂಜೋಯೇಟ್ @ 3 ಮಿ.ಲೀ ಅಥವಾ ಲೀಟರ್ ಅಥವಾ ನೋಡೋರಮ್ 1.7 % ಎಸ್.ಪಿ. @ 0.5 ಮಿಲಿಯನ್ನು ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದರಿಂದ ಸೈನಿಕ ಹುಳುಗೆ ಕಡಿವಾಣ ಹಾಕಬಹುದಾಗಿದೆ.

# ನೂಪುರ್ ಶರ್ಮಾ ಬೆಂಬಲಿಗನ ಭೀಕರ ಕೊಲೆ; ಇಂದು ಹಿಂದು ಸಂಘಟನೆಗಳಿಂದ ದೇಶಾದ್ಯಂತ ಅಭಿಯಾನ

ಧಾರವಾಡ, ಜೂ.28– ನೂಪುರ್ ಶರ್ಮಾ ಬೆಂಬಲಿಗ, ಟೈಲರ್ ಕನ್ನಯ್ಯ ಲಾಲ್ ಕೊಲೆಯನ್ನು ಖಂಡಿಸಿ ನಾಳೆ ದೇಶಾದ್ಯಂತ ಹಿಂದು ಸಂಘಟನೆಗಳು ಅಭಿಯಾನ ಆರಂಭಿಸಲಿದ್ದಾರೆ ಎಂದು ಶ್ರೀರಾಮಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ತಿಳಿಸಿದ್ದಾರೆ.

ಕನ್ನಯ್ಯ ಲಾಲ್ ಕೊಲೆಯನ್ನು ಖಂಡಿಸಿ ಧಾರವಾಡದಲ್ಲಿ ಮಾತನಾಡಿರುವ ಮುತಾಲಿಕ್, ನಾಳೆ ಶ್ರೀರಾಮ ಸೇನೆ, ಯುವ ಬ್ರಿಗೇಡ್, ಹಿಂದೂ ಜನಜಾಗೃತಿ ಸೇರಿ ಇತರೆ ಸಂಘಟನೆಗಳಿಂದ ಅಭಿಯಾನ ಆರಂಭವಾಗಲಿದೆ. 'ನಾನು ಕನ್ನಯ್ಯ ಲಾಲ್', 'ನಾನು ನೂಪುರ್ ಶರ್ಮಾ ಬೆಂಬಲಿಗ' ಎಂಬ ದೊಡ್ಡ ಪ್ರಮಾಣದ ಅಭಿಯಾನ ನಡೆಯಲಿದ್ದು, ತಾಕತ್ ಇದ್ದರೆ ನಮ್ಮನ್ನು ಮುಟ್ಟಲಿ ನೋಡೋಣ, ನಾವು ಗುಜರಾತ್ ಮಾದರಿಯಲ್ಲೇ ಉತ್ತರ ಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ಕನ್ನಯ್ಯ ಲಾಲ್ ಕೊಲೆಯ ಹಿನ್ನೆಲೆಯಲ್ಲಿ ಎಡಪಂಥೀಯರು ಹಾಗೂ ಕಾಂಗ್ರೆಸಿಗರ ವಿರುದ್ಧ ಕಿಡಿಕಾರಿರುವ ಮುತಾಲಿಕ್, ಕಲ್ಲಂಗಡಿ ಹಣ್ಣನ್ನು ಒಡೆದಿದ್ದಾಗ ಮಾಜಿ ಸಿಎಂ ಸಿದ್ದರಾಮಯ್ಯ ಮತ್ತು ಎಚ್.ಡಿ. ಕುಮಾರಸ್ವಾಮಿ ಅವರು ದೊಡ್ಡದಾಗಿ ಮಾತನಾಡಿದ್ದರು. ಮುಸ್ಲಿಮರ ವೋಟ್‌ಗಾಗಿ ಏನೆಲ್ಲ ಮಾಡಿದ್ದೀರಿ. ಈಗ ಕನ್ನಯ್ಯ ಲಾಲ್ ಅವರ ತಲೆ ಕತ್ತರಿಸಿದ ಮುಸ್ಲಿಮರ ಬಗ್ಗೆ ಸ್ವಲ್ಪವಾದರೂ ಬಾಯಿ ಬಿಡಿ, ಬುದ್ಧಿಜೀವಿಗಳಿಗೆ ಬುದ್ಧಿ ಇದ್ದರೆ ಈಗ ಬಾಯಿ ಬಿಡಲಿ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಅವಳಿ ಸಹೋದರ, ಸಹೋದರಿಗೆ ಸಮಾನ ಅಂಕ

ಮೈಸೂರು, ಜೂ.28– ಮೈಸೂರಿನ ಅವಳಿ ಸಹೋದರ ಹಾಗೂ ಸಹೋದರಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಸಮಾನ ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ನಗರದ ಎಸ್.ಸುಧೀರ್ ಹಾಗೂ ಎಸ್. ವಿದ್ಯಾ ದಂಪತಿಯ ಅವಳಿ ಮಕ್ಕಳಾದ ಚಿನ್ಮಯಿ ಸುಧೀರ್ ಹಾಗೂ ಪ್ರಣವ್ ಸುಧೀರ್ ದ್ವಿತೀಯ ಪಿಯು ಪರೀಕ್ಷೆಯಲ್ಲಿ 600ಕ್ಕೆ 582(ಶೇ.97) ಅಂಕ ಗಳಿಸಿದ್ದಾರೆ. ಇವರಿಬ್ಬರೂ ಕುವೆಂಪುನಗರ ವಿವಿಎಸ್ ಗೋಲ್ಡನ್ ಜುಬಿಲಿ ಕಾಲೇಜು ವಿದ್ಯಾರ್ಥಿಗಳು.



ಚಿನ್ಮಯಿ



ಪ್ರಣವ್

ಸಹೋದರಿ ಚಿನ್ಮಯಿ ಸುಧೀರ್ ಇಂಗ್ಲಿಷ್ ನಲ್ಲಿ 91, ಸಂಸ್ಕೃತ 97, ಭೌತಶಾಸ್ತ್ರ 99, ರಾಸಾಯನಶಾಸ್ತ್ರ 95, ಗಣಿತ ಹಾಗೂ ಜೀವಶಾಸ್ತ್ರದಲ್ಲಿ ತಲಾ 100 ಅಂಕ ಪಡೆದಿದ್ದಾರೆ. ಹಾಗೆಯೇ ಸಹೋದರ ಪ್ರಣವ್ ಸುಧೀರ್ ಇಂಗ್ಲಿಷ್‌ನಲ್ಲಿ 85, ಸಂಸ್ಕೃತ 100, ಭೌತಶಾಸ್ತ್ರ 98, ರಾಸಾಯನ ಶಾಸ್ತ್ರ 99, ಗಣಿತ ಹಾಗೂ ಕಂಪ್ಯೂಟರ್ ವಿಜ್ಞಾನದಲ್ಲಿ ತಲಾ 100 ಗಳಿಸಿದ್ದಾರೆ. ವಿಷಯವಾರು ಅಂಕದಲ್ಲಿ ವ್ಯತ್ಯಾಸಗಳಿದ್ದರೂ ಇವರಿಬ್ಬರ ಒಟ್ಟು ಫಲಿತಾಂಶ ಅಂಕ(582) ಸಮಾನವಾಗಿದೆ.

ಒಂದೇ ಕಾಲೇಜಿನಲ್ಲಿ ಕಲಿತ ಅವಳಿ ಸೋದರ ಹಾಗೂ ಸೋದರಿ ಪರೀಕ್ಷೆಯಲ್ಲಿ ಸಮಾನ ಅಂಕ ಪಡೆದಿರುವುದು ಕಾಕತಾಳೀಯವಾದರೂ ಆಶ್ಚರ್ಯಕರ ಸಂಗತಿ.

# ಎಲೆಕ್ಟ್ರಿಕ್ ವಾಹನಗಳ ಮಾರಾಟದಲ್ಲಿ ಕರ್ನಾಟಕ ಮುಂಚೂಣಿಯಲ್ಲಿ: 1 ಲಕ್ಷ ನೋಂದಣಿ

ಬೆಂಗಳೂರು, ಜೂ.28– ಎಲೆಕ್ಟ್ರಿಕ್ ವಾಹನಗಳ ಮಾರಾಟದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದು, 1 ಲಕ್ಷ ವಾಹನಗಳ ನೋಂದಣಿಯಾಗಿದೆ ಎಂದು ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಹೇಳಿದ್ದಾರೆ.

ಈ ಕುರಿತಂತೆ ಸಚಿವ ಮುರುಗೇಶ್ ನಿರಾಣಿ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದು, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ನಡುವೆ, ದೇಶದೆಲ್ಲೆಡೆ ಎಲೆಕ್ಟ್ರಾನಿಕ್ ವಾಹನಗಳು ದಿನದಿಂದ ದಿನಕ್ಕೆ ಪ್ರಾಮುಖ್ಯತೆ ಪಡೆದುಕೊಳ್ಳುತ್ತಲೇ ಇದ್ದು, ಕರ್ನಾಟಕವು ಇವಿ ವಾಹನಗಳ ಮಾರಾಟದಲ್ಲಿ ಮುಂಚೂಣಿಯಲ್ಲಿದೆ.

ಬಳಕೆ ಖರ್ಚು ಕಡಿಮೆ ಮಾಡುವ ಜೊತೆಗೆ ಎಲೆಕ್ಟ್ರಾನಿಕ್ ವಾಹನಗಳು ಪರಿಸರ ಸ್ನೇಹಿ, ವಾಯುಮಾಲಿನ್ಯ ನಿಯಂತ್ರಣ ದಲ್ಲೂ ಪರಿಣಾಮಕಾರಿಯಾಗಲಿದೆ ಹೀಗಾಗಿ ಸರ್ಕಾರವು ಇವಿ ವಾಹನಗಳ ಬಳಕೆಗೆ ಸಾಕಷ್ಟು ಉತ್ತೇಜನ ನೀಡುತ್ತಿದ್ದು, ಜನರು ಸಹ ಇವಿ ವಾಹನಗಳ ಕಡೆಗೆ ಒಲವು ಹೆಚ್ಚಿಸಿಕೊಂಡಿದ್ದಾರೆ.

ವಾಹನ ತಯಾರಿಕಾ ಕಂಪೆನಿಗಳೂ ಇವಿ ತಯಾರಿಕೆಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿವೆ. ಪ್ರೀ ಬುಕ್ಕಿಂಗ್ ಇರುವವರಿಗೆ ವಾಹನ ಒದಗಿಸಲು ಹೆಣಗಾಡುವಂತಹ ರೀತಿಯಲ್ಲಿ ಬೇಡಿಕೆ ಹೆಚ್ಚಾಗುತ್ತಿದೆ. ದೇಶದ ಎಲ್ಲ ಭಾಗಗಳಲ್ಲಿಯೂ ಇವಿ ಬಳಕೆ ಹೆಚ್ಚುತ್ತಿದೆ ಕರ್ನಾಟಕವು ಇದಕ್ಕೆ ಹೊರತಾಗಿಲ್ಲ ಈಗಾಗಲೇ 1 ಲಕ್ಷಕ್ಕೂ ಹೆಚ್ಚು ಇವಿ ವಾಹನಗಳು ನೋಂದಣಿಯಾಗಿವೆ ಎಂದು ಸಚಿವ ಮುರುಗೇಶ್ ನಿರಾಣಿ ತಮ್ಮ ಕೂ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಇವಿಗಳು ಭವಿಷ್ಯದಲ್ಲಿ ಕರ್ನಾಟಕದ ಪ್ರಮುಖ ಭಾಗವಾಗಿ ಮುಂದುವರೆಯಲಿದೆ. ಕರ್ನಾಟಕದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಇವಿ ವಾಹನಗಳ ನೋಂದಣಿಯಾಗಿವೆ. ಕೈಗಾರಿಕಾ ಸ್ನೇಹಿ ವಾತಾವರಣ ಹಾಗೂ ಉದ್ಯಮ ಸ್ನೇಹಿ ನೀತಿಗಳು ಕರ್ನಾಟಕವು ಭಾರತದಲ್ಲಿ ಇವಿ ಹಬ್ ಆಗಿ ಬೆಳೆಯಲು ಪ್ರಮುಖ ಕಾರಣವಾಗಿದೆ ಎಂದು ಹೇಳಿದ್ದಾರೆ.

# ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಜೂ.28– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2022–23 ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮಹಿಳಾ ಪದವೀಧರರಿಗೆ ಉದ್ಯಮಗಳನ್ನು ಸ್ಥಾಪಿಸಲು ಪೂರಕವಾಗುವಂತೆ ಪ್ರತಿಷ್ಠಿತ ಐಐಎಂ–ಬೆಂಗಳೂರಿನಲ್ಲಿ ಉಚಿತ ಉದ್ಯಮಶೀಲತೆ ತರಬೇತಿಗಾಗಿ ಪ್ರಕಟಣೆ ಹೊರಡಿಸಲಾಗಿದೆ. ಉದ್ಯಮಶೀಲತಾ ತರಬೇತಿ ಕಾರ್ಯಕ್ರಮದಡಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಪದವಿದರರಿಗೆ ಸಮಾಜ ಕಲ್ಯಾಣ ಇಲಾಖೆಯ www.sw.kar.nic.in ವೆಬ್‌ಸೈಟ್‌ನಲ್ಲಿ ಹೆಸರು 22ರ ಜೂನ್ 20ರಿಂದ 2018ರವರೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ನೋಂದಾಯಿಸಲು ಅವಕಾಶವಿದ್ದು, ಆಸಕ್ತ ಮಹಿಳಾ ಪದವೀಧರರು ಆನ್‌ಲೈನ್‌ನಲ್ಲಿ ಅರ್ಜಿ ನೊಂದಾಯಿಸಿಕೊಳ್ಳಬಹುದು. ಸಹಾಯವಾಣಿ ಸಂಖ್ಯೆ: 9482300400

ಅಭ್ಯರ್ಥಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳಾ ಪದವೀಧರರಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು, ಗರಿಷ್ಠ ವಯೋಮಿತಿ 40 ವರ್ಷದೊಳಗಿರಬೇಕು, ತರಬೇತಿಯು ಆನ್‌ಲೈನ್ (ಸ್ವಯಂ ಗತಿಯ) ಮತ್ತು ತರಬೇತಿಯು ಬೆಂಗಳೂರಿನಲ್ಲಿ ನೀಡಲಾಗುತ್ತದೆ, ಆಫ್‌ಲೈನ್ ತರಬೇತಿ ಇರುವ ಸಮಯದಲ್ಲಿ ಊಟ ಮತ್ತು ವಸತಿ ಸೌಲಭ್ಯವನ್ನು ಬೆಂಗಳೂರು ವತಿಯಿಂದ ಒದಗಿಸಲಾಗುತ್ತದೆ, ಪ್ರತಿ ಅಭ್ಯರ್ಥಿಗೆ ತಗಲುವ ತರಬೇತಿ ಶುಲ್ಕವನ್ನು ಐಐಎಂ–ಬೆಂಗಳೂರು ಸಂಸ್ಥೆಗೆ ಸಮಾಜ ಕಲ್ಯಾಣ ಇಲಾಖೆ ಅಥವಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಪಾವತಿಸಲಾಗುತ್ತದೆ, ಐಐಎಂ ಬೆಂಗಳೂರು ರವರು ನಡೆಸುವ ಆನ್ಲೈನ್ ಯೋಗ್ಯತಾ ಪರೀಕ್ಷೆ ಮುಖಾಂತರ ಅಭ್ಯರ್ಥಿಗಳ ಆಯ್ಕೆ ಮಾಡಲಾಗುತ್ತದೆ, ಯೋಗ್ಯತಾ ಪರೀಕ್ಷೆಗಾಗಿ ಅಭ್ಯರ್ಥಿಯು ಸ್ಮಾರ್ಟ್ ಮೊಬೈಲ್ ಫೋನ್ ಅನ್ನು ಹೊಂದಿರಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಗಮ, ಮಂಡಳಿ, ಸ್ವಾಯತ್ತ ಸಂಸ್ಥೆಗಳ ಮಹಿಳಾ ನೌಕರರಿಗೂ ಹೆರಿಗೆ ರಜೆ ವಿಸ್ತರಣೆ

ಮೈಸೂರು, ಜೂ.28(ಎಸ್‌ಪಿಎನ್)– ರಾಜ್ಯ ಸರ್ಕಾರದ ವಿವಿಧ ಇಲಾಖೆ ಹಾಗೂ ಅದರ ಅಂಗ ಸಂಸ್ಥೆಗಳಾದ ನಿಗಮ/ಮಂಡಳಿ/ ಸ್ವಾಯತ್ತ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ನೌಕರರಿಗೆ, ಸರ್ಕಾರಿ ಮಹಿಳಾ ನೌಕರರಿಗೆ ನೀಡುತ್ತಿರುವ ಮಾತೃತ್ವ (ಹೆರಿಗೆ) ರಜೆಯನ್ನು ಯಥಾವತ್ತಾಗಿ ವಿಸ್ತರಿಸಲು ಜೂ.23ರಂದು ಸರ್ಕಾರ ಅನುಮತಿ ನೀಡಿದೆ.

ಮಾತೃತ್ವ ರಜೆಯನ್ನು ಪ್ರಾರಂಭದಿಂದ ಗರಿಷ್ಠ 180 ದಿನಗಳವರೆಗೆ ಸಂಬಂಧಪಟ್ಟ ಅಧಿಕಾರಿಗಳು ಮಂಜೂರು ಮಾಡಬಹುದು. ಗರ್ಭಸ್ರಾವ ಅಥವಾ ಗರ್ಭಪಾತದ ಸಂದರ್ಭದಲ್ಲಿ ಮಾತೃತ್ವ ರಜೆ 6 ವಾರಗಳಿಗೆ ಮೀರಬಾರದು. ಈ ರಜೆಗೆ ಪರಿಗಣಿಸಲು ನೋಂದಾಯಿತ ವೈದ್ಯರಿಂದ ಪ್ರಮಾಣ ಪತ್ರ ಇರಬೇಕು. ಈ ಅವಧಿಯಲ್ಲಿ ವೇತನ ಸಹಿತ ರಜೆ ನೀಡಬಹುದು. ಅರ್ಜಿದಾರರಿಗೆ ಎರಡು ಇಲ್ಲವೇ ಅದಕ್ಕೂ ಹೆಚ್ಚು ಮಕ್ಕಳಿದ್ದಲ್ಲಿ ಈ ರಜೆ ಅನ್ವಯವಾಗುವುದಿಲ್ಲ ಎಂಬ ಷರತ್ತು ವಿಧಿಸಿ ಈ ಆದೇಶ 2022ರ ಏ.1 ರಿಂದ ಜಾರಿಗೆ ಬರಬೇಕು ಎಂಬ ಷರತ್ತು ವಿಧಿಸಿ ಆದೇಶಿಸಲಾಗಿದೆ ಎಂದು ಆರ್ಥಿಕ ಇಲಾಖೆಯ (ಸೇವೆಗಳು–1) ಅಧೀನ ಕಾರ್ಯದರ್ಶಿ ಅಜಯ್ ಎನ್. ಕೊರಡೆ ತಿಳಿಸಿದ್ದಾರೆ.

# ಗ್ರಾಮಲೆಕ್ಕಿಗರ ವರ್ಗಾವಣೆ

ಮೈಸೂರು, ಜೂ.28(ಎಸ್‌ಪಿಎನ್)– ಕಂದಾಯ ಇಲಾಖೆಯ 177 ಗ್ರಾಮ ಲೆಕ್ಕಿಗರನ್ನು ಸಾರ್ವಜನಿಕ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರಿಗೆ ವರ್ಗಾಯಿಸಿ ಆದೇಶಿಸಿದೆ.

ಮೈಸೂರು, ಚಾಮರಾಜನಗರ, ಕೊಡಗು, ಹಾಸನ ಹಾಗೂ ಮಂಡ್ಯ ಸೇರಿದಂತೆ 27 ಜಿಲ್ಲೆಗಳ ಗ್ರಾಮ ಲೆಕ್ಕಾಧಿಕಾರಿಗಳನ್ನು ವರ್ಗಾಯಿಸಿ ಕಂದಾಯ ಇಲಾಖೆ(ಸೇವೆಗಳು–2) ಉಪ ಕಾರ್ಯದರ್ಶಿ ಎಸ್.ಕೆ.ನಾಗವೇಣಿ ಆದೇಶಿಸಿದ್ದಾರೆ.

# ಪ್ಲಾಸ್ಟಿಕ್ ಉತ್ಪನ್ನಗಳ ಮಾರಾಟ, ಬಳಕೆ ನಿಷೇಧ: ಬಳಸಿದರೆ ದಂಡ

ಮೈಸೂರು, ಜೂ.28– ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಹಾಗೂ ಪ್ರಾದೇಶಿಕ ಕಚೇರಿ ವತಿಯಿಂದ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳಾದ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಪ್ಲಾಸ್ಟಿಕ್ ಬ್ಯಾನರ್‌ಗಳು, ಪ್ಲಾಸ್ಟಿಕ್ ಬಂಟಿಂಗ್ಸ್, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಫ್ಲೆಕ್ಸ್, ಪ್ಲಾಸ್ಟಿಕ್ ಸ್ಪೂನ್‌ಗಳು ಅಂಟಿಕೊಳ್ಳುವ ಫಿಲ್ಮ್‌ಗಳು, ಎಲ್ಲಾ ದಪ್ಪದ ಡೈನಿಂಗ್ ಟೇಬಲ್‌ನಲ್ಲಿ ಹರಡಲು ಬಳಸುವ ಪ್ಲಾಸ್ಟಿಕ್ ಹಾಳೆಗಳು, ಸ್ಟ್ರಾಗಳು ಥರ್ಮಾಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಮಣಿಗಳಿಂದ ಮಾಡಿದ ವಸ್ತುಗಳನ್ನು ನಿಷೇಧಿಸಲಾಗಿದೆ.

ಮೇಲೆ ಸೂಚಿಸಿರುವ ನಿಷೇಧಿತ ಉತ್ಪನ್ನಗಳ ಜೊತೆಗೆ ಕೆಳಗಿನ ಹೆಚ್ಚುವರಿ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು 2022 ಜುಲೈ 1 ರಿಂದ ಜಾರಿಗೆ ಬರುವಂತೆ ಪಾಲಿಸ್ಟೈಲರಿಂಗ್ ಮತ್ತು ವಿಸ್ತರಿತ ಪಾಲಿ ಸ್ಟೇರಿಂಗ್ ಸೇರಿದಂತೆ ಏಕ ಬಳಕೆಯ ಪ್ಲಾಸ್ಟಿಕ್



(SUP)ಗಳಾದ ಪ್ಲಾಸ್ಟಿಕ್ ಸ್ಟಿಕ್‌ಗಳೊಂದಿಗೆ ಇಯರ್ ಬಡ್‌ಗಳು, ಬಲೂನ್‌ಗಳಿಗೆ ಬಳಸುವ ಪ್ಲಾಸ್ಟಿಕ್ ಸ್ಟಿಕ್‌ಗಳು, ಪ್ಲಾಸ್ಟಿಕ್ ಧ್ವಜಗಳು, ಪ್ಲಾಸ್ಟಿಕ್ ಕ್ಯಾಂಡಿ ಸ್ಟಿಕ್‌ಗಳು, ಪ್ಲಾಸ್ಟಿಕ್ ಐಸ್‌ಕ್ರೀಮ್ ಸ್ಟಿಕ್‌ಗಳು, ಅಲಂಕಾರಕ್ಕಾಗಿ ಬಳಸುವ ಪಾಲಿಸ್ಟೇರಿನ್ (ಥರ್ಮಾಕೋಲ್) ಹಾಗೂ ಪ್ಲಾಸ್ಟಿಕ್ ಪ್ಲೇಟ್ ಗಳು, ಪ್ಲಾಸ್ಟಿಕ್ ಕಪ್ಪುಗಳು ಹಾಗೂ ಲೋಟಗಳು, ಫೋರ್ಕ್‌ಗಳು , ಪ್ಲಾಸ್ಟಿಕ್ ಚಮಚಗಳು, ಪ್ಲಾಸ್ಟಿಕ್ ಚಾಕುಗಳು, ಪ್ಲಾಸ್ಟಿಕ್ ಟ್ರೇ ಗಳಂತಹ ಕಟ್ಲರಿಗಳು, ಸ್ವೀಟ್ ಬಾಕ್ಸ್‌ಗಳ ಸುತ್ತ ಸುತ್ತುವ ಅಥವಾ ಪ್ಯಾಕಿಂಗ್ ಫಿಲ್ಮ್‌ಗಳು, ಆಮಂತ್ರಣ ಪತ್ರಗಳು ಮತ್ತು ಸಿಗರೇಟ್ ಪ್ಯಾಕೆಟ್‌ಗಳು, 100 ಮೈಕ್ರಾನ್‌ಗಿಂತ ಕಡಿಮೆ ದಪ್ಪದ ಪ್ಲಾಸ್ಟಿಕ್ ಅಥವಾ PVC ಬ್ಯಾನರ್‌ಗಳು, ಪ್ಲಾಸ್ಟಿಕ್ ಸ್ಟಿರರ್‌ಗಳ ತಯಾರಿಕೆ, ಆಮದು, ಸಂಗ್ರಹಣೆ, ವಿತರಣೆ , ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಲಾಗಿರುತ್ತದೆ.

ಈ ಎಲ್ಲಾ ವಸ್ತುಗಳ ಉತ್ಪಾದಕರು, ದಾಸ್ತಾನುದಾರರು, ಚಿಲ್ಲರೆ ವ್ಯಾಪಾರಿಗಳು, ಅಂಗಡಿ ಮಾಲೀಕರುಗಳು, ಇ – ಕಾಮರ್ಸ್ ಕಂಪನಿಗಳು, ಬೀದಿ ವ್ಯಾಪಾರಿಗಳು, ವಾಣಿಜ್ಯ ಸಂಸ್ಥೆಗಳು ಮಾಲ್‌ಗಳು / ಮಾರುಕಟ್ಟೆ ಸ್ಥಳ / ಶಾಪಿಂಗ್ ಕೇಂದ್ರಗಳು / ಸಿನಿಮಾ ಮಂದಿರಗಳು ಪ್ರವಾಸೋದ್ಯಮ ತಾಣಗಳು / ಶಾಲೆಗಳು / ಕಾಲೇಜುಗಳು, ಕಛೇರಿ ಸಂಕೀರ್ಣಗಳು / ಆಸ್ಪತ್ರೆಗಳು, ಇತರೆ ಸಂಸ್ಥೆಗಳು ಮತ್ತು ಸಾಮಾನ್ಯ ಸಾರ್ವಜನಿಕರಿಗೆ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ನಿಲ್ಲಿಸುವಂತೆ ಸೂಚಿಸಲಾಗಿದೆ.

2022ರ ಜೂನ್ 30ರೊಳಗೆ ಮೇಲೆ ತಿಳಿಸಲಾದ SUP ವಸ್ತುಗಳ ಶೂನ್ಯ ದಾಸ್ತಾನುಗಳನ್ನು ಖಚಿತಪಡಿಸಿಕೊಳ್ಳಲು ಸಂಬಂಧಿಸಿದ ಘಟಕಗಳಿಂದ ಅಗತ್ಯ ಕ್ರಮವನ್ನು ತೆಗೆದುಕೊಳ್ಳಬೇಕು. ಎಲ್ಲಾ ಇ – ಕಾಮರ್ಸ್ ಕಂಪನಿಗಳ ವೆಬ್‌ಸೈಟ್‌ನಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ (SUP) ವಸ್ತುಗಳ ಮಾರಾಟ ಮತ್ತು ಪ್ರದರ್ಶನ ಜಾಹೀರಾತುಗಳನ್ನು ಕೂಡ 2022 ಜುಲೈ 1 ರಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದೆ

ಈ ಆದೇಶವನ್ನು ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳಾದ ಮಾಲ್‌ಗಳು । ಮಾರುಕಟ್ಟೆ ಸ್ಥಳ । ಶಾಪಿಂಗ್ ಮಾಲ್‌ಗಳು/ ಸಿನಿಮಾ ಮಂದಿರಗಳು ಪ್ರವಾಸಿ ತಾಣಗಳು ಶಾಲೆಗಳು/ ಕಾಲೇಜುಗಳು/ ಕಛೇರಿಗಳು, ಆಸ್ಪತ್ರೆಗಳು ಮತ್ತು ಇತರ ಸಂಸ್ಥೆಗಳು ಉಲ್ಲಂಘಿಸಿದರೆ ಪರಿಸರ (ಸಂರಕ್ಷಣೆ) ಕಾಯ್ದೆ, 1986 ರಡಿಯಲ್ಲಿ ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಗಳ ವಶಪಡಿಸಿಕೊಳ್ಳುವ ಮತ್ತು ಮುಚ್ಚುವ ಆದೇಶವನ್ನು ನೀಡಲಾಗುವುದು ಹಾಗೂ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಹೊರಡಿಸಿದ ಮಾರ್ಗಸೂಚಿಯ ಪ್ರಕಾರ ಪರಿಸರ ಪರಿಹಾರ (Environment Compensation Penalty)ವನ್ನು ಪ್ರತಿ ಟನ್‌ಗೆ ರೂ. 5,000 ಗಳಂತೆ ದಂಡ ವಿಧಿಸಲಾಗುವುದು ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗಳಾದ ಜಿ.ಆರ್. ಗಣೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಕ್ರಮ ಗಣಿಗಾರಿಕೆ ತಡೆಯಲು ವಿಫಲ, ರಾಯಲ್ಟಿ ವಸೂಲಿಯಲ್ಲೂ ಹಿನ್ನಡೆ

### ಶಾಸಕ, ಸಂಸದರಿಂದ ಅಧಿಕಾರಿಗಳ ತರಾಟೆ



ಮಂಡ್ಯ, ಜೂ.28(ಮೋಹನ್‌ರಾಜ್)– ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ ತಡೆಯಲು ವಿಫಲ, ರಾಜಧನ ವಸೂಲಿಯೂ ಸಮರ್ಪಕವಾಗಿ ಆಗುತ್ತಿಲ್ಲ. ಗಣಿಗಾರಿಕೆ ಅಕ್ರಮ ಜಾಗದಲ್ಲಿದ್ದರೂ ಸಿ.ಫಾರಂ ವಿತರಿಸಿ, ಗಣಿ ನಡೆಸಲು ಮೂಲ ಸೌಕರ್ಯ ಒದಗಿಸಿ ಸಹಕಾರ. ಈ ಎಲ್ಲಾ ವಿಚಾರ ಮುಂದಿಟ್ಟುಕೊಂಡು ಮಂಗಳವಾರ ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ನಡೆದ ದಿಶಾ ಸಭೆಯಲ್ಲಿ ಗಣಿಗಾರಿಕೆ, ಕಂದಾಯ ಹಾಗೂ ಚೆಸ್ಕಾಂ ಇಲಾಖೆ ಅಧಿಕಾರಿಗಳನ್ನು ಶಾಸಕ ಕೆ.ಸುರೇಶ್‌ಗೌಡ ಹಾಗೂ ಸಂಸದೆ ಸುಮಲತಾ ಅಂಬರೀಶ್ ತೀವ್ರ ತರಾಟೆಗೆ ತೆಗೆದುಕೊಂಡರು.

ಜಿಲ್ಲಾದ್ಯಂತ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೂ, ಕ್ರಮ ಕೈಗೊಳ್ಳುತ್ತಿಲ್ಲ. ನಾಗಮಂಗಲದ ಎಸ್‌ಟಿಕೆ ಸ್ಟೋನ್ ಕ್ರಷರ್ ಆರಂಭಿಸಲು ಅಕ್ರಮವಾಗಿ 'ಸಿ' ಫಾರಂ ನೀಡಲಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರಾಜಧನ ನಷ್ಟವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಶಾಸಕ ಕೆ.ಸುರೇಶ್‌ಗೌಡ, ನಮ್ಮ ಕಣ್ಣಿಗೆ ಕಾಣುತ್ತಿರುವ ಅಕ್ರಮ ನಿಮ್ಮ ಕಣ್ಣಿಗೇಕೆ ಕಾಣುತ್ತಿಲ್ಲ. 'ಮಂತ್ಲಿ ಎಷ್ಟು ಫಿಕ್ಸ್ ಮಾಡಿದ್ದೀರಾ ಹೇಳಿ' ಎಂದು ಗಣಿ, ಕಂದಾಯ ಹಾಗೂ ಚೆಸ್ಕಾಂ ಅಧಿಕಾರಿಗಳನ್ನು ಪ್ರಶ್ನಿಸಿದರು.

ಇದರಿಂದ ತಬ್ಬಿಬ್ಬಾದ ಗಣಿ ಅಧಿಕಾರಿ ಪದ್ಮಜಾ ಹಾಗೂ ಕಂದಾಯ ಮತ್ತು ಚೆಸ್ಕಾಂ ಇಲಾಖೆ ಅಧಿಕಾರಿಗಳು ಹಾರಿಕೆ ಉತ್ತರ ನೀಡಿದರು. ಈ ಸಂದರ್ಭ ಸಂಸದೆ ಸುಮಲತಾ ಅಂಬರೀಶ್, ಶಾಸಕ ಸುರೇಶ್‌ಗೌಡ, ಡಿಸಿ ಅಶ್ವಥಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ಸುರೇಶ್‌ಗೌಡ ಮಾತನಾಡಿ, ನಾಗಮಂಗಲದಲ್ಲಿ ಎಸ್‌ಟಿಕೆ ಸ್ಟೋನ್ ಕ್ರಷರ್‌ನವರು ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿದ್ದಾರೆ. ಇವರಿಗೆ ಅನುಮತಿ ನೀಡಿದವರು ಯಾರು ಎಂದು ಪ್ರಶ್ನಿಸಿದರು. ಇವರು ಸಿ.ಫಾರಂ ಪಡೆದು ಚೆಸ್ಕಾಂನಿಂದ ವಿದ್ಯುತ್ ಅನುಮತಿ ಪಡೆದಿದ್ದಾರೆ. ಇದು ಅಕ್ರಮ ಎಂದು ಗೊತ್ತಿದ್ದರೂ, ಇವರಿಗೆ ಸಿ.ಫಾರಂ ಕೊಟ್ಟವರು ಯಾರು ಎಂದು ಗಣಿ ಇಲಾಖೆಯ ಅಧಿಕಾರಿ ಪದ್ಮಜಾರನ್ನು ಪ್ರಶ್ನಿಸಿದರು. ಜೊತೆಗೆ ಈ ಕ್ರಷರ್‌ನಿಂದ ರಾಜ್ಯದ ಬೊಕ್ಕಸಕ್ಕೆ 900 ಕೋಟಿ ನಷ್ಟವಾಗಿದೆ ಎಂದರು.

ಗಣಿ ಇಲಾಖೆ ಅಧಿಕಾರಿ ಪದ್ಮಜಾ ಸಿ.ಫಾರಂ ಕೊಟ್ಟ ಬಗ್ಗೆ ಸಮಗ್ರ ಪರಿಶೀಲನೆ ಅಥವಾ ತನಿಖೆ ನಡೆಸುತ್ತೇವೆ. ನಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಹೀಗೆ ಅಕ್ರಮವಾಗಿ ಸಿ.ಫಾರಂ ಕೊಟ್ಟಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಎಂದರು. ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಶಾಸಕರು, ನಾನು ಹೇಳಿದ ಮೇಲೆ ನಿಮ್ಮ ಗಮನಕ್ಕೆ ಬಂದಿದೆ ಎಂದರೆ ಇದುವರೆಗೆ ನೀವು ಏನು ಮಾಡುತ್ತಿದ್ದೀರಿ. ನೀವು ಕೆಲಸ ನಿರ್ವಹಿಸುವ ಪರಿ ಇದೆಯೇ ಎಂದು ಪ್ರಶ್ನಿಸಿದರು.

ಇನ್ನು ಸಂಸದೆ ಸುಮಲತಾ ಮಾತನಾಡಿ, ಈ ಕಂಪನಿ ವಿರುದ್ಧ ಕ್ರಮ ಕೈಗೊಳ್ಳಿ. ಜೊತೆಗೆ ಸಿ.ಫಾರಂ ಕೊಟ್ಟ ಅಧಿಕಾರಿಗಳ ವಿರುದ್ಧವೂ ಕ್ರಮ ಕೈಗೊಳ್ಳಿ, ನಾಗಮಂಗಲದ ಒಡೆಯರ್‌ಪುರ ಗ್ರಾಮದಲ್ಲಿ ಹಲವು ಕಡೆ ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದು, ಈ ಬಗ್ಗೆ ಪದೇ ಪದೆ ದೂರು ಬರುತ್ತಿದೆ. ಏನು ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರ ನೀಡಿದ ಅಧಿಕಾರಿಗಳು, 2 ಲೀಗಲ್ ಇದೆ. ಇನ್ನುಳಿದ 2 ಅಕ್ರಮ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿದ್ದೇವೆ ಎಂದರು. ಈ ವೇಳೆ ಮಧ್ಯ ಪ್ರವೇಶಿಸಿದ ಶಾಸಕ ಸುರೇಶ್‌ಗೌಡ, ಕೇವಲ ಎರಡಲ್ಲ. ನಾಗಮಂಗಲದ ಬಹುತೇಕ ಗಣಿಗಾರಿಕೆಗಳು ಅಕ್ರಮವಾಗಿದೆ. ಆದರೆ ಅಧಿಕಾರಿಗಳು ಮಾತ್ರ ಅಕ್ರಮ ಗಣಿಗಾರಿಕೆ ಪ್ರದೇಶಕ್ಕೆ ಭೇಟಿ ಕೊಡಲ್ಲ. ಭೇಟಿ ಕೊಟ್ಟರೂ ಮುಂಚೆಯೇ ಬರ್ತೀವಿ ಎಂದು ಹೇಳಿ ಅವರು ಅಲ್ಲಿಂದ ಪರಾರಿಯಾಗಲು ಇವರೇ ಸಹಾಯ ಮಾಡುತ್ತಾರೆ. ಹೀಗಿರುವಾಗ ಅಕ್ರಮ ಗಣಿಗಾರಿಕೆ ಹೇಗೆ ಬಯಲಿಗೆ ಬರುತ್ತದೆ ಎಂದರು.

ಈ ಸಂದರ್ಭ ಅಧಿಕಾರಿಗಳು 35 ಗಣಿಗಾರಿಕೆಗಳು ನಾಗಮಂಗಲದಲ್ಲಿ ಲೀಗಲ್ ಇದೆ ಎಂದಾಗ ರೊಚ್ಚಿಗೆದ್ದ ಶಾಸಕರು, ಇವರು ಸುಳ್ಳು ಹೇಳುತ್ತಿದ್ದಾರೆ. ಅಕ್ರಮ ಗಣಿಗಾರಿಕೆ ನಡೆಸುವವರ ಜೊತೆಗೆ ಅಧಿಕಾರಿಗಳ ವಿರುದ್ಧವೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಎಂದು ಆಗ್ರಹಿಸಿದರು. ಜೊತೆಗೆ ನಾಳೆ ನಡೆಯುವ ಕೆಡಿಪಿ ಸಭೆಯಲ್ಲಿ ಅಕ್ರಮ ಗಣಿಗಾರಿಕೆ ಬಗ್ಗೆ ಜೊತೆಗೆ ಅವುಗಳಿಗೆ ನೋಟೀಸ್ ನೀಡಿರುವ ಬಗ್ಗೆ ಸಮಗ್ರ ವರದಿ ಕೊಡಬೇಕು. ಇಲ್ಲದಿದ್ದರೆ ನಾಳಿನ ಕೆಡಿಪಿ ಸಭೆ ನಡೆಯಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಇನ್ನು ಸಂಸದೆ ಸುಮಲತಾ ಮಾತನಾಡಿ, ಗಣಿಗಾರಿಕೆ ನಡೆಯುವ ಕಡೆ ಬ್ಲಾಸ್ಟಿಂಗ್ ನಡೆಯುತ್ತಿದ್ದರೆ ಅಂತಹವರ ವಿರುದ್ಧವೂ ಕ್ರಮ ಕೈಗೊಳ್ಳಿ, ಎಲ್ಲಿ ರಾಜಧನ ವಸೂಲಿಯಾಗಿಲ್ಲ. ಅಲ್ಲಿ ಸಮರ್ಪಕವಾಗಿ ರಾಜಧನ ವಸೂಲಿಯಾಗಬೇಕು. ಅಕ್ರಮ ಗಣಿಗಾರಿಕೆ ನಡೆಯುತ್ತಿದ್ದರೆ ಮುಲಾಜಿಲ್ಲದೇ ಸೀಜ್ ಮಾಡಿ, ಜೊತೆಗೆ ನಾಳಿನ ಕೆಡಿಪಿ ಸಭೆಯಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿರುವವರ ಬಗ್ಗೆ ನೋಟೀಸ್ ನೀಡಿ ವರದಿ ಕೊಡಿ ಎಂದು ಸೂಚಿಸಿದರು.

ಸಭೆಯಲ್ಲಿ ಶಾಸಕ ಎಂ.ಶ್ರೀನಿವಾಸ್, ಜಿಲ್ಲಾಧಿಕಾರಿ ಅಶ್ವಥಿ, ಜಿಪಂ ಸಿಇಓ ದಿವ್ಯಪ್ರಭು, ಡಿಎಫ್‌ಓ ಪಿ.ಎ.ರುದ್ರನ್, ಎಎಸ್ಪಿ ವೇಣುಗೋಪಾಲ್ ಉಪಸ್ಥಿತರಿದ್ದರು.

# ಹಳ್ಳಿಸಂತೆ ನಿರ್ಮಾಣ ಕಾಮಗಾರಿಗೆ ಸಿಎಸ್‌ಪಿ ಭೂಮಿ ಪೂಜೆ



ಚಿನಕುರಳಿ, ಜೂ.28(ಸಿ.ಎ.ಲೋಕೇಶ್)– ಗ್ರಾಮದಲ್ಲಿ ಕೆಆರ್‌ಐಡಿಎಲ್ ವತಿಯಿಂದ 50 ಲಕ್ಷ ರೂ. ವೆಚ್ಚದ ಹಳ್ಳಿಸಂತೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ರೈತರಿಗೆ ಅನುಕೂಲವಾಗುವಂತೆ ಆಯ್ದ ಗ್ರಾಮಗಳಲ್ಲಿ ಹಳ್ಳಿ ಸಂತೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಚಿನಕುರಳಿಯಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಹಳ್ಳಿಸಂತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ. ಈಗಾಗಲೇ ಬನ್ನಂಗಾಡಿ ಸೇರಿದಂತೆ ಹಲವು ಗ್ರಾಮದಲ್ಲಿ ಹಳ್ಳಿ ಸಂತೆ ಕಾಮಗಾರಿ ಪೂರ್ಣಗೊಂಡಿದೆ. ಹೊಸಹಳ್ಳಿ ಚಿನಕುರಳಿ, ಅರಳಕುಪ್ಪೆ, ಲಕ್ಷ್ಮೀಸಾಗರ, ಸುಂಕಾತೊಣ್ಣೂರು, ನಾರಾಯಣಪುರ ಗ್ರಾಮಗಳಲ್ಲಿ ತಲಾ 50 ಲಕ್ಷ ರೂ. ವೆಚ್ಚದಲ್ಲಿ ಹಳ್ಳಿ ಸಂತೆ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದೆ. ಇದೀಗ ಚಿನಕುರಳಿಯಲ್ಲಿ ಚಾಲನೆ ನೀಡಲಾಗಿದ್ದು, ಶೀಘ್ರ ಎಲ್ಲಾ ಕಡೆ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಲಾಗುವುದು ಎಂದರು.

ಈ ವೇಳೆ ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಗ್ರಾಪಂ ಅಧ್ಯಕ್ಷ ಮಹಮದ್ ಇಮ್ತಿಯಾಜ್ ಪಾಷ, ಸದಸ್ಯರಾದ ಸಿ.ಎ.ಲೋಕೇಶ್, ಪರಮೇಶ್, ಕೃಷ್ಣೇಗೌಡ, ಪಾಪಣ್ಣ, ಮಾಜಿ ಸದಸ್ಯ ಮಹದೇವು, ಮುಖಂಡ ಅಂಕೇಗೌಡ, ಪಿಡಿಓ ಆರತಿ ಕುಮಾರಿ, ಕೆಆರ್‌ಐಡಿಎಲ್ ಎಇಇ ಮಂಜುನಾಥ್, ಎಇ ಪವಿತ್ರ, ಜಿಪಂ ಎಇಇ ಆದರ್ಶ, ಎಇಗಳಾದ ಕುಮಾರ್, ರೇವಣ್ಣ, ಬಾಲರಾಜ್ ಸೇರಿದಂತೆ ಹಲವರಿದ್ದರು.

# ವಾಣಿಜ್ಯ ಮಳಿಗೆ ಬಹಿರಂಗ ಹರಾಜಿಗೆ ಆಗ್ರಹಿಸಿ ಪ್ರತಿಭಟನೆ



ಕಿಕ್ಕೇರಿ, ಜೂ.28– ಗ್ರಾಪಂಗೆ ಸೇರಿದ ವಾಣಿಜ್ಯ ಮಳಿಗೆಗಳನ್ನು ಬಹಿರಂಗ ಹರಾಜು ಮಾಡುವಂತೆ ಆಗ್ರಹಿಸಿ ಇಲ್ಲಿಗೆ ಸಮೀಪದ ದಬ್ಬೇಘಟ್ಟ ಗ್ರಾಪಂ ಎದುರು ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ಗ್ರಾಪಂ ಸೇರಿದ ತೆಂಗಿನಘಟ್ಟ ಕಾಲುವೆ ಗೇಟ್ ಬಳಿ ಇರುವ ವಾಣಿಜ್ಯ ಮಳಿಗೆಗಳನ್ನು ಯಾವುದೇ ಹರಾಜು ಪ್ರಕ್ರಿಯೆ ನಡೆಸದೆ ಕಳೆದ 15 ವರ್ಷಗಳಿಂದ ಪ್ರಭಾವಿ ವ್ಯಕ್ತಿಯೊಬ್ಬರಿಗೆ ಬಾಡಿಗೆಗೆ ನೀಡಿರುವುದು ಸರಿಯಲ್ಲ. ಹೀಗಾಗಿ ಕೂಡಲೇ ವಾಣಿಜ್ಯ ಮಳಿಗೆಗಳನ್ನು ಬಹಿರಂಗ ಹರಾಜಿಗೆ ಒಳಪಡಿಸಬೇಕು. ಇದರಿಂದ ಪಂಚಾಯಿತಿಯ ವರಮಾನ ಹೆಚ್ಚಾಗಲಿದೆ ಎಂದರು.

ಪಿಡಿಓ ಕೆ.ಎನ್.ಉಮಾಶಂಕರ್ ಗ್ರಾಪಂ ಆಡಳಿತ ಮಂಡಳಿ ನಿರ್ಣಯದಂತೆ ವಾಣಿಜ್ಯ ಮಳಿಗೆಗಳನ್ನು ಬಾಡಿಗೆಗೆ ನೀಡಲಾಗಿದೆ. ಮುಂಬರುವ ಆಡಳಿತ ಮಂಡಳಿ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು. ಈ ವೇಳೆ ಸ್ಥಳಕ್ಕಾಗಮಿಸಿದ ತಾಪಂ ಇಓ ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ಮನ್‌ಮುಲ್ ಅಧ್ಯಕ್ಷ ಹೆಚ್.ಟಿ.ಮಂಜು, ಜೆಡಿಎಸ್ ಹೋಬಳಿ ಅಧ್ಯಕ್ಷ ಕಾಯಿ ಮಂಜೇಗೌಡ, ಮುಖಂಡರಾದ ಗಂಗಾಧರ್, ಕುಮಾರಸ್ವಾಮಿ, ಬಸವರಾಜು, ಸಿ.ಬಿ.ಸುನೀಲ್, ರವೀಶ್, ಕೃಷ್ಣ, ವಾಸು, ಜಯರಾಂ, ಕಾಂತರಾಜು, ರವಿ ಪಾಲ್ಗೊಂಡಿದ್ದರು.

# ಪುತ್ರ ಅಭಿಷೇಕ್‌ಗೆ ಟಿಕೆಟ್ ಕೇಳುವ ಅಗತ್ಯವಿಲ್ಲ



ಮಂಡ್ಯ, ಜೂ.28(ಮೋಹನ್‌ರಾಜ್)– ಬಿಜೆಪಿ ಅಥವಾ ಕಾಂಗ್ರೆಸ್ ಪಕ್ಷ ಸೇರಿ ಪುತ್ರ ಅಭಿಷೇಕ್‌ಗೆ ಟಿಕೆಟ್ ಕೇಳುವ ಅಗತ್ಯ ನನಗಿಲ್ಲ ಎಂದು ಸಂಸದೆ ಸುಮಲತಾ ಅಂಬರೀಶ್ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಯಾವುದೇ ಪಕ್ಷದ ಮುಖಂಡರ ಬಳಿ ನಾನು ಪುತ್ರನಿಗೆ ಟಿಕೆಟ್ ಬೇಡಿಕೆ ಇಟ್ಟಿಲ್ಲ. ನಾನು ಬಿಜೆಪಿ ಸೇರುತ್ತೇನೆ ಎಂಬ ವಿಚಾರ ನಿಜಕ್ಕೂ ಆಶ್ಚರ್ಯ ತಂದಿದೆ. ಅಭಿಷೇಕ್‌ಗೆ ರಾಜಕೀಯದ ಮೇಲೆ ಆಸೆ ಇದ್ದರೆ ನಿರ್ಧಾರ ತೆಗೆದುಕೊಳ್ಳಲು ಅವನು ಸ್ವತಂತ್ರನಿದ್ದಾನೆ ಎಂದರು.

ಅಭಿಷೇಕ್ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ನನ್ನ ಜತೆ ಯಾವುದೇ ಚರ್ಚೆ ಮಾಡಿಲ್ಲ. ಈ ರೀತಿ ಊಹಾಪೋಹ ಹರಿದಾಡುತ್ತಿದ್ದರೆ, ಅದು ಸುಳ್ಳು. ಒಂದು ವೇಳೆ ಅಭಿಷೇಕ್‌ಗೆ ಚುನಾವಣೆಗೆ ನಿಲ್ಲಲು ಆಫರ್ ಬಂದಿದ್ದರೆ ಯಾವ ಪಕ್ಷದಿಂದ ಬಂದಿದೆ ಎಂದು ಹೇಳುವುದಕ್ಕೆ ನಮಗೇನು ಕಷ್ಟವಿಲ್ಲ ಎಂದರು.

ಇನ್ನು ನನ್ನ ವಿಚಾರ ಮಾತನಾಡುವುದಾದರೆ ನನಗೆ ಕೆಲವೊಂದು ಪಕ್ಷದಿಂದ ಪಕ್ಷ ಸೇರ್ಪಡೆಗೆ ಆಫರ್ ಬಂದಿರುವುದು ನಿಜ. ಆದರೆ ನಾನು ಅಧಿಕೃತವಾಗಿ ಯಾವ ಪಕ್ಷವನ್ನೂ ಸೇರಿಲ್ಲ. ನಾನು ಸ್ವತಂತ್ರವಾಗಿದ್ದೇನೆ. ನಾನು ಬೆಂಗಳೂರು ಉತ್ತರ ಕ್ಷೇತ್ರಕ್ಕೆ ಬೇಡಿಕೆ ಇಟ್ಟಿದ್ದೇನೆ ಎಂಬುದು ಹಾಸ್ಯಾಸ್ಪದ. ನಾನು ಯಾವ ಕ್ಷೇತ್ರವನ್ನೂ ಕೇಳಿಲ್ಲ ಎಂದು ಸ್ಪಷ್ಟಪಡಿಸಿದರು.

2019ರಲ್ಲಿ ನಾನು ಚುನಾವಣೆಗೆ ನಿಲ್ಲಲು ಕಾಂಗ್ರೆಸ್‌ನಿಂದ ಮಂಡ್ಯ ಕ್ಷೇತ್ರವನ್ನು ಬಿಟ್ಟುಕೊಡಿ ಎಂದು ಕೇಳಿದ್ದೆ. ಆದರೆ ಅವರು ಕೊಡಲು ಸಾಧ್ಯವಿಲ್ಲ ಎಂದರು. ನಾನು ರಾಜಕೀಯಕ್ಕೆ ಬಂದಿದ್ದೇ ಮಂಡ್ಯಕ್ಕೋಸ್ಕರ. ನನಗೆ ರಾಜಕೀಯ ಅನಿವಾರ್ಯ ವಲ್ಲ. ಮಂಡ್ಯ ಜನರ ವಿಶ್ವಾಸ, ಋಣ ಅಷ್ಟೇ ಮುಖ್ಯ. ಮಂಡ್ಯಕ್ಕಾಗಿ ರಾಜಕಾರಣಕ್ಕೆ ಬಂದಿದ್ದೇನೆ ಎಂದರು.

ನನಗೆ ಅಧಿಕಾರದ ದುರಾಸೆ ಇಲ್ಲ. 2019ರಲ್ಲಿ ಕಾಂಗ್ರೆಸ್ ಟಿಕೆಟ್ ಕೊಡದಿದ್ದಾಗ ಎಂಎಲ್‌ಸಿ ಸ್ಥಾನ ಕೊಡುವುದಾಗಿ ಹೇಳಿದ್ದರು. ಬೆಂಗಳೂರು ಉತ್ತರ ಅಥವಾ ಮೈಸೂರಿನಲ್ಲಿ ನಿಲ್ಲಲು ಹೇಳಿದ್ದರು. ಆದರೆ ಎಲ್ಲವನ್ನು ಬೇಡ ಎಂದು ಮಂಡ್ಯ ಆಯ್ಕೆ ಮಾಡಿಕೊಂಡೆ. ಇಷ್ಟು ವಿರೋಧ, ಒಬ್ಬರು ಹಾಲಿ ಸಿಎಂ, ಅಷ್ಟು ಮಂದಿ ಶಾಸಕರ ವಿರುದ್ಧ ನಾನು ಚುನಾವಣೆಯಲ್ಲಿ ಗೆಲ್ಲಲು ಮಂಡ್ಯ ಜನರ ಪ್ರೀತಿ ಕಾರಣ ಎಂದರು.

ಸಂಸದ ಪ್ರತಾಪ್ ಸಿಂಹ ವಿರುದ್ಧ ಶೀಥಲ ಸಮರ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು 'ನನಗೆ ಯಾರ ವಿರುದ್ಧವೂ ಶೀಥಲ ಸಮರ ಇಲ್ಲ. ಹೆದ್ದಾರಿ ವಿಚಾರದಲ್ಲಿ ನಮ್ಮ ಜನರಿಗೆ ತೊಂದರೆಯಾದರೆ ನಾನು ಕೂಡ ಹೋರಾಟ ನಡೆಸುತ್ತೇನೆ. ಕೆಎಚ್‌ಬಿ ಕಾಲೋನಿಯಲ್ಲಿ ಹಾಳಾಗಿರುವ ರಸ್ತೆ ದುರಸ್ತಿ ಮಾಡಲು ದಿಶಾ ಸಭೆಯಲ್ಲೇ ಹಿಂದೆ ಸೂಚಿಸಿದ್ದೆ. ಅಲ್ಲಿ ಹೋಗಿ ಫೋಟೊ ತೆಗಿಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹಾಕಿದರೆ ನನಗೆ ಏನೂ ತೊಂದರೆ ಇಲ್ಲ' ಎಂದರು.

**ರೈಲಿನಲ್ಲಿ ಬಂದ ಸಂಸದೆ** ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ನಡೆಯುತ್ತಿದ್ದು ಟ್ರಾಫಿಕ್ ಕಿರಿಕಿರಿ ಹಿನ್ನಲೆಯಲ್ಲಿ ಬೆಂಗಳೂರಿನಿಂದ ಮಂಡ್ಯಕ್ಕೆ ರೈಲಿನಲ್ಲಿ ಬಂದೆ ಎಂದು ಸುಮಲತಾ ತಿಳಿಸಿದರು.

# ಹೆಮ್ಮನಹಳ್ಳಿ ಡೈರಿ ಅಧ್ಯಕ್ಷೆ, ಉಪಾಧ್ಯಕ್ಷೆ ಅವಿರೋಧ ಆಯ್ಕೆ



ಕೆ.ಆರ್.ಪೇಟೆ, ಜೂ.28(ಶ್ರೀನಿವಾಸ್)– ತಾಲೂಕಿನ ಹೆಮ್ಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅರುಣ ಜಯರಾಮೇಗೌಡ ಹಾಗೂ ಉಪಾಧ್ಯಕ್ಷರಾಗಿ ರಮ್ಯ ಸೋಮೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕಿನ ಶೀಳನೆರೆ ಹೋಬಳಿ ಹೆಮ್ಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ 10 ಮಂದಿ ನಿರ್ದೇಶಕರು ಆಯ್ಕೆಯಾಗಿದ್ದರು. ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಇವರಿಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಆನಂದ ನಾಯಕ್ ಘೋಷಿಸಿದರು. ನೂತನ ಅಧ್ಯಕ್ಷೆ ಮತ್ತು ಉಪಾಧ್ಯಕ್ಷೆಯನ್ನು, ಗ್ರಾಪಂ ಮಾಜಿ ಅಧ್ಯಕ್ಷ ಸತೀಶ್, ಮಾಜಿ ಸದಸ್ಯ ಕೃಷ್ಣೇಗೌಡ ಇತರರು ಅಭಿನಂದಿಸಿದರು.

ಈ ವೇಳೆ ಸಂಘದ ಕಾರ್ಯದರ್ಶಿ ಕಾವ್ಯ, ಗ್ರಾಪಂ ಸದಸ್ಯ ಜಗದೀಶ್, ಲಲಿತಾ ಗಂಗೇಗೌಡ, ಜಯರಾಂ, ಮಧು, ಮುಖಂಡರಾದ ಕನ್ನಡ ಪ್ರೇಮಿ ಗಂಗೇಗೌಡ, ಅಣ್ಣೇಗೌಡ, ಶೇಖರ್, ಪುಟ್ಟಸ್ವಾಮಿಗೌಡ, ಮನು, ರವಿ, ಉಮೇಶ್ ಹೆಚ್.ಡಿ.ವೆಂಕಟಪ್ಪ, ಅಂಗಡಿ ರಾಮೇಗೌಡ, ಮೋಹನ್, ನಿರ್ದೇಶಕರಾದ ಗಿರಿಜಾ ಲೋಕೇಶ್, ಜಯಮ್ಮ ವೆಂಕಟೇಗೌಡ, ಮೀನಾಕ್ಷಿ ಸತೀಶ್, ಯೋಗಮ್ಮ ಭೀಮೇಗೌಡ, ರುಕ್ಮಿಣಿ ಅಪ್ಪಾಜಿಗೌಡ, ಲಕ್ಷ್ಮಮ್ಮ ಲಕ್ಷ್ಮಣಗೌಡ, ಶಶಿಕಲಾ ಅಣ್ಣೇಗೌಡ, ಶಾರದಮ್ಮ ಬೋರೇಗೌಡ, ಲಲಿತ ಕಾಂತರಾಜ್, ಇತರರಿದ್ದರು.

# ಗೃಹಿಣಿ, ಇಬ್ಬರು ಮಕ್ಕಳು ನಾಪತ್ತೆ



ಕೆ.ಆರ್.ಪೇಟೆ, ಜೂ.28(ಶ್ರೀನಿವಾಸ್)– ತಾಲೂಕಿನ ಊಚನಹಳ್ಳಿ ಗ್ರಾಮದ ಗೃಹಿಣಿಯೊಬ್ಬರು ತನ್ನ ಇಬ್ಬರು ಮಕ್ಕಳೊಂದಿಗೆ ನಾಪತ್ತೆಯಾಗಿದ್ದಾರೆ. ಗ್ರಾಮದ ನಿವಾಸಿ ಹೆಚ್.ಎಂ.ರವಿ ಎಂಬುವರ ಪತ್ನಿ ಪಲ್ಲವಿ(24), ಪುತ್ರಿಯರಾದ ಸಂಧ್ಯಾ(7), ಹರ್ಷಿಣಿ(4) ನಾಪತ್ತೆಯಾದವರು. ಜೂ.11ರಂದು ಮಕ್ಕಳೊಂದಿಗೆ ಮನೆಯಿಂದ ಹೊರಹೋದ ಪಲ್ಲವಿ ಅವರು ಇದುವರೆಗೂ ವಾಪಸ್ ಬಂದಿಲ್ಲ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಕೆ.ಆರ್.ಪೇಟೆ ಪಟ್ಟಣ ಪೊಲೀಸ್ ಠಾಣೆಗೆ ಖುದ್ದಾಗಿ ಅಥವಾ ದೂ:08230–262248, 9480804859, 6363763553 ಸಂಪರ್ಕಿಸುವಂತೆ ಕೆ.ಆರ್.ಪೇಟೆ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ದೀಪಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಗ್ನಿಪಥ್ ಯೋಜನೆ ಯುವಕರನ್ನು ಬೀದಿಪಾಲು ಮಾಡುವ ಹುನ್ನಾರ



ಮಳವಳ್ಳಿ, ಜೂ.28(ಮೋಹನ್‌ರಾಜ್)– ಕೇಂದ್ರ ಸರ್ಕಾರ ಅಗ್ನಿಪಥ್ ಯೋಜನೆ ಮೂಲಕ 4 ವರ್ಷಗಳ ಕಾಲ ಸೇನೆಯಲ್ಲಿ ದುಡಿಸಿಕೊಂಡು ನಂತರ ಲಕ್ಷಾಂತರ ಯುವಕರನ್ನು ಬೀದಿಪಾಲು ಮಾಡಲು ಹೊರಟಿದೆ ಎಂದು ರಾಜ್ಯ ಕೆಪಿಸಿಸಿ ಉಪಾಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಟೀಕಿಸಿದರು.

ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಕೇಂದ್ರ ಸರ್ಕಾರದ ಅಗ್ನಿಪಥ್ ಯೋಜನೆ ವಿರೋಧಿಸಿ, ಸಿಬಿಐ, ಇಡಿ ಸಂಸ್ಥೆಗಳ ದುರ್ಬಳಕೆಯನ್ನು ಖಂಡಿಸಿ ಹಾಗೂ ರಾಜ್ಯ ಸರ್ಕಾರ ಪಠ್ಯ ಪುಸ್ತಕ ಪರಿಷ್ಕರಣೆ ಕ್ರಮವನ್ನು ವಿರೋಧಿಸಿ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಅವರು, ವರ್ಷಕ್ಕೆ 2 ಕೋಟಿ ಉದ್ಯೋಗ ಸೇರಿದಂತೆ ಹಲವು ಸುಳ್ಳು ಭರವಸೆಗಳೊಂದಿಗೆ ಅಧಿಕಾರಕ್ಕೆ ಬಂದ ಕೇಂದ್ರ ಬಿಜೆಪಿ ಸರ್ಕಾರ ಎಂಟು ವರ್ಷಗಳಲ್ಲಿ ಎಲ್ಲಾ ಉದ್ಯೋಗಾವಕಾಶ ಗಳನ್ನು ನಾಶ ಮಾಡಿರುವುದೇ ಅಲ್ಲದೆ ಇದೀಗ ಅಗ್ನಿಪಥ್ ಯೋಜನೆ ಮೂಲಕ ನಾಲ್ಕು ವರ್ಷಗಳ ಕಾಲ ಸೇನೆಯಲ್ಲಿ ದುಡಿಸಿಕೊಂಡು ನಂತರ ಲಕ್ಷಾಂತರ ಯುವಕರನ್ನು ಬೀದಿಪಾಲು ಮಾಡಲು ಹೊರಟಿದೆ ಎಂದು ಟೀಕಿಸಿದರು. ಸರ್ಕಾರದ ದುರಾಡಳಿತದ ವಿರುದ್ಧ ಧ್ವನಿ ಎತ್ತಿದ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ವಿರುದ್ಧ ಇ ಡಿ, ಐ ಟಿ ಸಿಬಿಐ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ವಿಚಾರಣೆ ನೆಪದಲ್ಲಿ ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಕಿರುಕುಳ ನೀಡುವ ನೀಚ ರಾಜಕಾರಣ ವನ್ನು ಪ್ರಧಾನಿ ಮೋದಿ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.



ಚಿನಕುರಳಿ ಗ್ರಾಮದ ಜಾಮೀಯಾ ಮಸೀದಿ ನೂತನ ವಾಣಿಜ್ಯ ಮಳಿಗೆಗಳನ್ನು ಶಾಸಕ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು. ಈ ವೇಳೆ ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಸಿ.ಅಶೋಕ್, ಗ್ರಾಪಂ ಅಧ್ಯಕ್ಷ ಮಹಮ್ಮದ್ ಇಮ್ತಿಯಾಜ್ ಪಾಷ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಗ್ರಾಪಂ ಸದಸ್ಯರು, ಮುಸ್ಲಿಂ ಸಮುದಾಯ ಹಿರಿಯ ಮತ್ತು ಕಿರಿಯ ಯಜಮಾನರು, ಹಾಜರಿದ್ದರು.

# ಖಾಸಗಿ ಪಾಲಾಗಿರುವ ನೀರಿನ ಬಾವಿಗಳ ರಕ್ಷಿಸಿ ಅಭಿವೃದ್ಧಿ ಪಡಿಸೋಣ

### ವಿರಾಜಪೇಟೆ ಪಪಂ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ ತೀರ್ಮಾನ



ವಿರಾಜಪೇಟೆ, ಜೂ.28– ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕುಡಿಯುವ ನೀರಿನ ಹಳೆಯ ಬಾವಿಗಳು ಕೆಲವು ಖಾಸಗಿ ವ್ಯಕ್ತಿಗಳ ಪಾಲಾಗಿದ್ದು, ಅವುಗಳನ್ನು ರಕ್ಷಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ಅಭಿವೃದ್ಧಿ ಪಡಿಸಲು ಪಟ್ಟಣ ಪಂಚಾಯಿತಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಇಲ್ಲಿನ ಪಟ್ಟಣದ ಪಂಚಾಯಿತಿ ಸಭಾಂಗಣದಲ್ಲಿ ಅಧ್ಯಕ್ಷೆ ಸುಸ್ಮಿತಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದ ಬಳಿಕ ಈ ನಿರ್ಧಾರ ಕೈಗೊಳ್ಳಲಾಯಿತು.

ಪಂಚಾಯಿತಿಯ ಇಂಜಿನಿಯರ್ ಹೇಮ್ ಕುಮಾರ್ ಅವರು ಮಾತನಾಡಿ, ಅಮೃತ ನಗರ ಯೋಜನೆ ಯಡಿ 1 ಕೋಟಿ ರೂ. ಅನುದಾನವನ್ನು ಘನತ್ಯಾಜ್ಯ ಮತ್ತು ಶೌಚಾಲಯಗಳ ನಿರ್ಮಾಣಕ್ಕೆ ಬಳಸಬಹುದಾಗಿದೆ ಎಂದು ತಿಳಿಸಿದರಲ್ಲದೆ ತಾಲೂಕು ಕಚೇರಿ ಬಳಿ 12 ಲಕ್ಷ ರೂ. ವೆಚ್ಚ ದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸುವ ಕುರಿತು ಸಭೆಗೆ ತಿಳಿಸಿದಾಗ ಕೆಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ ತಾಲೂಕು ಕಚೇರಿ ಅಭಿವೃದ್ಧಿಗೆ ಸರ್ಕಾರ ಕೋಟ್ಯಂತರ ರೂ. ಅನುದಾನ ನೀಡಿದ್ದು, ಎರಡು ಅಂತಸ್ಥಿನ ನೂತನ ಕಟ್ಟಡ ನಿರ್ಮಿಸುತ್ತಿದ್ದಾರೆ. ಅಲ್ಲಿ ಅವರೇ ಶೌಚಾಲಯ ಕಟ್ಟಿಕೊಳ್ಳುತ್ತಾರೆ. ನಾವು ಪಂಚಾಯಿತಿ ಆವರಣದಲ್ಲಿ ಶಾಚಾಲಯ ನಿರ್ಮಿಸುವುದು ಸೂಕ್ತ ಎಂದು ಸದಸ್ಯ ಡಿ.ಪಿ.ರಾಜೇಶ್ ಹೇಳಿದಾಗ ಸಭೆ ಒಪ್ಪಿಗೆ ನೀಡಿತು.

ಸದಸ್ಯೆ ಎಂ.ಕೆ.ದೇಚಮ್ಮ ಮಾತನಾಡಿ ಗುತ್ತಿಗೆ ಪೌರ ಕಾರ್ಮಿಕರಲ್ಲಿ ಕೆಲವರನ್ನು ಕೈ ಬಿಡಲಾಗಿದೆ. ಇದು ಏಕೆ ಪ್ರಶ್ನಿಸಿದರು. ಈ ವೇಳೆ ಇದಕ್ಕೆ ಉತ್ತರಿಸಿದ ಅಧಿಕಾರಿಗಳು ಕೆಲಸಕ್ಕೆ ಬರದೆ ಗೈರಾದ ಕಾರಣಕ್ಕೆ ಕೆಲವರನ್ನು ಕೈ ಬಿಡಲಾಗಿದೆ ಎಂದರು. ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿ, 2011ರಿಂದ 14 ರವರೆಗೆ ಪಿಎಫ್ ನಿಧಿಯನ್ನು ಹಿಡಿಯದೆ ಪೌರ ಕಾರ್ಮಿಕರಿಗೆ ಸಂಪೂರ್ಣ ವೇತನ ನೀಡಲಾಗಿದೆ ಎಂದು ಸಿ.ಕೆ.ಪೃಥ್ವಿನಾಥ್ ಪ್ರಶ್ನೆಗೆ ಉತ್ತರಿಸಿದರು.

ಸದಸ್ಯೆ ದೇಚಮ್ಮ ಮಾತನಾಡಿ, ಘನ ತ್ಯಾಜ್ಯ ನಿರ್ವಹಣೆಗಾಗಿ ಕೋಟಿ ಗಟ್ಟಲೆ ಹಣ ಖರ್ಚಾಗುತ್ತಿದೆ. ಪೆರುಂಬಾಡಿಯ ತ್ಯಾಜ್ಯ ನಿರ್ವಹಣಾ ಘಟಕದ ಆವರಣ ಪ್ಲಾಸ್ಟಿಕ್ ಮಯವಾಗಿದೆ. ಪಂಚಾಯಿತಿ ಜೆಸಿಬಿ ಮೂಲೆ ಸೇರಿ ವರ್ಷಗಳೇ ಕಳೆದಿವೆ, ಖಾಸಗಿ ಜೆಸಿಬಿಗೆ ಬಾಡಿಗೆ ನೀಡಿ ಕಾಮಗಾರಿ ನಡೆಸುವ ಬದಲು ಪಂಚಾಯಿತಿ ಜೆಸಿಬಿಯನ್ನೆ ದುರಸ್ತಿ ಮಾಡಿಸಬಹುದಿತ್ತು ಎಂದಾಗ ಇದಕ್ಕೆ ಪೂರಕವಾಗಿ ಸದಸ್ಯ ರಂಜಿ ಪೂಣಚ್ಚ ಮಾತನಾಡಿ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಶುಚಿತ್ವವೇ ಇಲ್ಲದಂತಾಗಿದೆ. ತ್ಯಾಜ್ಯ ವಿಲೇವಾರಿಯಿಂದ ಪರಿಸರ ಕೊಳೆತು ನಾರುತ್ತಿದೆ. ಅಲ್ಲಿನ ತ್ಯಾಜ್ಯ ವಿಲೇವಾರಿ ಘಟಕದ ಬಳಿಯ ನಿವಾಸಿಗಳ ಪಾಡು ಹೇಳತೀರದಾಗಿದೆ ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ವಿನಾಂಕ್ ಕುಟ್ಟಪ್ಪ ಸದಸ್ಯರಾದ ಮಹ್ಮದ್ ರಫಿ, ಅಗಸ್ಟಿನ್ ಬೆನ್ನಿ, ಜಲೀಲ್, ಸಚಿನ್ ಕಟ್ಟಯ್ಯ ಹಾಗೂ ಇತರ ಸದಸ್ಯರು ಅಭಿವೃದ್ಧಿ ಕಾಮಗಾರಿಗಳ ಚರ್ಚೆಯಲ್ಲಿ ಭಾಗವಹಿಸಿದ್ದರು. ಪಂಚಾಯಿತಿ ಸಿಬ್ಬಂದಿಗಳು ಸಭೆಯಲ್ಲಿ ಹಾಜರಿದ್ದರು.



# ಕೊಡಗಿನ ಸಹಕಾರ ತರಬೇತಿ ಕೇಂದ್ರಕ್ಕೆ ಪ್ರಥಮ ಬಹುಮಾನ

ಮಡಿಕೇರಿ, ಜೂ.28– ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ವತಿಯಿಂದ ನಡೆದ ರಾಜ್ಯ ಮಟ್ಟದ ಸಹಕಾರ ಚರ್ಚಾ ಸ್ಪರ್ಧೆಯಲ್ಲಿ ಭವ್ಯ ಮತ್ತು ಸ್ಪರ್ಶ ಅವರು ಭಾಗವಹಿಸಿದ್ದರು. ಕೊಡಗಿನ ಸಹಕಾರ ತರಬೇತಿ ಕೇಂದ್ರಕ್ಕೆ ಪ್ರಥಮ ಬಹುಮಾನ ಮತ್ತು ಪರ್ಯಾಯ ಪಾರಿತೋಷಕ ಬಂದಿದೆ ಎಂದು ನಗರದ ಕೆಐಸಿಎಂ ಪ್ರಾಂಶುಪಾಲರಾದ ಡಾ.ಆರ್.ಎಸ್.ರೇಣುಕಾ ಅವರು ತಿಳಿಸಿದ್ದಾರೆ.

# ಹಾಲು ಒಕ್ಕೂಟದ ಸೌಲಭ್ಯ ಸದ್ಬಳಕೆಗೆ ಸಲಹೆ



ಪಿರಿಯಾಪಟ್ಟಣ, ಜೂ.28(ವೀರೇಶ್)– ರೈತರು ಮೈಸೂರು ಜಿಲ್ಲಾ ಹಾಲು ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಸಲಹೆ ನೀಡಿದರು.

ತಾಲೂಕಿನ ದೊಡ್ಡಹರವೆ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಮತ್ತು ಸಭಾಂಗಣ ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಕೃತಿಕ ವಿಕೋಪಗಳಿಂದ ರೈತರು ವ್ಯವಸಾಯದಲ್ಲಿ ಸಾಕಷ್ಟು ನಷ್ಟಗಳನ್ನು ಅನುಭವಿಸುತ್ತಿದ್ದು, ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಹೈನುಗಾರಿಕೆಯತ್ತ ವಾಲುತ್ತಿದ್ದಾರೆ. ಹೈನುಗಾರಿಕೆಯಿಂದ ನಷ್ಟವುಂಟಾಗಿ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ನಿದರ್ಶನವೇ ಇಲ್ಲ. ಆದ್ದರಿಂದ ರೈತರು ಹೆಚ್ಚಿನ ಮಟ್ಟದಲ್ಲಿ ಹೈನುಗಾರಿಕೆಯತ್ತ ತೊಡಗಿಕೊಳ್ಳಬೇಕು ಎಂದು ಕರೆ ನೀಡಿದರು.

ತಾಲ್ಲೂಕಿನಾದ್ಯಂತ ಈ ಹಿಂದೆ ಕೇವಲ 56 ಸಾವಿರ ಲೀ. ಹಾಲು ಉತ್ಪಾದನೆಯಾಗುತ್ತಿದ್ದು, ಪ್ರಸ್ತುತ 1.50 ಲಕ್ಷದ ಲೀ.ಗಳಿಗೆ ಹೆಚ್ಚಿಸಲಾಗಿದೆ. ಎಲ್ಲಾ ಹೈನುಗಾರಿಕೆ ರೈತರಿಗೆ ಒಕ್ಕೂಟ ಮೂಲ ಸೌಕರ್ಯ ಕಲ್ಪಿಸಲು ಹೆಚ್ಚಿನ ಆದ್ಯತೆ ನೀಡುತ್ತಿದ್ದು, ರೈತರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಮೈಮುಲ್ ನಿರ್ದೇಶಕ ಹೆಚ್.ಡಿ.ರಾಜೇಂದ್ರ ಮಾತನಾಡಿದರು. ಕಾರ್ಯಕ್ರಮದಲ್ಲಿ ಆವರ್ತಿ ಗ್ರಾಪಂ ಸದಸ್ಯ ಎಂ.ಬಿ.ಶಿವಕುಮಾರ್, ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ವಿಜಯ ಕುಮಾರ್, ದೊಡ್ಡಹರವೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷೆ ಸವಿತಾ, ಉಪಾಧ್ಯಕ್ಷೆ ಸುಂದ್ರಮ್ಮ, ನಿರ್ದೇಶಕರಾದ ಮುತ್ತುರಾಜು, ಕೃಷ್ಣಯ್ಯ, ಶ್ರೀನಿವಾಸ, ಮನು ಕುಮಾರ್, ಸಿದ್ದರಾಜು, ಕಾಳಮ್ಮ, ಲಕ್ಷ್ಮಮ್ಮ ಈರಯ್ಯ, ಮೈಸೂರು ಜಿಲ್ಲಾ ಹಾಲು ಒಕ್ಕೂಟ ವ್ಯವಸ್ಥಾಪಕ ಸಣ್ಣತಮ್ಮೇಗೌಡ, ವಿಸ್ತರಣಾಧಿಕಾರಿ ಬಿ.ಎಸ್.ನಿಶ್ಚಿತ್ ಇದ್ದರು.

# ಹುಣಸೂರು ಪಿಯು ಕಾಲೇಜಿಗೆ ಕುಡಿಯುವ ನೀರಿನ ಘಟಕ ಕೊಡುಗೆ



ಹುಣಸೂರು, ಜೂ.26(ಕೆಕೆ)– ಹುಣಸೂರು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಮೈಸೂರಿನ ಆರ್‌ಬಿಐನಿಂದ 1.95ಲಕ್ಷ ರೂ. ಮೌಲ್ಯದ 2 ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆ ನೀಡಲಾಯಿತು.

ಕಾಲೇಜಿನ ಪ್ರಾಂಶುಪಾಲ ರಾಮೇಗೌಡ ಮಾತನಾಡಿ, ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಕುಡಿಯುವ ನೀರಿನ ಘಟಕಗಳಿಗಾಗಿ ಮೈಸೂರಿನ ಆರ್‌ಬಿಐ ಬ್ಯಾಂಕ್ ನೋಟ್ ಪೇಪರ್ ಮಿಲ್(ಬಿ.ಎನ್.ಪಿ.ಎಂ.ಎಲ್) ಅವರನ್ನು ಕೇಳಿದಾಗ ಎರಡು ಯೂನಿಟ್‌ಗಳನ್ನು ನೀಡಲು ಒಪ್ಪಿಕೊಂಡರು. ಅದರಂತೆ ಕಾಲೇಜಿಗೆ ಬಿಸಿನೀರು ಹಾಗೂ ತಣ್ಣೀರಿನ ಯೂನಿಟ್‌ಗಳನ್ನು ನೀಡಿದ್ದಾರೆ ಎಂದರು.

ಜಿಲ್ಲೆಯ 54 ಕಾಲೇಜುಗಳಿಗೆ 73 ಯೂನಿಟ್‌ಗಳನ್ನು ಆರ್‌ಬಿಐನಿಂದ ನೀಡಲಾಗಿದೆ ಎಂದ ಅವರು, ಕಾಲೇಜಿಗೆ 12.5 ಲಕ್ಷ ರೂ. ಮೌಲ್ಯದ 25 ಕಂಪ್ಯೂಟರ್, ಯುಪಿಎಸ್, ಟೇಬಲ್ ಚೇರ್‌ಗಳು ನೀಡಲು ಒಪ್ಪಿದ್ದಾರೆ ಎಂದರು.

# ಐರ್ಲೆಂಡ್ ವಿರುದ್ಧ ಭಾರತಕ್ಕೆ ರೋಚಕ ಗೆಲುವು: ಸರಣಿ ವಶ




ಡಬ್ಲಿನ್(ಐರ್ಲೆಂಡ್), ಜೂ.28– ದೀಪಕ್‌ಹೂಡಾ ಭರ್ಜರಿ ಶತಕದ ನೆರವಿನಿಂದ ಐರ್ಲೆಂಡ್ ವಿರುದ್ಧ ಭಾರತ 4 ರನ್‌ಗಳ ರೋಚಕ ಗೆಲುವು ದಾಖಲಿಸಿತ್ತು. ಈ ಮೂಲಕ 2 ಪಂದ್ಯಗಳ ಟಿ20 ಸರಣಿಯನ್ನು 2–0 ಅಂತರದಲ್ಲಿ ವಶಪಡಿಸಿಕೊಂಡಿದೆ.

ಇಲ್ಲಿನ ಡಬ್ಲಿನ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರ ಇಶಾನ್ ಕಿಶಾನ್ ಕೇವಲ 3ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಸಂಜು ಸ್ಯಾಮ್ಸನ್‌ಗೆ ಜೊತೆಯಾದ ದೀಪಕ್ ಹೂಡ 2ನೇ ವಿಕೆಟ್‌ಗೆ 176 ರನ್‌ಗಳ ಭರ್ಜರಿ ಜೊತೆಯಾಟದ ಕಾಣಿಕೆ ನೀಡಿದರು.

42 ಎಸೆತ ಎದುರಿಸಿದ ಸಂಜು 77ರನ್ ಗಳಿಸಿದರೆ, 57 ಎಸೆತ ಎದುರಿಸಿದ ದೀಪಕ್ ಹೂಡ 104ರನ್ ಗಳಿಸಿದರು. ಭಾರತ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 225ರನ್‌ಗಳ ಬೃಹತ್ ಮೊತ್ತ ದಾಖಲಿಸಿತು.

ಐರ್ಲೆಂಡ್ ಪರ ಮಾರ್ಕ್‌ಅಡೇರ್ 3, ಜೋಶ್‌ಲಿಟಲ್ ಹಾಗೂ ಕ್ರೇಗ್‌ಯಂಗ್ ತಲಾ 2 ವಿಕೆಟ್ ಪಡೆದರು. ಗೆಲುವಿನ ಗುರಿ ಬೆನ್ನತ್ತಿದ್ದ ಐರ್ಲೆಂಡ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 221ರನ್ ಗಳಿಸಿತ್ತು. ಐರ್ಲೆಂಡ್ ಪರ ಪಾಲ್‌ಸ್ಟಿರ್ಲಿಂಗ್ 40, ಆಂಡ್ರ್ಯೂ ಬಾಲ್ಬಿರ್ನಿ 60, ಹ್ಯಾರಿಟೆಕ್ಟರ್ 39, ಜಾರ್ಜ್‌ಡಾಕ್ರೆಲ್ 34, ಮಾರ್ಕ್‌ಅಡೇರ್ 23ರನ್ ಗಳಿಸಿದರು. ಭಾರತದ ಪರ ಭುವನೇಶ್ವರ್ ಕುಮಾರ್, ಹರ್ಷಲ್‌ಪಟೇಲ್, ರವಿಬಿಷ್ಣೋಯಿ, ಮಲ್ಲಿಕ್ ತಲಾ ಒಂದೊಂದು ವಿಕೆಟ್ ಪಡೆದರು. ದೀಪಕ್ ಹೂಡ ಪಂದ್ಯ ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ಮಿತ್ರ ಬುಧವಾರ 29 ಜೂನ್ 2022

# ಭೂಕಂಪನ ಆತಂಕದ ನಡುವೆ ಮನೆ ಮೇಲೆ ಉರುಳಿದ ಬಂಡೆ

## ಮೇಲ್ಛಾವಣಿ, ಅಡುಗೆ ಕೋಣೆ ನಾಶ, ಅಪಾಯದಿಂದ ತಾಯಿ-ಮಗ ಪಾರು

ಮಡಿಕೇರಿ, ಜೂ.28– ಕೊಡಗಿನ ವಿವಿಧೆಡೆ ಸಂಭವಿಸುತ್ತಿರುವ ಭೂಕಂಪನ ಆತಂಕದ ನಡುವೆಯೇ ಕರಿಕೆ ಗ್ರಾ.ಪಂ ವ್ಯಾಪ್ತಿಯ ಕುಂಡತ್ತಿಕಾನ ಗ್ರಾಮದಲ್ಲಿ ಬಂಡೆಯೊಂದು ಮನೆಯ ಮೇಲೆ ಉರುಳಿ ಬಿದ್ದ ಘಟನೆ ಸಂಭವಿಸಿದೆ.



ಜೂ.26ರ ಮಧ್ಯ ರಾತ್ರಿ ಜೋರಾಗಿ ಮಳೆ ಸುರಿದ ಪರಿಣಾಮ ವಾರ್ಡ್ ಸಂಖ್ಯೆ 3ರ ನಿವಾಸಿ ಜಾನಕಿ ಎಂಬವರ ಶೀಟ್ ಮನೆಯ ಮೇಲೆ ಬಂಡೆ ಕಲ್ಲೊಂದು ಉರುಳಿ ಬಿದ್ದಿದೆ. ಇದರಿಂದ ಮನೆಯ ಮೇಲ್ಛಾವಣಿ ಮತ್ತು ಅಡುಗೆ ಕೋಣೆ ಸಂಪೂರ್ಣ ನಾಶವಾಗಿದೆ. ಬಂಡೆಕಲ್ಲು ಅಡುಗೆ ಮನೆಗೆ ಬಿದ್ದ ಪರಿಣಾಮ ವಸ್ತುಗಳೆಲ್ಲವೂ ಹಾಳಾಗಿದ್ದು, ಅದೃಷ್ಟವಶಾತ್ ಪಕ್ಕದ ಕೋಣೆಯಲ್ಲೇ ಮಲಗಿತ್ತಿದ್ದ ಜಾನಕಿ ಹಾಗೂ ಅವರ ಪುತ್ರ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮಧ್ಯರಾತ್ರಿ ಕೇಳಿ ಬಂದ ದೊಡ್ಡ ಶಬ್ಧದಿಂದ ಗಾಬರಿಯಾಗಿ ಎಚ್ಚರಗೊಂಡಾಗ ಬಂಡೆಕಲ್ಲು ಅಡುಗೆ ಕೋಣೆಯೊಳಗೆ ಬಿದ್ದಿತ್ತು. ನಂತರ ನಾವು ಮತ್ತಷ್ಟು ಅನಾಹುತ ಸಂಭವಿಸಬಹುದೆಂದು ಭಯದಿಂದ ಪಕ್ಕದ ಮನೆಯಲ್ಲಿ ಆಶ್ರಯ ಪಡೆದೆವು ಎಂದು ಜಾನಕಿ ಹೇಳಿದರು.

**ಇನ್ನೂ 2 ಬಂಡೆಗಳಿವೆ:** ಪಕ್ಕದಲ್ಲೇ ಇರುವ ಬೆಟ್ಟದಿಂದ ಬಂಡೆ ಉರುಳಿದ್ದು, ಇನ್ನೂ ಎರಡು ಬಂಡೆಗಳು ಬೀಳುವ ಹಂತದಲ್ಲಿವೆ. ಈ ಭಾಗದಲ್ಲಿ ಹತ್ತಾರು ಮನೆಗಳಿವೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ. ಮಾಹಿತಿ ತಿಳಿದ ಗ್ರಾಪಂ ಸದಸ್ಯೆ ಜಯಶ್ರೀ ಸ್ಥಳ ಪರಿಶೀಲನೆ ನಡೆಸಿದರು.

**ಭೂಮಿ ಕಂಪಿಸಿತ್ತು:** ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಗಡಿ ಪ್ರದೇಶದಲ್ಲಿ ಜೂ.25 ರಂದು ಬೆಳಗ್ಗೆ ಭೂಮಿ ಕಂಪಿಸಿತ್ತು. ಕಂಪನದ ತೀವ್ರತೆ ರಿಕ್ಟರ್ ಮಾಪಕದಲ್ಲಿ 2.3ರಷ್ಟಿತ್ತು. ಕೊಡಗಿನ ಗಡಿ ಭಾಗವಾದ ಕರಿಕೆ, ಸಂಪಾಜೆ, ಚೆಂಬು ವಿಭಾಗದಲ್ಲಿ ಬೆಳಗ್ಗೆ 9 ಮತ್ತು 9.10 ಗಂಟೆಯ ನಡುವೆ ಕೆಲವು ಸೆಕೆಂಡ್‌ಗಳ ಕಾಲ ಭೂಮಿ ಕಂಪಿಸಿತ್ತು. ಕೆಲವು ಮನೆಗಳಲ್ಲಿ ಪಾತ್ರೆಗಳು ಅಲುಗಾಡಿದ ಅನುಭವವಾಗಿದ್ದರೆ, ಮತ್ತೆ ಕೆಲವು ಕಡೆ ಭೂಮಿಯೊಳಗೆ ದೊಡ್ಡ ಪ್ರಮಾಣದ ಶಬ್ಧವಾಗಿದೆ. ಮಡಿಕೇರಿ ತಾಲೂಕಿನ ಕರಿಕೆ ಗ್ರಾಮದಿಂದ ವಾಯುವ್ಯ ದಿಕ್ಕಿನಲ್ಲಿ 4.7 ಕಿ.ಮೀ ದೂರದ ಪ್ರದೇಶದ ಭೂಮಿಯ 10 ಕಿ.ಮೀ. ಆಳದಲ್ಲಿ ಭೂಕಂಪನವಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿತ್ತು.

ಈ ಭೂಕಂಪನದ ಪರಿಣಾಮದಿಂದ ಬಂಡೆ ಉರುಳಿರಬಹುದೆಂದು ಕರಿಕೆ ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ನೀಡಿದ ನಂತರವಷ್ಟೇ ಸತ್ಯಾಂಶ ಹೊರ ಬೀಳಲಿದೆ. ಹಿರಿಯ ಭೂವಿಜ್ಞಾನಿಗಳು ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರ ಆತಂಕ ದೂರ ಮಾಡಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

## ಜು.2, ವಿ.ಪೇಟೆ ತಾಲೂಕು ಸರ್ಕಾರಿ ನೌಕರರ ಸಂಘದ ಸಭೆ


ವಿರಾಜಪೇಟೆ, ಜೂ.28– ರಾಜ್ಯ ಸರ್ಕಾರಿ ನೌಕರರ ವಿರಾಜಪೇಟೆ ತಾಲೂಕು ಶಾಖೆಯ ವಾರ್ಷಿಕ ಮಹಾಸಭೆಯು ಜು.2ರಂದು ಮಧ್ಯಾಹ್ನ 1 ಗಂಟೆಗೆ ಪಟ್ಟಣದ ಗಾಂಧಿನಗರದಲ್ಲಿರುವ ಸರ್ಕಾರಿ ನೌಕರರ ಭವನದ ಸಭಾಂಗಣದಲ್ಲಿ ನಡೆಯಲಿದೆ ಎಂದು ನೌಕರರ ಸಂಘದ ಅಧ್ಯಕ್ಷ ಬಿ.ಎಸ್.ಗುರುರಾಜ್ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ವಿರಾಜಪೇಟೆ ಪ್ರೆಸ್ ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ವಾರ್ಷಿಕ ಮಹಾಸಭೆಗೆ ಸಂಘದ ಜಿಲ್ಲಾ ಶಾಖೆಯ ಅಧ್ಯಕ್ಷರಾದ ಪೊನ್ನಚ್ಚನ ಶ್ರೀನಿವಾಸ್ ಹಾಗೂ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ. ಮಹಾಸಭೆಯಲ್ಲಿ ವಿರಾಜಪೇಟೆ ತಾಲೂಕು ಶಾಖೆಯ ಕುಂದು ಕೊರತೆಗಳನ್ನು ಚರ್ಚಿಸಲಾಗುವುದು. ಅದರಿಂದ ಎಲ್ಲಾ ಸರ್ಕಾರಿ ನೌಕರರು ಸಭೆಯಲ್ಲಿ ಭಾಗವಹಿಸುವಂತೆ ಗುರುರಾಜ್ ಕೋರಿದ್ದಾರೆ

ಗೋಷ್ಠಿಯಲ್ಲಿ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಈ. ಸುರೇಂದ್ರ, ಕಾರ್ಯದರ್ಶಿ ಬಿ.ಟಿ.ದೇವರಾಜ್, ಖಜಾಂಚಿ ಎ.ಬಿ.ಲಲಿತಾ, ಸಂಘಟನಾ ಕಾರ್ಯದರ್ಶಿ ಹೆಚ್.ಬಿ. ಅಶ್ವಿನ್ ಕುಮಾರ್, ನಿರ್ದೇಶಕರಾದ ಕೆ.ಎಂ.ಸೋಮಣ್ಣ, ಎ.ವಿ.ಮಂಜುನಾಥ್, ಎಂ.ಎಲ್.ಹರೀಶ್ ಉಪಸ್ಥಿತರಿದ್ದರು.

## ಜು.2, 3ರಂದು ಮೈಸೂರಲ್ಲಿ 'ತೇಂಬಾಡ್' ಕೊಡವ ಸಿನಿಮಾ

ಮೈಸೂರು, ಜೂ.28– ಭಕ್ತಿ ಪ್ರೊಡಕ್ಷನ್‌ನಡಿ ನಿರ್ಮಾಣಗೊಂಡಿರುವ ಕೊಡವ ಸಿನಿಮಾ 'ತೇಂಬಾಡ್' ಕೊಡಗು ಜಿಲ್ಲೆಯಲ್ಲಿ ಯಶಸ್ವಿ ಪ್ರದರ್ಶನ ಕಂಡಿದ್ದು, ಇದೀಗ ಮೈಸೂರಿನಲ್ಲಿ ಪ್ರದರ್ಶನ ಕಾಣಲು ಸಿದ್ಧವಾಗಿದೆ.




ಈಗಾಗಲೇ ಕೊಡಗು ಜಿಲ್ಲೆಯ ಗೋಣಿಕೊಪ್ಪಲು, ಟೀ.ಶೆಟ್ಟೀಗೇರಿ, ವಿರಾಜಪೇಟೆ ಹಾಗೂ ನಾಪೋಕ್ಲುವಿನಲ್ಲಿ ಯಶಸ್ವಿಯಾಗಿ ಪ್ರದರ್ಶನ ಕಂಡು ಜನರ ಮನಗೆದ್ದಿರುವ 'ತೇಂಬಾಡ್' ಚಿತ್ರ ಸಾಂಸಾರಿಕ ಸಂಬಂಧಗಳ ಮೌಲ್ಯದ ಮಹತ್ವವನ್ನು ಹೊಂದಿದೆ.

ಇದೇ ವಾರ ಮೈಸೂರಲ್ಲಿ ಪ್ರದರ್ಶನಗೊಳ್ಳಲಿದೆ. ಮೈಸೂರು ಜನರ ಒತ್ತಾಯದ ಮೇರೆಗೆ ಜುಲೈ ತಿಂಗಳ 2 ಮತ್ತು 3ನೇ ರಂದು (ಶನಿವಾರ ಹಾಗೂ ಭಾನುವಾರ) ವಿಜಯನಗರದ ಕೊಡವ ಸಮಾಜದಲ್ಲಿ ಚಲನಚಿತ್ರ ಪ್ರದರ್ಶನಗೊಳ್ಳಲಿದೆ.

ತಡಿಯಂಗಡ ಗಾನ ಸೋಮಣ್ಣ ನಿರ್ದೇಶಿಸಿರುವ 'ತೇಂಬಾಡ್' ಚಿತ್ರವನ್ನು ಮೈಸೂರಿನ ರಚನಾ (ಮಂಜುಳ) ನಿರ್ಮಿಸಿದ್ದಾರೆ. ಸಹ ನಿರ್ಮಾಪಕರಾಗಿ ತಡಿಯಂಗಡ ಸೋಮಣ್ಣ ಕಾರ್ಯ ನಿರ್ವಹಿಸಿದ್ದಾರೆ. ಸಿನಿಮಾ ವೀಕ್ಷಿಸಲು ಆಸಕ್ತರು ಸೋಮಣ್ಣ ತಡಿಯಂಗಡ ಅವರನ್ನು ಮೊ: 9986323143 ಮೂಲಕ ಸಂಪರ್ಕಿಸಬಹುದಾಗಿದೆ.

**'ತೇಂಬಾಡ್' ಚಿತ್ರದ ಪ್ರದರ್ಶನ ವಿವರ:** ಶನಿವಾರ – ಒಟ್ಟು ಮೂರು ಪ್ರದರ್ಶನ. ಸಂಜೆ 4 ಗಂಟೆ, 6 ಗಂಟೆ ಹಾಗೂ ರಾತ್ರಿ 8 ಗಂಟೆಗೆ.

ಭಾನುವಾರ – ಒಟ್ಟು ನಾಲ್ಕು ಪ್ರದರ್ಶನ. ಬೆಳಿಗ್ಗೆ 11 ಗಂಟೆ, ಮಧ್ಯಾಹ್ನ 2.30 ಗಂಟೆ, ಸಂಜೆ 5 ಗಂಟೆ ಹಾಗೂ ರಾತ್ರಿ 8 ಗಂಟೆಗೆ ಪ್ರದರ್ಶನಗೊಳ್ಳಲಿದೆ.

## ನಾಳೆ ತಾಪಂ ಸಾಮಾನ್ಯ ಸಭೆ

ಮಡಿಕೇರಿ, ಜೂ.28– ತಾಲೂಕು ಪಂಚಾಯಿತಿ ಸಾಮಾನ್ಯ ಸಭೆಯು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ತಾ.ಪಂ.ಆಡಳಿತಾಧಿಕಾರಿ ಶಬಾನ ಎಂ.ಶೇಖ್ ಅವರ ಅಧ್ಯಕ್ಷತೆಯಲ್ಲಿ ಜೂ.30 ರಂದು ಮಧ್ಯಾಹ್ನ 2.30 ಗಂಟೆಗೆ ತಾ.ಪಂ.ಯ ಸಾಮರ್ಥ್ಯ ಸೌಧ ಸಭಾಂಗಣದಲ್ಲಿ ನಡೆಯಲಿದೆ ಎಂದು ತಾ.ಪಂ.ಇಒ ಶೇಖರ್ ಅವರು ತಿಳಿಸಿದ್ದಾರೆ.

## ಹಂದಿ ಚಿಪ್ಪುಗಳ ಮಾರಾಟಕ್ಕೆ ಯತ್ನ; ಇಬ್ಬರ ಬಂಧನ

ಮಡಿಕೇರಿ, ಜೂ.28– ಚಿಪ್ಪು ಹಂದಿಯ ಚಿಪ್ಪುಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ಮನೋಜ್ ಬಿ. ಹಾಗೂ ಮೊಹಮದ್ ಇಮ್ತಿಯಾಜ್ ಬಂಧಿತ ಆರೋಪಿಗಳು.



ಮಡಿಕೇರಿ–ಮಂಗಳೂರು ರಸ್ತೆಯ ತಾಳತ್ತಮನೆ ಜಂಕ್ಷನ್ ಬಳಿ ಬಸ್ ನಿಲ್ದಾಣ ದಲ್ಲಿ ಇಬ್ಬರು ವ್ಯಕ್ತಿಗಳು ಚಿಪ್ಪು ಹಂದಿಯ ಚಿಪ್ಪುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಮಂಗಳವಾರ ಮಡಿಕೇರಿ ತಾಲೂಕು ಸಿ.ಐ.ಡಿ ಪೊಲೀಸ್ ಅರಣ್ಯ ಸಂಚಾರಿ ದಳಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಈ ಸಂದರ್ಭ ಸಿಬ್ಬಂದಿಗಳು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಮಾಲು ಸಮೇತ ಬಂಧಿಸಿದ್ದಾರೆ. ಆರೋಪಿಗಳ ವಶದಲ್ಲಿದ್ದ 17 ಕೆಜಿ. 500 ಗ್ರಾಂ ಚಿಪ್ಪುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾ ನಿರೀಕ್ಷಕ ಕೆ.ವಿ.ಶರತ್ ಚಂದ್ರ ಅವರ ನಿರ್ದೇಶನದ ಮೇರೆಗೆ, ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಅಧೀಕ್ಷಕ ಚಂದ್ರಕಾಂತ್ ಮಾರ್ಗದರ್ಶನದಲ್ಲಿ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪ ನಿರೀಕ್ಷಕಿ ಸಿ.ಯು. ಸವಿ, ಸಿಬ್ಬಂದಿಗಳಾದ ಶೇಖರ್, ರಾಜೇಶ್, ರಾಘವೇಂದ್ರ ಯೋಗೇಶ್, ಮೋಹನ, ಸ್ವಾಮಿ ಮತ್ತು ಮಂಜುನಾಥ್ ಕಾರ್ಯಾಚರಣೆ ನಡೆಸಿದ್ದಾರೆ.

## ಗೋಹತ್ಯೆ ನಿಷೇಧ ಕಾಯ್ದೆ ಕಟ್ಟುನಿಟ್ಟಾಗಿ ಜಾರಿಗೊಳಿಸಿ

### ಶೀಘ್ರದಲ್ಲಿ ಇಲಾಖೆಯಲ್ಲಿ ಖಾಲಿಯಿರುವ 400 ಹುದ್ದೆಗಳ ಭರ್ತಿ: ಸಚಿವ ಪ್ರಭು ಬಿ.ಚವ್ಹಾಣ್

ಮಡಿಕೇರಿ, ಜೂ.28– ಸರ್ಕಾರ ಈಗಾಗಲೇ ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿದ್ದು, ಗೋವುಗಳನ್ನು ಕಸಾಯಿ ಖಾನೆಗೆ ಹೋಗದಂತೆ ತಡೆಯಬೇಕು. ಆ ನಿಟ್ಟಿನಲ್ಲಿ ಚೆಕ್‌ಪೋಸ್ಟ್‌ಗಳಲ್ಲಿ ಬಿಗಿ ಕ್ರಮವಹಿಸುವಂತೆ ಪಶುಸಂಗೋಪನಾ ಇಲಾಖೆ ಸಚಿವರಾದ ಪ್ರಭು ಬಿ.ಚವ್ಹಾಣ್ ತಾಕೀತು ಮಾಡಿದ್ದಾರೆ.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಗೋಶಾಲೆ ನಿರ್ಮಾಣ, ಗೋಹತ್ಯೆ ನಿಷೇಧ ಕಾಯ್ದೆ ಸಮರ್ಪಕ ಜಾರಿ, ಇಲಾಖೆ ಕಾರ್ಯಕ್ರಮ ಅನುಷ್ಠಾನ ಸಂಬಂಧಿಸಿದಂತೆ ಅಧಿಕಾರಿಗಳಿಂದ ಮಾಹಿತಿ ಪಡೆದು ಅವರು ಮಾತನಾಡಿದರು. ಕಸಾಯಿಖಾನೆಗೆ ಗೋವುಗಳನ್ನು ಸಾಗಾಟ ಮಾಡದಂತೆ ಅಗತ್ಯ ಬಿಗಿ ಕ್ರಮ ಕೈಗೊಳ್ಳಬೇಕು. ಚೆಕ್ ಪೋಸ್ಟ್‌ಗಳಲ್ಲಿ ಪಶು ವೈದ್ಯ ಸಿಬ್ಬಂದಿಗಳ ಜೊತೆ ಪೊಲೀಸರನ್ನು ನಿಯೋಜಿಸುವಂತೆ ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಅವರು ಮಾತನಾಡಿ ಕುಟ್ಟ, ಮಾಕುಟ್ಟ ಮತ್ತು ಕರಿಕೆ ಚೆಕ್ ಪೋಸ್ಟ್‌ಗಳಲ್ಲಿ ಪೊಲೀಸರನ್ನು ನಿಯೋಜಿಸಿ, ಸರಿಯಾದ ತಪಾಸಣೆ ನಡೆಸಬೇಕು ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಪಶುಪಾಲನಾ ಇಲಾಖೆ ಉಪ ನಿರ್ದೇಶಕರಾದ ಸುರೇಶ್ ಭಟ್ ಅವರು ಜಿಲ್ಲಾಡಳಿತದಿಂದ ಈಗಾಗಲೇ 8 ಎಕರೆ ಜಾಗ ಕಾಯ್ದಿರಿಸಲಾಗಿದೆ. ಉಳಿದ 12 ಎಕರೆ ಭೂಮಿ ಇದೆ ಎಂದು ಮಾಹಿತಿ ನೀಡಿದರು.

ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಸೆಪ್ಟೆಂಬರ್ ಅಂತ್ಯದೊಳಗೆ ಗೋಶಾಲೆ ಆರಂಭಿಸಬಹುದಾಗಿದ್ದು, ಹೆಚ್ಚಿನ ಅನುದಾನ ಬಿಡುಗಡೆಗೆ ಮನವಿ ಮಾಡಿ ದರು. ಈಗಾಗಲೇ 53 ಲಕ್ಷ ರೂ. ಬಿಡುಗಡೆಯಾಗಿದ್ದು, 38 ಲಕ್ಷ ರೂ. ವೆಚ್ಚದಲ್ಲಿ ಶೆಡ್ ನಿರ್ಮಾಣ ಮತ್ತಿತರ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ಉಪ ನಿರ್ದೇಶಕರು ಮಾಹಿತಿ ನೀಡಿದರು.

ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹಂತದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಶೀಘ್ರದಲ್ಲೇ 400 ವಿವಿಧ ಹಂತದ ಹುದ್ದೆಗಳು ಭರ್ತಿಯಾಗಲಿದ್ದು, ಕೊಡಗು ಜಿಲ್ಲೆಗೆ ಆದ್ಯತೆ ನೀಡಲಾಗುವುದು ಎಂದರು.

ಪಶುಪಾಲನಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಬಾದಾಮಿ, ಡಾ.ಪ್ರಸನ್ನ, ಡಾ.ಶಾಂತೇಶ್, ಡಾ.ನವೀನ್ ಕುಮಾರ್ ಮತ್ತು ಡಾ.ಶ್ರೀದೇವ್ ಅವರು ಮಾತನಾಡಿ ಮುಖ್ಯಮಂತ್ರಿ ಅವರ ಅಮೃತ ಯೋಜನೆ, ವಿಮೆ, ಅನುಗ್ರಹ, ಹೊಸ ಗೋ ಶಾಲೆಗಳ ನಿರ್ಮಾಣ, ಪುಣ್ಯಕೋಟಿ, ಪಶು ಸಂಜೀವಿನಿ, ಪ್ರಾಥಮಿಕ ಪಶು ವೈದ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿರುವುದು, ಪ್ರಾಣಿ ಸಹಾಯವಾಣಿ ಕೇಂದ್ರ ಆರಂಭ, ಗೋ ಹತ್ಯೆ ನಿಷೇಧ ಕಾಯ್ದೆ, ಹೀಗೆ ಹಲವು ಕಾರ್ಯಕ್ರಮಗಳು ಹಾಗೂ ಕಾಯ್ದೆಗಳನ್ನು ಜಾರಿಗೆ ತರಲಾಗಿದೆ ಎಂದು ಮಾಹಿತಿ ನೀಡಿದರು.

ಈಗಾಗಲೇ ಪ್ರಾಣಿ ಸಹಾಯವಾಣಿ ಕೇಂದ್ರ 8277100200 ಆರಂಭಿಸಲಾಗಿದ್ದು, ಕಳೆದ 9 ತಿಂಗಳಲ್ಲಿ ಸುಮಾರು 1 ಲಕ್ಷಕ್ಕೂ ಹೆಚ್ಚು ಕರೆಗಳನ್ನು ಸ್ವೀಕರಿಸಿ ಸ್ಪಂದಿಸಲಾಗಿದೆ. ಆ ನಿಟ್ಟಿನಲ್ಲಿ ಕರೆ ಮಾಡಿದರೆ ಸಂಚಾರಿ ಪಶು ಚಿಕಿತ್ಸೆ ಮೂಲಕ ಪಶುಗಳ ಆರೋಗ್ಯ ತಪಾಸಣೆ ಮಾಡಲಾಗುತ್ತದೆ ಎಂದು ಸಚಿವರು ಮಾಹಿತಿ ನೀಡಿದರು. ಹೆಚ್ಚುವರಿ ನಿರ್ದೇಶಕರಾದ ಶಿವರುದ್ರಪ್ಪ, ಜಂಟಿ ನಿರ್ದೇಶಕರಾದ ವೀರಭದ್ರಯ್ಯ, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಡಾ.ಭಾಸ್ಕರ್ ನಾಯಕ್, ಡಾ.ಜಯ ಪ್ರಕಾಶ್ ಇತರರು ಇದ್ದರು.

## ಕಾಫಿ ತೋಟದಲ್ಲಿ ಹುಲಿ ಮೃತದೇಹ ಪತ್ತೆ

ಮಡಿಕೇರಿ, ಜೂ.28– ಬಿಟ್ಟಂಗಾಲ ಸಮೀಪದ 2ನೇ ರುದ್ರಗುಪ್ಪೆಯಲ್ಲಿ ಕಾಫಿ ತೋಟವೊಂದರಲ್ಲಿ ಹುಲಿಯ ಮೃತದೇಹ ಪತ್ತೆಯಾಗಿದೆ. ಕಳೆದ ಎರಡು ದಿನಗಳ ಹಿಂದೆಯೇ ಈ ಹುಲಿ ಸಾವನ್ನಪ್ಪಿರಬಹುದು ಎಂದು ಶಂಕಿಸಲಾಗಿದೆ.



2ನೇ ರುದ್ರಗುಪ್ಪೆಯ ತೋತೇರಿ ಬಳಿಯ ನಾಜಗೊಲ್ಲಿ ಎಂಬಲ್ಲಿನ ಕಾಫಿ ತೋಟವೊಂದರಲ್ಲಿ ಹುಲಿಯ ಮೃತದೇಹ ಮಂಗಳವಾರ ಸಂಜೆ ಕಂಡು ಬಂದಿದ್ದು, ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸುತ್ತಿದ್ದಾರೆ.

ಕಳೆದ ಕೆಲವು ತಿಂಗಳಿಂದ ಈ ಭಾಗದಲ್ಲಿ ಹುಲಿಯೊಂದು ಸಂಚರಿಸುತ್ತಾ ಗ್ರಾಮಸ್ಥರಲ್ಲಿ ಭೀತಿ ಮೂಡಿಸಿತ್ತು. ಇದಲ್ಲದೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜಾನುವಾರುಗಳ ಮೇಲೆಯೂ ನಿರಂತರವಾಗಿ ದಾಳಿ ನಡೆಸುತ್ತಿತ್ತು. ಈ ಭಾಗದಲ್ಲಿ ಆಗಿಂದಾಗೆ ಕಾಣಿಸಿ ಕೊಳ್ಳುತ್ತಿದ್ದ ಹುಲಿಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಗ್ರಾಮದಲ್ಲಿ ಬೀಡು ಬಿಟ್ಟು ನಿರುತರ ಕಾರ್ಯಾಚರಣೆ ನಡೆಸಿದರೂ ಹುಲಿಯನ್ನು ಮಾತ್ರ ಸೆರೆ ಹಿಡಿಯಲು ಸಾಧ್ಯವಾಗಿರಲಿಲ್ಲ. ಹುಲಿಯ ಸಾವಿನ ಕಾರಣ ಇನ್ನಷ್ಟೇ ತಿಳಿದು ಬರಬೇಕಾಗಿದೆ.

# ಇಂದು ಚಾಮುಲ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ



**ಚಾಮರಾಜನಗರ, ಜೂ.28(ಎಸ್‌ಎಸ್)– ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ(ಚಾಮುಲ್) ಅಧ್ಯಕ್ಷ ಸ್ಥಾನಕ್ಕೆ ನಾಳೆ(ಜೂ.29) ಚುನಾವಣೆ ನಡೆಯಲಿದೆ.**

ಚಾಮುಲ್ ಹಾಲಿ ಅಧ್ಯಕ್ಷರಾಗಿರುವ ಹೆಚ್.ಎಸ್.ನಂಜುಂಡ ಪ್ರಸಾದ್ ಅವರ ಅಧಿಕಾರಾವಧಿ ನಾಳೆ(ಜೂ.29)ರಂದು ಮುಗಿಯಲಿದೆ. ಅಧಿಕಾರಾವಧಿ ಮುಗಿಯುವ ದಿನವೇ ಚುನವಣೆ ನಡೆಯಲಿದ್ದು, ಅಧ್ಯಕ್ಷ ಸ್ಥಾನವನ್ನು ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿರುವ ಪುರುಷನೋ ಅಥವಾ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿರುವ ಮಹಿಳೆ ಅಲಂಕರಿಸುವರೇ ಎಂಬ ಕುತೂಹಲ ಕೆರಳಿದೆ.

ಚಾಮುಲ್ 9 ನಿರ್ದೇಶಕ ಸ್ಥಾನಗಳಿಗೆ ಜೂ.14ರಂದು ಚುನಾವಣೆ ನಡೆದಿದ್ದು, ಕಾಂಗ್ರೆಸ್ ಬೆಂಬಲಿತರು 4 ಸ್ಥಾನಗಳು, ಬಿಜೆಪಿ ಬೆಂಬಲಿತರು 2 ಸ್ಥಾನಗಳು, ಓರ್ವ ಜೆಡಿಎಸ್ ಬೆಂಬಲಿತ ಸೇರಿದಂತೆ ಇನ್ನುಳಿದ 2 ಸ್ಥಾನಗಳಲ್ಲಿ ಪಕ್ಷೇತರರು ಗೆಲವು ಸಾಧಿಸಿದ್ದಾರೆ.

**ಮತದಾನಕ್ಕೆ 14 ಜನರು ಅರ್ಹ:** ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣಾ ಸಂದರ್ಭದಲ್ಲಿ ನೂತನ 9 ನಿರ್ದೇಶಕರು, ಸರ್ಕಾರ ನಿಯೋಜಿಸಿರುವ ಓರ್ವ ನಾಮ ನಿರ್ದೇಶನ ಸದಸ್ಯ, ಪಶು ಸಂಗೋಪನಾ ಇಲಾಖೆಯ ಪ್ರತಿನಿಧಿ, ಸಹಕಾರ ಇಲಾಖೆಯ ಪ್ರತಿನಿಧಿ, ಕರ್ನಾಟಕ ಹಾಲು ಮಹಾ ಮಂಡಳಿ ಪ್ರತಿನಿಧಿ ಹಾಗೂ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಪ್ರತಿನಿಧಿಗಳಿಗೆ ಮಾತದಾನ ಮಾಡುವ ಹಕ್ಕು ಇದ್ದು, ಒಟ್ಟು 14 ಜನರು ಮತದಾನದಲ್ಲಿ ಪಾಲ್ಗೊಳ್ಳಲು ಅರ್ಹರಾಗಿದ್ದಾರೆ.


**7 ಮತ ಪಡೆದವರೇ ಅಧ್ಯಕ್ಷರು:** ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಪ್ರತಿನಿಧಿ ಮೊದಲಿನಿಂದಲೂ ಚುನಾವಣೆಯಲ್ಲಿ ಪಾಲ್ಗೊಂಡಿಲ್ಲ. ಈ ಮಂಡಳಿಯ ಪ್ರತಿನಿಧಿ ಯಾವುದೇ ಚುನಾವಣೆಯಲ್ಲೂ ಮತ ಚಲಾಯಿಸಿದ ಉದಾಹರಣೆಗಳಿಲ್ಲ. ಹೀಗಾಗಿ ನಾಳೆ(ಬುಧವಾರ) ನಡೆಯುವ ಚಾಮುಲ್ ಅಧ್ಯಕ್ಷರ ಚುನಾವಣೆಯಲ್ಲೂ ಪಾಲ್ಗೊಳ್ಳುವುದಿಲ್ಲ. 13 ಜನರು ಮಾತ್ರ ಮತದಾನದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇರುವುದರಿಂದ 7 ಜನರ ಮತ ಪಡೆಯುವವರು ಅಧ್ಯಕ್ಷರಾಗಿ ಆಯ್ಕೆ ಆಗಲಿದ್ದಾರೆ.

ಜಿಲ್ಲೆಯಲ್ಲಿ ಚಾಮುಲ್ ಅಸ್ತಿತ್ವಕ್ಕೆ ಬಂದ ನಂತರ ನಡೆದ ಮೊದಲ ಚುನಾವಣೆಯಲ್ಲೂ ಕಾಂಗ್ರೆಸ್ ಬೆಂಬಲಿತರು ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಿದ್ದರು. ಒಟ್ಟು 5 ವರ್ಷದ ಅಧಿಕಾರಾವಧಿಯಲ್ಲಿ ಕಾಂಗ್ರೆಸ್ ಪಕ್ಷದ ಒಪ್ಪಂದಂತೆ ಮೊದಲ ಎರಡೂವರೆ ವರ್ಷಕ್ಕೆ ಗುರುಮಲ್ಲಪ್ಪ, ಇನ್ನುಳಿದ ಎರಡೂವರೆ ವರ್ಷಕ್ಕೆ ಹೆಚ್.ಎಸ್.ನಂಜುಂಡಪ್ರಸದ್ ಅಧ್ಯಕ್ಷರಾಗಿದ್ದರು. ಈಗ ಮೂರನೇ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ನಡೆಯುತ್ತಿದ್ದು, ಈ ಬಾರಿ ರಹಸ್ಯ ಮತದಾನವಾಗಿರುವುದರಿಂದ ಅಧ್ಯಕ್ಷರು ಯಾರಾಗುತ್ತಾರೆ ಎಂಬ ಕುತೂಹಲ ಹೆಚ್ಚಿಸಿದೆ.

> "ಚಾಮುಲ್ ಅಧ್ಯಕ್ಷ ಸ್ಥಾನಕ್ಕೆ ನನ್ನ ಮಗಳು ಶೀಲಾ ಸ್ಪರ್ಧಿಸುವ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಅಂತಿಮ ನಿರ್ಧಾರವನ್ನು ಬುಧವಾರ ಬೆಳಗ್ಗೆ ಕೈಗೊಳ್ಳಲಾಗುವುದು.
> -ಸಿ.ಪುಟ್ಟರಂಗಶೆಟ್ಟಿ, ಶಾಸಕರು.

> "ಬಿಜೆಪಿ ಬೆಂಬಲಿತರು ಚಾಮುಲ್ ಅಧಿಕಾರ ಗದ್ದುಗೆ ಹಿಡಿಯಲಿದ್ದಾರೆ. ಈ ಬಗ್ಗೆ ಸಂಪೂರ್ಣ ವಿಶ್ವಾಸ ಇದೆ. ಚಾಮುಲ್‌ನಲ್ಲಿ ಕಮಲ ಅರಳಲಿದೆ.
> -ಎಂ.ರಾಮಚಂದ್ರ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ.

## ಹೆಚ್.ಎಸ್. ಬಸವರಾಜು V/s ಶೀಲಾ ಪುಟ್ಟರಂಗಶೆಟ್ಟಿ





ಚಾಮುಲ್ ಪಟ್ಟ ಅಲಂಕರಿಸಲು ಬಿಜೆಪಿ ಹಾಗೂ ಕಾಂಗ್ರೆಸ್ ಬೆಂಬಲಿತರ ನಡುವೆ ಪೈಪೋಟಿ ಏರ್ಪಟ್ಟಿದೆ. ಅಧಿಕಾರಕ್ಕಾಗಿ ಎರಡೂ ಪಕ್ಷಗಳು ಇನ್ನಿಲ್ಲದ ಕಸರತ್ತಿನಲ್ಲಿ ತೊಡಗಿವೆ. ಬಿಜೆಪಿ ತನ್ನ ಅಭ್ಯರ್ಥಿಯಾಗಿ ಮೈಮುಲ್ ಮಾಜಿ ನಿರ್ದೇಶಕರೂ ಆದ ಹೆಚ್.ಎಸ್.ಬಸವರಾಜು ಅವರನ್ನು ಕಣಕ್ಕೆ ಇಳಿಸಲು ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ.

ಬಿಜೆಪಿ ತನ್ನ ಇಬ್ಬರು ಬೆಂಬಲಿತ ಸದಸ್ಯರು, ನಾಮ ನಿರ್ದೇಶನ ಸದಸ್ಯರಾದ ಅಯ್ಯನಪುರ ಶಿವಕುಮಾರ್, ಬಿಜೆಪಿ ಬಂಡಾಯ ಅಭ್ಯರ್ಥಿ ಎಂ.ಪಿ.ಸುನೀಲ್ ಹಾಗೂ ಮೂವರು ಅಧಿಕಾರಿಗಳ ಮತ(ಒಟ್ಟು 7 ಮತ)ವನ್ನು ನೆಚ್ಚಿಕೊಂಡಿದೆ. ಹೀಗಾಗಿ ಈ ಬಾರಿ ಅಧಿಕಾರವನ್ನು ತಾವೇ ಹಿಡಿಯುತ್ತೇವೆಂಬ ಆತ್ಮವಿಶ್ವಾಸದಲ್ಲಿ ಆ ಪಕ್ಷದ ಮುಖಂಡರಿದ್ದಾರೆ.

ಕಾಂಗ್ರೆಸ್ ತನ್ನ ಅಭ್ಯರ್ಥಿಯಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರ ಪುತ್ರಿ ಶೀಲಾ ಪುಟ್ಟರಂಗಶೆಟ್ಟಿ ಅವರನ್ನು ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಯನ್ನಾಗಿ ಆಯ್ಕೆ ಮಾಡಿದೆ. ತನ್ನ ಪಕ್ಷದ ನಾಲ್ವರು ಬೆಂಬಲಿತರು ಸದಸ್ಯರು, ಪಕ್ಷದ ಬಂಡಾಯ ಅಭ್ಯರ್ಥಿಯಾಗಿದ್ದ ಸದಾಶಿವಮೂರ್ತಿ ಹಾಗೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಉದ್ದನೂರು ಪ್ರಸಾದ್ ಅವರ ಮತವನ್ನು ನೆಚ್ಚಿಕೊಂಡಿದೆ. ಗೆಲುವಿಗೆ ಇನ್ನೊಂದು ಮತದ ಅವಶ್ಯಕತೆ ಇರುವುದರಿಂದ ಶಾಸಕ ಪುಟ್ಟರಂಗಶೆಟ್ಟಿ ಅವರು ಅಧಿಕಾರಿಯೊಬ್ಬರ ಮತವನ್ನು ಸೆಳೆಯಲು ತಮ್ಮ ಪ್ರಭಾವ ಬಳಸಿದ್ದಾರೆ ಎಂಬ ಮಾತುಗಳು ಕೇಳಿ ಬಂದಿವೆ. ತಮ್ಮ ಪ್ರಯತ್ನದಲ್ಲಿ ಪುಟ್ಟರಂಗಶೆಟ್ಟಿ ಯಶಸ್ವಿಯಾಗುತ್ತಾರೆಯೇ ಎಂಬುದನ್ನು ಕಾದು ನೋಡಬೇಕಿದೆ.

ಸದ್ಯದ ಪರಿಸ್ಥಿತಿಯಲ್ಲಿ ಬಿಜೆಪಿ ಬೆಂಬಲಿತರು ಅಧಿಕಾರ ಹಿಡಿಯುವ ಸಾಧ್ಯತೆಗಳಿವೆ. ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದಾದದ್ದರಿಂದ ಅಧ್ಯಕ್ಷ ಗಾದಿ ಬಿಜೆಪಿ ಬೆಂಬಲಿತ ಪಾಲಾಗುತ್ತದೋ ಅಥವಾ ಕಾಂಗ್ರೆಸ್ ಬೆಂಬಲಿತೆಯ ಪಾಲಾಗುತ್ತದೋ ಎಂಬುದು ಫಲಿತಾಂಶದ ಬಳಿಕ ತಿಳಿಯಲಿದೆ.

## ಯಳಂದೂರಿನಲ್ಲಿ ಅಗ್ನಿಪಥ್ ವಿರೋಧಿಸಿ ಕಾಂಗ್ರೆಸ್ ಸತ್ಯಾಗ್ರಹ



ಯಳಂದೂರು, ಜೂ.28(ವಿ.ನಾಗರಾಜು)– ಅಗ್ನಿಪಥ್ ಯೋಜನೆ ವಿರೋಧಿ ಪಟ್ಟಣದ ತಾಲೂಕು ಕಚೇರಿ ಮುಂಭಾಗ ಕಾಂಗ್ರೆಸ್‌ನಿಂದ ಪ್ರತಿಭಟನಾ ಸತ್ಯಾಗ್ರಹ ನಡೆಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಶಾಸಕ ಎಸ್.ಜಯಣ್ಣ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಅಗ್ನಿಪಥ್ ಯೋಜನೆಯು ಯುವಕರನ್ನು ದಿಕ್ಕು ತಪ್ಪಿಸುವ ಯೋಜನೆಯಾಗಿದ್ದು ಕೂಲಂಕುಷವಾಗಿ ಪರಿಶೀಲಿಸದೆ ಜಾರಿಗೆ ತಂದಿರುವ ಕೇಂದ್ರದ ನಡೆ ಸರಿಯಾದ ಕ್ರಮವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಈ ಹಿಂದೆ ಸೇನೆಯಲ್ಲಿ 15 ವರ್ಷಗಳ ಕಾಲ ಸೇವೆ ಸಲ್ಲಿಸಲು ಅವಕಾಶವಿತ್ತು. ಆದರೆ ಅಗ್ನಿಪಥ್ ಯೋಜನೆಯಿಂದ ಯುವಕರು 4 ವರ್ಷ ಸೈನಿಕರಾಗಿರುತ್ತಾರೆ. ಇದಕ್ಕೆ ನಿಗದಿಯಾಗಿರುವ ವಯೋಮಿತಿಯೂ ಕಡಿಮೆ ಇದ್ದು ಭವಿಷ್ಯ ಕಟ್ಟಿಕೊಳ್ಳಲು ತೊಂದರೆಯಾಗುತ್ತದೆ. ಹಾಗಾಗಿ ಈ ಯೋಜನೆ ಕೈಬಿಡಬೇಕು ಎಂದು ಆಗ್ರಹಿಸಿದರು.

ಸತ್ಯಾಗ್ರಹದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ವಿ.ಚಂದ್ರು, ತೋಂಟೇಶ್, ಪಪಂ ಅಧ್ಯಕ್ಷೆ ಪ್ರಭಾವತಿ ರಾಜಶೇಖರ್, ಉಪಾಧ್ಯಕ್ಷೆ ಲಕ್ಷ್ಮಿ ಮಲ್ಲು, ಸದಸ್ಯರಾದ ಮಹೇಶ್, ವೈ.ಜಿ.ರಂಗನಾಥ, ಮಂಜು, ಬಿ.ರವಿ, ಮಾಜಿ ಸದಸ್ಯ ಜೆ.ಶ್ರೀನಿವಾಸ್, ತಾಪಂ ಮಾಜಿ ಸದಸ್ಯ ವೈ.ಕೆ.ಮೋಳೆ ನಾಗರಾಜು, ಮುಖಂಡರಾದ ಡಿ.ಎನ್.ನಟರಾಜು, ಕೃಷ್ಣಾಪುರ ದೇವರಾಜು ಸೇರಿದಂತೆ ಅನೇಕರಿದ್ದರು.

## ಮಾದಪ್ಪನಿಗೆ ಅಮಾವಾಸ್ಯೆ ವಿಶೇಷ ಪೂಜೆ

ಹನೂರು, ಜೂ.28(ಸೋಮು)– ಪ್ರಸಿದ್ಧ ಧಾರ್ಮಿಕ ಯಾತ್ರಾಕ್ಷೇತ್ರ ಮಲೆಮಹದೇ ಶ್ವರಬೆಟ್ಟದ ಮಾದಪ್ಪನ ದೇವಸ್ಥಾನದಲ್ಲಿ ಅಮಾವಾಸ್ಯೆ ಹಿನ್ನೆಲೆ ವಿಶೇಷ ಪೂಜಾ ಕೈಂಕರ್ಯ ಜರುಗಿದವು.



ಅಮಾವಾಸ್ಯೆ ಅಂಗ'ವಾಗಿ ದೇಗುಲ, ಗರ್ಭಗುಡಿ, ಸೇರಿದಂತೆ ಸುತ್ತಮುತ್ತಲಿನ ಆವರಣವನ್ನು ತಳೀರು ತೋರಣಗಳಿಂದ ಸಿಂಗಾರಿಸಲಾ ಗಿತ್ತಲ್ಲದೆ, ಗೋಪುರಗಳನ್ನು ವಿವಿಧ ವಿದ್ಯುತ್ ದೀಪಗಳಿಂದ ಕಂಗೊಳಿಸುವಂತೆ ಅಲಂಕರಿಸ ಲಾಗಿತ್ತು ಬೆಳಗಿನ ಜಾವದಿಂದಲೇ ದೇವಾಲಯದ ಅರ್ಚಕರಿಂದ ಸ್ವಾಮಿಗೆ ಅಭಿಷೇಕ, ಬಿಲ್ವಾರ್ಚನೆ ನೇರವೇರಿಸಿ ಮಹಾ ಮಂಗಳಾರತಿ ಬೆಳಗಿಸುವುದರ ಮೂಲಕ ಅಮಾವಾಸ್ಯೆ ಪೂಜೆ ನೆರವೇರಿಸಲಾಯಿತು. ಬಳಿಕ ಆಗಮಿಸಿದ ಭಕ್ತರು ದೇವರ ದರ್ಶನ ಪಡೆದರು. ಹರಕೆ ಹೊತ್ತ ಭಕ್ತರು ಹುಲಿವಾಹನ, ರುದ್ರಾಕ್ಷಿ ವಾಹನ ಹಾಗೂ ಬಸವ ವಾಹನ ಉತ್ಸವಗಳನ್ನು ನೆರವೇರಿಸಿದರು. ಉತ್ಸವಗಳು ಬೆಳಗ್ಗೆ ಯಿಂದ ಸಂಜೆಯವರೆಗೂ ಜರುಗಿತು. ಉತ್ಸವದ ವಾಹನಗಳ ಮೇಲೆ ಭಕ್ತರು ಧನ–ಧಾನ್ಯ ಎಸೆಯುವುದರ ಮೂಲಕ ದಂಡಿನ ಕೋಲನ್ನು ಹೊತ್ತು ದೇವರ ಕೃಪೆಗೆ ಪಾತ್ರರಾದರು.

## ಅಗ್ನಿಪಥ್ ಯೋಜನೆ ಕೈಬಿಡುವಂತೆ ಆಗ್ರಹಿಸಿ ಬ್ಲಾಕ್ ಕಾಂಗ್ರೆಸ್ ಪ್ರತಿಭಟನೆ



ಅಗ್ನಿಪಥ್ ಸೇನಾ ನೇಮಕಾತಿ ಯೋಜನೆ ವಿರೋಧಿಸಿ ಚಾಮರಾಜನಗರ ನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ನಗರದ ತಾಲೂಕು ಕಚೇರಿ ಆವರಣದಲ್ಲಿ ಪ್ರತಿಭಟಿಸಲಾಯಿತು.

ಚಾಮರಾಜನಗರ ಜೂ.28(ಎಸ್‌ಎಸ್)– ಅಗ್ನಿಪಥ್ ಸೇನಾ ನೇಮಕಾತಿ ಕುರಿತ ಯೋಜನೆ ಕೈಬಿಟ್ಟು, ಹಿಂದಿನ ಸೇನಾ ನೇಮಕಾತಿ ಪದ್ಧತಿಯನ್ನು ಮುಂದುವರೆಸಬೇಕು ಎಂದು ಆಗ್ರಹಿಸಿ ಚಾಮರಾಜನಗರ ನಗರ ಬ್ಲಾಕ್ ಕಾಂಗ್ರೆಸ್ ಸಮಿತಿಯಿಂದ ನಗರದಲ್ಲಿ ಪ್ರತಿಭಟಿಸಲಾಯಿತು.

ನಗರದ ತಾಲೂಕು ಕಚೇರಿ ಆವರಣದಲ್ಲಿ ಸಮಾವೇಶಗೊಂಡ ಪದಾಧಿಕಾರಿಗಳು, ಕಾರ್ಯಕರ್ತರು ಅಗ್ನಿಪಥ್ ಯೋಜನೆ ಜಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಈಚೆಗೆ ಭಾರತೀಯ ಸೇನಾ ನೇಮಕಾತಿಯಲ್ಲಿ ಕಳೆದ ತಿಂಗಳಿಂದ ಅಗ್ನಿಪಥ್ ಯೋಜನೆ ಜಾರಿ ಮಾಡಿದೆ. ಈ ಯೋಜನೆಯಡಿ ಸೇವಾ ವೀರರು ಎಂಬ ಪದವಿ ನೀಡಿ, 6 ತಿಂಗಳ ತರಬೇತಿ ನೀಡಿ, ಸೇವೆಗೆ ಸೇರ್ಪಡೆ ಮಾಡಿಕೊಳ್ಳಲಾಗುತ್ತದೆ. 4 ವರ್ಷದ ನಂತರ ಅವರಿಗೆ 7.50 ಲಕ್ಷ ರೂ. ಪರಿಹಾರ ನೀಡಿ, ನಿವೃತ್ತಿ ನೀಡಲಾಗುತ್ತದೆ. ಯಾವುದೇ ಮುಂಬಡ್ತಿ, ನಿವೃತ್ತಿ ವೇತನ ಸಿಗದೆ, ಹಣಕಾಸು ಭದ್ರತೆ ಇಲ್ಲದೆ ನಿರುದ್ಯೋಗಿಯಾಗಿ ವಾಪಸ್ ಬರುವುದು ಅಗ್ನಿಪಥ್ ಯೋಜನೆಯ ಆಘಾತಕಾರಿ ಬೆಳವಣಿಗೆ. ದೇಶದ ಭದ್ರತೆಗೆ ಧಕ್ಕೆ ತರುವ ಅಗ್ನಿಪಥ್ ಯೋಜನೆ ಕೈಬಿಡಬೇಕು ಎಂದು ಆಗ್ರಹಿಸಿದರು.

ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಬಸವರಾಜು ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ರಾಜಶೇಖರ್ ಜತ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ, ಎ.ಎಸ್. ಗುರುಸ್ವಾಮಿ ಓಬಿಸಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಎ.ಮಹದೇವ ಶೆಟ್ಟಿ, ರಾಜ್ಯ ಎಸ್ಸಿ ವಿಭಾಗದ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್. ಮಹದೇವು, ಎಸ್ಸಿ ವಿಭಾದ ಜಿಲ್ಲಾಧ್ಯಕ್ಷ ಮಹದೇವನಾಯಕ, ಜಿಪಂ ಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ರಮೇಶ್, ಅರಕಲವಾಡಿ ಸೋಮನಾಯಕ ತಾಪಂ ಮಾಜಿ ಸದಸ್ಯರಾದ ಕಾಗಲವಾಡಿ ಶಿವಸ್ವಾಮಿ ಕಾಗಲವಾಡಿ ಚಂದ್ರು, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ ಎಪಿಎಂಸಿ ಸದಸ್ಯ ಗುರುಸ್ವಾಮಿ, ಮುತ್ತಿಗೆ ದೂರೆ ಗ್ರಾಪಂ ಸದಸ್ಯರಾದ ಮಂಜುಸ್ವಾಮಿ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್.ನಾಗೇಂದ್ರ ಸೇರಿದಂತೆ ಇತರರು ಭಾಗವಹಿಸಿದ್ದರು.

## 1.29 ಕೋಟಿ ರೂ. ವೆಚ್ಚದಲ್ಲಿ ಮನೆಗಳ ನಿರ್ಮಾಣಕ್ಕೆ ಭೂಮಿಪೂಜೆ



ಗುಂಡ್ಲುಪೇಟೆ, ಜೂ.28(ಸೋಮ್.ಜಿ)– ಪಟ್ಟಣದ ಹೊರವಲಯದಲ್ಲಿರುವ ಡೋಗ್ರಿ ಗ್ರೇಸಿಯಾ ಸಮುದಾಯದ ಬಡಾವಣೆ ಯಲ್ಲಿ 1.29 ಕೋಟಿ ರೂ. ವೆಚ್ಚದಲ್ಲಿ ಅರ್ಹ ಫಲಾನುಭವಿಗಳಿಗೆ ಮನೆಗಳ ನಿರ್ಮಾಣಕ್ಕೆ ಶಾಸಕ ಸಿ.ಎಸ್.ನಿರಂಜನಕುಮಾರ್ ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಸಮುದಾಯದ ಬಡಾವಣೆಯಲ್ಲಿರುವ ವಸತಿ ರಹಿತ ಅರ್ಹ 37 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, 1.29 ಕೋಟಿ ರೂ.ವೆಚ್ಚದಲ್ಲಿ ಮನೆ ನಿರ್ಮಿಸಲು ಗುರಿ ಹೊಂದಲಾಗಿದೆ. ಸದ್ಯ ಭೂಮಿಪೂಜೆ ನೆರವೇರಿಸಿದ್ದು, ಶೀಘ್ರದಲ್ಲೇ ಕಾಮಗಾರಿ ಪ್ರಾರಂಭಗೊಳ್ಳಲಿದೆ ಎಂದರು. ಈ ವೇಳೆ ನೇನೆಕಟ್ಟೆ ಗ್ರಾಮಂ ಅಧ್ಯಕ್ಷೆ ಪುಟ್ಟಮ್ಮ, ಉಪಾಧ್ಯಕ್ಷೆ ರೇಖಾ, ಸದಸ್ಯ ನಾಗೇಂದ್ರ, ಜಯಶೀಲಾ, ಪಿಡಿಓ ಶಿವಸ್ವಾಮಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ನಂಜುಂಡೇಗೌಡ, ಮುಖಂಡರಾದ ಅಜಯ್, ನಾಗೇಂದ್ರ, ಮಹೇಶ್ ಇತರರಿದ್ದರು.

ಒಂದನೇ ಪುಟದಿಂದ

## ಪ್ರಾಧಿಕಾರಕ್ಕೆ ಹೆಚ್ಚಿದ ಕೂಗು

ಕಟ್ಟಡ ನಿರ್ಮಿಸುವುದನ್ನು ತಡೆಯಲು ಪ್ರಾಧಿಕಾರ ರಚನೆಯಾಗಬೇಕು ಎಂದರು.

**ಮೇಯರ್ ಬೆಂಬಲ:** ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಮತ್ತು ದಸರಾ ಪ್ರಾಧಿಕಾರ ರಚನೆಯ ಜಿ.ಟಿ. ದೇವೇಗೌಡರ ಅಭಿಪ್ರಾಯಕ್ಕೆ ಬೆಂಬಲ ನೀಡಿರುವ ಮೇಯರ್ ಸುನಂದ ಪಾಲನೇತ್ರ, ಪ್ರಾಧಿಕಾರ ರಚನೆಯಾದಲ್ಲಿ ಚಾಮುಂಡಿಬೆಟ್ಟದ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿದಂತಾಗುತ್ತದೆಯಲ್ಲದೆ, ಭಕ್ತಾದಿಗಳು, ಪ್ರವಾಸಿಗರ ಅನುಕೂಲಕ್ಕೆ ದೇವಸ್ಥಾನವನ್ನೂ ಅಭಿವೃದ್ಧಿಪಡಿಸಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಅದೇ ರೀತಿ 2018 ರಿಂದಲೇ ದಸರಾ ಪ್ರಾಧಿಕಾರಕ್ಕೆ ಒತ್ತಾಯಿಸುತ್ತಾ ಬಂದಿದ್ದರೂ ಸಾಕಾರವಾಗಿಲ್ಲ. ಇದೀಗ ಮುಂದಿನ ವಾರ ಕ್ಯಾಬಿನೆಟ್‌ನಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ಕೈಗೊಳ್ಳುವುದಾಗಿ ಜಿಲ್ಲಾ ಉಸ್ತುವಾರಿ ಸಚಿವರು ಭರವಸೆ ನೀಡಿರುವುದರಿಂದ ಮೈಸೂರಿಗೆ ಒಳ್ಳೆಯದಾಗುತ್ತದೆ ಎಂದು ನಂಬಿದ್ದೇವೆ ಎಂದು ಅವರು ಆಶಯ ವ್ಯಕ್ತಪಡಿಸಿದರು.

**ಪ್ರತಾಪ್ ಸಿಂಹ:** ಈ ಕುರಿತು ಪ್ರತಿಕ್ರಿಯಿಸಿದ ಸಂಸದ ಪ್ರತಾಪ್ ಸಿಂಹ, ಮನಬಂದಂತೆ ಕಟ್ಟಡ ಕಟ್ಟುವುದು, ಮನೆಗಳ ಒಳಚರಂಡಿ ನೀರನ್ನು ಎಲ್ಲೆಂದರಲ್ಲಿ ಬಿಡುತ್ತಿರುವುದರಿಂದ ಚಾಮುಂಡಿಬೆಟ್ಟದ ನೈಸರ್ಗಿಕ ಸೌಂದರ್ಯ ಹಾಳಾಗುತ್ತಿದೆ. ಪ್ರತ್ಯೇಕ ಪ್ರಾಧಿಕಾರ ರಚನೆಯಾದಲ್ಲಿ ಬೆಟ್ಟವನ್ನು ಪರಿಸರ ಸ್ನೇಹಿಯಾಗಿ ಉಳಿಸಬಹುದು ಎಂದರು.

ದಸರೆ ಬಂತೆಂದರೆ ಅಧಿಕಾರಿಗಳು ಮೂರು ತಿಂಗಳು ಯಾವುದೇ ಕೆಲಸ ಮಾಡುವುದಿಲ್ಲ. ದಸರಾ ನೆಪದಲ್ಲಿ ಕಾಲಹರಣ ಮಾಡಿ ಕಡೆ ಘಳಿಗೆಯಲ್ಲಿ ತರಾತುರಿ ಕಾಮಗಾರಿ ಮಾಡುವುದರಿಂದ ಗುಣಮಟ್ಟ ಹಾಳಾಗುತ್ತದೆ. ಅದರ ಬದಲು ವರ್ಷಪೂರ್ತಿ ತಯಾರಿ ಮಾಡಲು ದಸರಾ ಪ್ರಾಧಿಕಾರ ರಚನೆಯಾಗಬೇಕೆಂಬ ಅಭಿಪ್ರಾಯ ಸೂಕ್ತವಾಗಿದ್ದು, ಸರ್ಕಾರ ಈ ನಿಟ್ಟಿನಲ್ಲಿ ನಿರ್ಧಾರ ಮಾಡಲಿದೆ ಎಂದು ತಿಳಿಸಿದರು. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಹಾಗೂ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಈ ಎರಡೂ ಪ್ರಾಧಿಕಾರ ರಚನೆ ಸಂಬಂಧ ನಮ್ಮಿಂದ ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸಿಲ್ಲ. ಆದರೆ ಮೌಖಿಕವಾದ ಚರ್ಚೆ ನಡೆದು ಸರ್ಕಾರದ ಮಟ್ಟದಲ್ಲಿಯೂ ಸಮಾಲೋಚನೆಗಳಾಗುತ್ತಿವೆ ಎಂದು ನುಡಿದರು.

## ಶಕ್ತಿ ಪ್ರದರ್ಶನ

ಇಬ್ಬರ ಪೈಕಿ ಒಬ್ಬರ ಗುಂಪಿನಲ್ಲಿ ಕಾಣಿಸಿಕೊಳ್ಳದೆ ಹೋದರೆ ಅಂತಹವರನ್ನು ದೂರವಿಡುವ ಕೆಲಸ ಇಬ್ಬರೂ ನಾಯಕರಿಂದ ಆಗುತ್ತಿದೆ. ಉನ್ನತ ಮೂಲಗಳ ಪ್ರಕಾರ, ನಾಯಕತ್ವದ ಪೈಪೋಟಿಯಲ್ಲಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಿಎಂ ಸಿದ್ಧರಾಮಯ್ಯ ಅವರ ನಡುವೆ ತಳ ಮಟ್ಟದಿಂದ ಹಿಡಿದು, ದಿಲ್ಲಿ ಮಟ್ಟದವರೆಗೆ ರಾಜೀ ಸಂಧಾನದ ಪ್ರಯತ್ನಗಳು ನಡೆದಿವೆಯಾದರೂ ಫಲಿತಾಂಶ ಮಾತ್ರ ಶೂನ್ಯ. ಇಂತಹ ಕಾಲಘಟ್ಟದಲ್ಲೇ ಇದೀಗ ಉಭಯ ನಾಯಕರು ಲಕ್ಷಾಂತರ ಮಂದಿಯನ್ನು ಸೇರಿಸಿ ಸಮಾವೇಶ ನಡೆಸುವ ಮೂಲಕ ತಮ್ಮ ತಮ್ಮ ಬಲ ತೋರಿಸಲು ಸಜ್ಜಾಗಿದ್ದು,ಈ ಬೆಳವಣಿಗೆ ವ್ಯಾಪಕ ಕುತೂಹಲಕ್ಕೆ ಕಾರಣವಾಗಿದೆ.

## ದುಷ್ಕರ್ಮಿಗಳ ಬಂಧನ

ಇಸ್ಲಾಂ ಧರ್ಮವನ್ನು ಅವಮಾನಿಸಿದ್ದಕ್ಕಾಗಿ ಪ್ರತೀಕಾರವಾಗಿ ಈ ಕೃತ್ಯ ನಡೆಸಿರುವುದಾಗಿ ಹೇಳಿದ್ದಾರೆ. ಇದರಿಂದಾಗಿ ರಾಜಸ್ಥಾನದಲ್ಲಿ ಕೋಮು ಉದ್ವಿಗ್ನತೆ ಉಂಟಾಗಿದೆ. ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡಿದ ವೀಡಿಯೊ ಕ್ಲಿಪ್‌ನಲ್ಲಿ ದುಷ್ಕರ್ಮಿಯೊಬ್ಬ, ಟೈಲರ್ ನೊಬ್ಬನನ್ನು ಶಿರಚ್ಛೇದ ಮಾಡಿರುವುದಾಗಿ ಹೇಳಿರುವುದಲ್ಲದೇ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೊಲ್ಲುವುದಾಗಿ ಹೇಳಿದ್ದಾನೆ.

**ಉದಯಪುರಕ್ಕೆ ಎನ್‌ಐಎ ತಂಡ:** ರಾಜಸ್ಥಾನದ ಉದಯ್‌ಪುರದಲ್ಲಿ ನೂಪುರ್ ಶರ್ಮಾ ಪರ ಪೋಸ್ಟ್ ಹಾಕಿದ್ದ ಟೈಲರ್‌ನನ್ನು ಹತ್ಯೆ ಮಾಡಿದ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯ ಮಂಗಳವಾರ ರಾತ್ರಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ತನಿಖಾಧಿಕಾರಿಗಳ ತಂಡವನ್ನು ಉದಯಪುರಕ್ಕೆ ರವಾನಿಸಿದೆ. ರಾಷ್ಟ್ರೀಯ ತನಿಖಾ ಸಂಸ್ಥೆಯ ತಂಡವನ್ನು ಉದಯಪುರಕ್ಕೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಟ್ಟುನಿಟ್ಟಾದ ಭಯೋತ್ಪಾದನಾ ವಿರೋಧಿ ಕಾನೂನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿದ ನಂತರ ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರಿಸುವ ಸಾಧ್ಯತೆಯಿದೆ.

ಮೇಲ್ನೋಟಕ್ಕೆ ಇದು ಭಯೋತ್ಪಾದಕ ದಾಳಿಯಂತೆ ತೋರುತ್ತಿದೆ ಎಂದು ಅನಾಮಧೇಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನೂಪುರ್ ಶರ್ಮಾ ಅವರನ್ನು ಬೆಂಬಲಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿದ್ದ ವ್ಯಕ್ತಿಯನ್ನು ಇಬ್ಬರು ದುಷ್ಕರ್ಮಿಗಳು ಹತ್ಯೆ ಮಾಡಿದ್ದಾರೆ. ಈ ಸಂಪೂರ್ಣ ದಾಳಿಯ ವಿಡಿಯೋ ಕೂಡ ಮಾಡಲಾಗಿದೆ. ಅಷ್ಟೇ ಅಲ್ಲ, ಘಟನೆಯ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕುವ ಮೂಲಕ ಆರೋಪಿಗಳು ಕೊಲೆಯ ಹೊಣೆಯನ್ನೂ ಹೊತ್ತುಕೊಂಡಿದ್ದಾರೆ.

**ಮುಂಜಾಗ್ರತಾ ಕ್ರಮವಾಗಿ ಸೆಕ್ಷನ್ 144 ಜಾರಿ:** ಉದಯಪುರದ 7 ಪೊಲೀಸ್ ಠಾಣೆ ಪ್ರದೇಶಗಳಲ್ಲಿ ಕರ್ಫ್ಯೂ ವಿಧಿಸಲಾಗಿದೆ. ಇಡೀ ರಾಜಸ್ಥಾನದಲ್ಲಿ ಸೆಕ್ಷನ್ 144 ಜಾರಿಗೊಳಿಸಲಾಗಿದೆ. ಆರೋಪಿಗಳು ವಿಡಿಯೋ ಮೂಲಕ ಪ್ರಧಾನಿ ನರೇಂದ್ರ ಮೋದಿಯವರಿಗೂ ಬೆದರಿಕೆ ಹಾಕಿದ್ದಾರೆ. ಆರೋಪಿಗಳಾದ ರಿಯಾಜ್ ಅನ್ಸಾರಿ ಮತ್ತು ಮೊಹಮ್ಮದ್ ಗೌಸ್ ಅವರನ್ನು ರಾತ್ರಿ 7 ಗಂಟೆಗೆ ರಾಜ್‌ಸಮಂದ್‌ನ ಭೀಮ್‌ನಲ್ಲಿ ಬಂಧಿಸಲಾಗಿದೆ. ಈ ಇಬ್ಬರೂ ಉದಯಪುರದ ಸೂರಜ್‌ಪೋಲ್ ಪ್ರದೇಶದ ನಿವಾಸಿಗಳು.

ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಇಡೀ ರಾಜ್ಯದಲ್ಲಿ 24 ಗಂಟೆಗಳ ಕಾಲ ಇಂಟರ್ನೆಟ್ ಬಂದ್ ಮಾಡಲಾಗಿದೆ. ಇಡೀ ರಾಜಸ್ಥಾನದಲ್ಲಿ ತೀವ್ರ ಎಚ್ಚರಿಕೆ ವಹಿಸಲಾಗಿದೆ. ಶವ ಇನ್ನೂ ಅಂಗಡಿಯ ಹೊರಗೆ ಬಿದ್ದಿದೆ. ಮೃತರ ಕುಟುಂಬಸ್ಥರು 50 ಲಕ್ಷ ರೂಪಾಯಿ ಹಾಗೂ ಸರ್ಕಾರಿ ಉದ್ಯೋಗ ನೀಡುವಂತೆ ಒತ್ತಾಯಿಸಿದ್ದಾರೆ. ಈ ಬಗ್ಗೆ ಸರ್ಕಾರ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ.

**ಅಳತೆ ನೀಡುವ ನೆಪದಲ್ಲಿ ಅಂಗಡಿಗೆ ನುಗ್ಗಿದ ದುಷ್ಕರ್ಮಿಗಳು:** 40 ವರ್ಷದ ಟೈಲರ್ ಕನ್ಹಯ್ಯಾಲಾಲ್ ತೇಲಿ ಅವರು, ಧನ್ಮಂಡಿಯ ಭೂತಮಹಲ್ ಬಳಿ ಸುಪ್ರೀಂ ಟೈಲರ್ಸ್ ಎಂಬ ಅಂಗಡಿ ಇಟ್ಟುಕೊಂಡಿದ್ದರು. ಮಂಗಳವಾರ ಮಧ್ಯಾಹ್ನ 2.30ರ ಸುಮಾರಿಗೆ ಬೈಕ್‌ನಲ್ಲಿ ಇಬ್ಬರು ದುಷ್ಕರ್ಮಿಗಳು ಬಂದಿದ್ದಾರೆ. ಬಟ್ಟೆಯ ಅಳತೆ ಕೊಡುವ ನೆಪದಲ್ಲಿ ಅಂಗಡಿ ಪ್ರವೇಶಿಸಿದ್ದಾರೆ. ಕನ್ಹಯ್ಯಲಾಲ್‌ಗೆ ಏನೋ ಅರ್ಥವಾಗುವಷ್ಟರಲ್ಲಿ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ತೇಲಿ ಮೇಲೆ ಕತ್ತಿಯಿಂದ ಹಲವಾರು ಬಾರಿ ಇರಿದಿದ್ದಾರೆ. ಇದರಿಂದ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

## ಕೇಂದ್ರದಿಂದ ತನಿಖೆ ಆರಂಭ

ಪಡೆದುಕೊಂಡಿದ್ದಾರೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ 40ರಿಂದ 53 ಪರ್ಸೆಂಟ್ ಕಮೀಷನ್ ನೀಡಬೇಕಾಗಿದೆ. ಇಷ್ಟು ಹಣ ನೀಡಿದ ನಂತರ ಗುಣಮಟ್ಟದ ಕಾಮಗಾರಿ ನಡೆಸಲು ಸಾಧ್ಯವೇ ಇಲ್ಲ. ಇಲಾಖೆಯ ಎಲ್ಲಾ ಹಂತದ ಇಂಜಿನಿಯರ್‌ಗಳು, ಲೆಕ್ಕಾಧಿಕಾರಿ, ಸ್ಥಳೀಯ ಶಾಸಕರು ಸಂಸದರು, ಇಲಾಖಾ ಸಚಿವರು, ಹಾಗೂ ಸಿಎಂಗೆ ಕಮಿಷನ್ ಸಂದಾಯವಾಗುತ್ತದೆ. ಇದು ಯಾವ ರೀತಿ ಸಂದಾಯವಾಗುತ್ತಿದೆ ಎಂಬ ಮಾಹಿತಿಯನ್ನು ಗೃಹ ಸಚಿವಾಲಯದ ಅಧಿಕಾರಿಗಳಿಗೆ ಕೆಂಪಣ್ಣ ಮೌಖಿಕವಾಗಿ ವಿವರಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ತಾವು ಸಭೆ ನಿಗದಿಪಡಿಸಲಿದ್ದು, ಅಂದು ತಮ್ಮಲ್ಲಿರುವ ಆರೋಪಗಳಿಗೆ ಸಂಬಂಧಿಸಿದ ದಾಖಲೆಗಳನ್ನು ತರುವಂತೆ ಅಧ್ಯಕ್ಷರಿಗೆ ಅಧಿಕಾರಿಗಳು ಸೂಚಿಸಿದ್ದಾರೆ.

## ರುಂಡ-ಮುಂಡ ಬೇರ್ಪಡಿಸಿದ ಪತಿ

ಇನ್ಸ್‌ಪೆಕ್ಟರ್ ಮಹೇಶ್ ಹಾಗೂ ಸಿಬ್ಬಂದಿ, ಮಹಜರು ನಡೆಸಿ, ಪ್ರಕರಣ ದಾಖಲಿಸಿಕೊಂಡು ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ. ಕೊಲೆ ಆರೋಪಿ ದೇವರಾಜು ಪತ್ತೆಗೆ ಕಾರ್ಯಾಚರಣೆ ಆರಂಭಿಸಿದ್ದಾರೆ. ಮೊದಲ ಪತ್ನಿಗೂ ಕಿರುಕುಳ ನೀಡಿ ಆಕೆಯ ಹತ್ಯೆಗೆ ಯತ್ನಿಸಿದ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದಿದ್ದ ದೇವರಾಜು, ಆನಂತರ ಇವನ ಕಿರುಕುಳ ತಾಳದೇ ಆಕೆ ಪತಿಯಿಂದ ಬೇರ್ಪಟ್ಟಿದ್ದಾಳೆ. ನಂತರ ಆತ ಪುಟ್ಟಮ್ಮರನ್ನು ಮದುವೆಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ ತನ್ನ ಹಳೇ ಚಾಳಿಯನ್ನೇ ಮುಂದುವರಿಸಿದ ಆತ, ನಿತ್ಯ ಕುಡಿದು ಬಂದು ಪತ್ನಿ ಮೇಲೆ ಸಂಶಯಗೊಂಡು ಜಗಳ ತೆಗೆದು, ಮಾನಸಿಕ ಹಾಗೂ ದೈಹಿಕವಾಗಿ ಕಿರುಕುಳ ನೀಡುತ್ತಿದ್ದ. ಸೋಮವಾರ ಸಂಜೆ ಕುಡಿದು ಬಂದು ಜಗಳ ತೆಗೆದು ಮಚ್ಚಿನಿಂದ ಪುಟ್ಟಮ್ಮನ ಕತ್ತು ಕತ್ತರಿಸಿ ರುಂಡ-ಮುಂಡ ಬೇರ್ಪಡಿಸಿ ಪರಾರಿಯಾಗಿದ್ದಾನೆ ಎಂದು ಇನ್ಸ್‌ಪೆಕ್ಟರ್ ಮಹೇಶ್ ತಿಳಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ತಲೆಮರೆಸಿಕೊಂಡಿರುವ ದೇವರಾಜು ಬಂಧನಕ್ಕೆ ಬಲೆ ಬೀಸಿದ್ದಾರೆ.

## 3ನೇ ಬಾರಿ ಭೂ ಕಂಪನ

ಬುಲೆಟಿನ್ ಬಿಡುಗಡೆ ಮಾಡಿದ್ದು, ಇದರ ಪ್ರಕಾರ ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕಿನ ಎಂ.ಚೆಂಬು ಗ್ರಾಮ ಸಮೀಪ ಭೂ ಕಂಪನ ಉಂಟಾಗಿದ್ದು, ರಿಕ್ಟರ್ ಮಾಪಕದಲ್ಲಿ 3ರಷ್ಟು ಪ್ರಮಾಣದ ಕಂಪನ ದಾಖಲಾಗಿದೆ ಎಂದು ಮಾಹಿತಿ ನೀಡಿದೆ. ಇದರ ಪ್ರಭಾವ 40ರಿಂದ 50 ಕಿ.ಮೀ ವ್ಯಾಪ್ತಿಯಿದ್ದು, ಸುಳ್ಯ ತಾಲೂಕಿನ ಹಲವೆಡೆ ಭೂಮಿ ಕಂಪಿಸಿರುವುದಾಗಿ ವರದಿ ಯಾಗಿದೆ. ಎರಡು ದಿನಗಳ ಮೊದಲು ಸಂಭವಿಸಿದ ಭೂ ಕಂಪನಗಿಂತ ಅಧಿಕ ತೀವ್ರತೆಯ ಕಂಪನ ಇದಾಗಿದೆ. ಮಡಿಕೇರಿ ನಗರ, ಮಕ್ಕಂದೂರು, ಮುಕ್ಕೋಡ್ಲು, ಗಾಳೀಬೀಡು, ಮೊಣ್ಣಂಗೇರಿ, ಉದಯಗಿರಿ, ಕಾಲೂರು, ದೇವಸ್ತೂರು, ಭಾಗಮಂಡಲ, ಕಕ್ಕಬ್ಬೆ, ಕುಂದಚೇರಿ, ನಾಪೋಕ್ಲು ಲಕ್ಕುಂದ ಕಾಡು, ಯವಕಪಾಡಿ, ಮದೆನಾಡು, ಕೊಯನಾಡು, ಕರಿಕೆ, ಸಂಪಾಜೆ, ಚೆಂಬು, ಪೆರಾಜೆ, ವಿರಾಜಪೇಟೆ ತಾಲೂಕಿನ ತೋರಾ, ಕೆದ ಮುಳ್ಳೂರು, ಸುಳ್ಯ ತಾಲೂಕಿನ ಉಬರಡ್ಕ, ಮಡಪ್ಪಾಡಿ, ಕೊಲ್ಲಮೊಗ್ರು, ಕಲ್ಮಕಾರು, ದೇವ ಚಳ್ಳ, ಜಾಲ್ಸೂರು, ಆಲೆಟ್ಟಿ, ಐವರ್ನಾಡು, ಅಮರಮುಡ್ನೂರು, ಮತಿತ್ತರ ಗ್ರಾಮಗಳಲ್ಲಿ ಭೂಮಿ ಕಂಪಿಸಿದ ಅನುಭವವಾಗಿದೆ.

ಭೂಮಿ ಒಳಗಿನಿಂದ ವಿಚಿತ್ರ ಶಬ್ದದೊಂದಿಗೆ 4ರಿಂದ 5 ಸೆಕೆಂಡ್‌ಗಳ ಕಾಲ ಕಂಪನದ ಹಿನ್ನೆಲೆಯಲ್ಲಿ ಜನರು ಭಯಭೀತರಾಗಿ ಮನೆಗಳಿಂದ ಹೊರ ಓಡಿ ಬಂದಿದ್ದಾರೆ. ಕಂಪನಕ್ಕೆ ಮನೆಗಳ ಪಾತ್ರೆಗಳು ಅಲುಗಾಡಿದ್ದು, ಭೂ ಕಂಪನದ ಅನುಭವ ಎಲ್ಲರಿಗೂ ಆಗಿದೆ. ಭಗವತಿ ನಗರ ಹಾಗೂ 2ನೇ ಮೊಣ್ಣಂಗೇರಿ ಹಾಗೂ ಕೊಡಗು-ಸುಳ್ಯ ಭಾಗದ ಕೆಲವು ಮನೆಗಳ ಗೋಡೆಗಳು ಬಿರುಕು ಬಿಟ್ಟಿದ್ದು, ಜನರು ದಿಗ್ಭ್ರಾಂತಿಗೆ ಒಳಗಾಗಿದ್ದಾರೆ.

# ಸರ್ಕಾರಿ ಹುದ್ದೆಗೆ ಕಾಯದೆ ಸ್ವ-ಉದ್ಯೋಗಿಗಳಾಗಿ

### ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕ ದಿನೇಶ್ ಕರೆ

**● ಒಂದು ಸರ್ಕಾರಿ ಹುದ್ದೆಗೆ 250ರಿಂದ 300 ಅರ್ಜಿ ಬರುತ್ತವೆ ● ಎಸ್‌ಸಿ, ಎಸ್‌ಟಿ ಉದ್ಯಮಿಗಳಿಂದ ವಸ್ತು ಖರೀದಿಗೆ ನಿಯಮ ● ಉದ್ಯಮಿಗಳಿಗೆ ಮಾಹಿತಿ ನೀಡಿದ ಅಧಿಕಾರಿಗಳು**



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಗಳವಾರ ನಡೆದ 'ವಿಶೇಷ ಮಾರಾಟಗಾರರ ಅಭಿವೃದ್ಧಿ' ಮತ್ತು 'ಎನ್‌ಎಸ್‌ಎಸ್‌ಹೆಚ್ ಯೋಜನೆಗಳ ಕುರಿತ ಜಾಗೃತಿ' ಕಾರ್ಯಕ್ರಮವನ್ನು ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕ ದಿನೇಶ್ ಉದ್ಘಾಟಿಸಿದರು.

ಮೈಸೂರು,ಜೂ.28(ಎಂಟಿವೈ)- ಸರ್ಕಾರಿ ಹುದ್ದೆ ಪಡೆಯಲು ಇಂದು ಭಾರೀ ಪೈಪೋಟಿ ಇದೆ. ಆದರೆ ಎಲ್ಲರಿಗೂ ಸರ್ಕಾರಿ ಉದ್ಯೋಗ ಸಿಗುವುದು ಕಷ್ಟ ಈ ಹಿನ್ನೆಲೆಯಲ್ಲಿ ಸ್ವಯಂ ಉದ್ಯೋಗ ಮಾಡುವತ್ತ ಯುವಜನತೆ ಗಮನ ಕೇಂದ್ರೀಕರಿಸಬೇಕು ಎಂದು ಜಿಲ್ಲಾ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಜಂಟಿ ನಿರ್ದೇಶಕ ದಿನೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮಂಗಳವಾರ ಬೆಂಗಳೂರಿನ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪಂಗಡದ ಹಬ್ ಹಾಗೂ ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿದಾರರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ವಿಶೇಷ ಮಾರಾಟಗಾರರ ಅಭಿವೃದ್ಧಿ' ಮತ್ತು 'ಎನ್‌ಎಸ್‌ಎಸ್‌ಹೆಚ್ ಯೋಜನೆಗಳ ಕುರಿತ ಜಾಗೃತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಉದ್ಯೋಗ ಪಡೆದುಕೊಳ್ಳುವ ನಿಟ್ಟಿನಲ್ಲಿ ಪೈಪೋಟಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರಿಗೂ ಸರ್ಕಾರಿ ಉದ್ಯೋಗ ಸಿಗುವುದಿಲ್ಲ. ಒಂದು ಹುದ್ದೆಗೆ ಅರ್ಜಿ ಆಹ್ವಾನಿಸಿದರೆ, 250ರಿಂದ 300 ಅರ್ಜಿ ಸಲ್ಲಿಕೆಯಾಗುತ್ತವೆ. ಇದನ್ನು ಗಮನಿಸಿದರೆ ಸರ್ಕಾರಿ ಉದ್ಯೋಗ ಪಡೆಯಲು ಎಷ್ಟು ಸ್ಪರ್ಧೆ ಇದೆ ಎಂದು ತಿಳಿಯಬಹುದು ಎಂದರು.

ಯುವ ಜನತೆ ಮುಂದಿನ ದಿನಗಳಲ್ಲಿ ಸರ್ಕಾರಿ ಉದ್ಯೋಗದ ಹಿಂದೆ ಬೀಳದೆ ಸ್ವ-ಉದ್ಯೋಗದತ್ತ ಗಮನ ಹರಿಸಬೇಕು. ಒಂದು ವೇಳೆ ಸರ್ಕಾರಿ ಉದ್ಯೋಗ ಪಡೆಯುವ ಅಚಲ ವಿಶ್ವಾಸವಿದ್ದೂ ಹಾಗೂ ಪ್ರಯತ್ನ ಮಾಡುತ್ತಿದ್ದರೂ ಸ್ವ-ಉದ್ಯೋಗ ಆರಂಭಿಸುವ ಆಲೋಚನೆಯೂ ನಿಮ್ಮಲ್ಲಿರಬೇಕು. ಸರ್ಕಾರಿ ಉದ್ಯೋಗ ದಕ್ಕುವುದು ವಿಳಂಬವಾದರೆ ಅಥವಾ ಸರ್ಕಾರಿ ಕೆಲಸ ಸಿಗದಿದ್ದರೆ ಸ್ವ-ಉದ್ಯೋಗದಲ್ಲಿ ಮುಂದುವರೆಯಬಹುದು. ಈ ನಿಟ್ಟಿನಲ್ಲಿ ಯುವಜನತೆ ಸ್ವ-ಉದ್ಯೋಗ ಮಾಡುವ ಮೂಲಕ ಸ್ವಾವಲಂಬಿ ಜೀವನ ನಡೆಸಬೇಕು ಎಂದು ಅವರು ಸಲಹೆ ನೀಡಿದರು.

ಕೈಗಾರಿಕಾ ಇಲಾಖೆ ಸ್ವ-ಉದ್ಯೋಗಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸುತ್ತಿದೆ. ಈ ವರ್ಷದಿಂದ ಇಲಾಖೆಯು 'ಉದ್ಯಮಿಗಳಾಗಿ ಉದ್ಯೋಗ ನೀಡಿ' ಎಂಬ ಘೋಷಣೆಯೊಂದಿಗೆ ಸ್ವ-ಉದ್ಯೋಗ ಆರಂಭಕ್ಕೆ ಪ್ರೋತ್ಸಾಹ ನೀಡುತ್ತಿದೆ. ಸಾಲ ಸೌಲಭ್ಯವೂ ದೊರಕುವುದರಿಂದ ಮುಂದಿನ ದಿನಗಳಲ್ಲಿ ಸ್ವ-ಉದ್ಯೋಗ ಹೆಚ್ಚು ಪ್ರವರ್ಧಮಾನಕ್ಕೆ ಬರುತ್ತದೆ. ಉತ್ಪಾದನೆಯಾಗುವ ವಸ್ತು ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ ಎಂದು ಇಲಾಖೆಯಲ್ಲಿರುವ ಸೌಲಭ್ಯಗಳನ್ನು ವಿವರಿಸಿದರು.

ರಾಷ್ಟ್ರೀಯ ಎಸ್‌ಸಿ, ಎಸ್ಟಿ ಹಬ್ ಬೆಂಗಳೂರು ಶಾಖೆಯ ಮುಖ್ಯಸ್ಥೆ ಎ.ಕೋಕಿಲ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಎಸ್‌ಸಿ,ಎಸ್ಟಿ ಹಬ್ ಶ್ರಮಿಸುತ್ತಿದೆ. ಬೆಂಗಳೂರು ಸೇರಿದಂತೆ ದೇಶದಾದ್ಯಂತ 15 ಕಚೇರಿಯನ್ನು ಹೊಂದಿದೆ.

ಕೇಂದ್ರ ಸರ್ಕಾರದ 250ಕ್ಕೂ ಹೆಚ್ಚು ಪಬ್ಲಿಕ್ ಸೆಕ್ಟರ್ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳಿಂದ ಅಗತ್ಯ ವಸ್ತುಗಳನ್ನು ಖರೀದಿಸುವಂತೆ ನಿಯಮ ರೂಪಿಸಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ರೈಲ್ವೆ, ಬಿಇಎಲ್, ಬಿಹೆಚ್‌ಎಲ್ ಸೇರಿದಂತೆ ಎಲ್ಲಾ ಸಂಸ್ಥೆಗಳಲ್ಲೂ ಅಗತ್ಯ ವಸ್ತುಗಳ ಖರೀದಿಯಲ್ಲಿ ಶೇ.25ರಷ್ಟು ಸಾಮಾನ್ಯ ವರ್ಗ ಉದ್ಯಮಿಗಳಿಂದ, ಶೇ.3ರಷ್ಟು ಮಹಿಳಾ ಉದ್ಯಮಿಗಳಿಂದ ಹಾಗೂ ಶೇ.4ರಷ್ಟು ಎಸ್‌ಸಿ, ಎಸ್ಟಿ ಉದ್ಯಮಿಗಳಿಂದ ವಸ್ತುಗಳನ್ನು ಕಡ್ಡಾಯವಾಗಿ ಖರೀದಿಸಲೇಬೇಕು ಎಂಬ ನಿಯಮವಿದೆ. ಶೇ.4ರಷ್ಟು ಉತ್ಪನ್ನ ಖರೀದಿಸಿದರೆ ಕೋಟ್ಯಾಂತರ ರೂ. ವಹಿವಾಟಾಗಲಿದೆ ಎಂದರು.

ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ವಿವಿಧ ವಸ್ತುಗಳ ಖರೀದಿಗೆ ಮುಂದಾಗಿದ್ದರೂ ಎಸ್‌ಸಿ, ಎಸ್ಟಿ ಉದ್ಯಮಿಗಳಿಂದ ಅಗತ್ಯ ವಸ್ತುಗಳು ಬೇಡಿಕೆ ಅನುಗುಣವಾಗಿ ಸರಬರಾಜಾಗುತ್ತಿಲ್ಲ. ಇದುವರೆಗೆ ಈ ಸಮುದಾಯದ ಉದ್ಯಮಿಗಳಿಂದ ಶೇ.0.08ರಷ್ಟು ಮಾತ್ರ ವಸ್ತುಗಳು ಪೂರೈಕೆಯಾಗುತ್ತಿದೆ. ಇದನ್ನು ಮನಗಂಡು ಕೇಂದ್ರ ಸರ್ಕಾರಿ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳನ್ನು ಬರಮಾಡಿಕೊಂಡು ಅವರ ಸಂಸ್ಥೆಯಿಂದ ಯಾವ ಯಾವ ವಸ್ತು ಖರೀದಿಸುತ್ತಾರೆ. ಯಾವೆಲ್ಲಾ ವಸ್ತುಗಳು ಅವರಿಗೆ ಬೇಕಾಗಿದೆ ಎಂದು ಹೇಳಿಸುವುದಕ್ಕಾಗಿ ಎನ್‌ಎಸ್‌ಎಸ್‌ಹೆಚ್ ಯೋಜನೆಗಳ ಕುರಿತ ಜಾಗೃತಿ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು,

ಕಾರ್ಯಕ್ರಮದಲ್ಲಿ ಮೈಸೂರು, ಚಾಮರಾಜನಗರ ಜಿಲ್ಲೆಗಳ ನೂರಾರು ಮಂದಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳು ಪಾಲ್ಗೊಂಡು ವಿವಿಧ ಸಂಸ್ಥೆಗಳ ಅಧಿಕಾರಿಗಳು ನೀಡಿದ ಪ್ರಾತ್ಯಕ್ಷಿಕೆ ವೀಕ್ಷಿಸಿ, ಯಾವ ವಸ್ತುಗಳಿಗೆ ಬೇಡಿಕೆ ಇದೆ ಎಂದು ತಿಳಿದುಕೊಂಡರು.

ಸಭೆಯಲ್ಲಿ ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪಂಗಡದ ಉದ್ಯಮಿಗಳ ಸಂಘದ ಅಧ್ಯಕ್ಷ ಆರ್.ಮಂಜುನಾಥ್, ಬಿ.ಇ.ಎಂ.ಎಲ್ ಸಂಸ್ಥೆಯಿಂದ ಎಸ್.ಕೃಷ್ಣಮೂರ್ತಿ, ನೈರುತ್ಯ ರೈಲ್ವೆಯ ಎಡಿಎಂಎಂ ಕೆ.ಎಲ್. ಪಾಂಡೆ, ರಾಜ್ಯ ಹಣಕಾಸು ಸಂಸ್ಥೆಯ ಹಿರಿಯ ವ್ಯವಸ್ಥಾಪಕ ನಾಗೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ನಾಳೆ ಮೈಸೂರಲ್ಲಿ ಕೈಗಾರಿಕಾ ಕಾನೂನುಗಳ ಬಗ್ಗೆ ನ್ಯಾಯಾಲಯ ವಿಶ್ಲೇಷಣೆ ಕುರಿತ ಕಾರ್ಯಾಗಾರ

ಮೈಸೂರು,ಜೂ.28(ಆರ್‌ಕೆಬಿ)- ಕೈಗಾರಿಕಾ ನಿರ್ವಹಣಾ ಸಂಸ್ಥೆ ವತಿಯಿಂದ ಇದೇ ಜೂ. 30 ರಂದು ಬೆಳಗ್ಗೆ 9.30ಕ್ಕೆ ಬನ್ನಿಮಂಟಪದ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಭಾಂಗಣದಲ್ಲಿ 'ಕೈಗಾರಿಕಾ ಕಾನೂನುಗಳ ಬಗ್ಗೆ ನ್ಯಾಯಾಲಯಗಳ ವಿಶ್ಲೇಷಣೆ' ಕುರಿತ ಒಂದು ದಿನದ ಸಮಾವೇಶ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಎ.ಸಿ.ನರೇಂದ್ರ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉಪಸ್ಥಿತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಸಮಾವೇಶಕ್ಕೆ ಚಾಲನೆ ನೀಡುವರು. ಮಾಜಿ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ, ಮೆರಿಟರ್ ಕಂಪನಿಯ ಸಿಇಓ ಎನ್.ಮುತ್ತುಕುಮಾರ್ ಅತಿಥಿಗಳಾಗಿ ಭಾಗವಹಿಸುವರು ಎಂದರು.

ತಮ್ಮದು ಕಾರ್ಮಿಕರು ಹಾಗೂ ಉದ್ಯೋಗದಾತರ ನಡುವೆ ಉತ್ತಮ ಸಂಬಂಧ ಏರ್ಪಡಿಸುವ ಸಂಸ್ಥೆಯಾಗಿದ್ದು, ಸದಸ್ಯರ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಸಮಾವೇಶ, ಸಾಮಾಜಿಕ ಕಾರ್ಯಕ್ರಮ, ಉಪನ್ಯಾಸ, ಮೊದಲಾದವನ್ನು ಏರ್ಪಡಿಸುತ್ತಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಗೋಪಾಲಕೃಷ್ಣ, ಮಹೇಶ್, ವಿನಾಯಕ್ ಭಟ್ ಉಪಸ್ಥಿತರಿದ್ದರು.

## ಜು.16ರಂದು ಪಿಯುಸಿ ವಿಜ್ಞಾನದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ



ಮೈಸೂರು,ಜೂ.28(ಆರ್‌ಕೆಬಿ)- ಮೈಸೂರಿನ ಯರಗನಹಳ್ಳಿ ಬಡಾವಣೆಯ ಜ್ಞಾನವಾಹಿನಿ ಶಿಕ್ಷಣ ಸಂಸ್ಥೆ (ಮೈಸೆಮ್) ವತಿಯಿಂದ ಜು.16ರಂದು ಕಾಲೇಜಿನ ಆವರಣದಲ್ಲಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ 100 ವಿದ್ಯಾರ್ಥಿಗಳನ್ನು ಗೌರವಿಸುವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಎಂ.ಎಸ್.ಪ್ರಭುಸ್ವಾಮಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಕಗಳ ಆಧಾರದ ಮೇಲೆ ಕಾಲೇಜಿನ ಪರಿಶೀಲನಾ ಸಮಿತಿ ಪಟ್ಟಿ ತಯಾರಿಸಲಿದೆ. ಇದೇ ವೇಳೆ ಸಮಾಜದ ವಿವಿಧ ಕ್ಷೇತ್ರದ ಗಣ್ಯರನ್ನೂ ಸನ್ಮಾನಿಸಲಿದೆ. ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಬಯಸುವವರು ಹೆಚ್ಚಿನ ಮಾಹಿತಿಗೆ ಕಾಲೇಜಿನ ದೂರವಾಣಿ 0821-2971173 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಕೆ.ಎನ್.ಪುಟ್ಟಬುದ್ಧಿ, ಪದಾಧಿಕಾರಿಗಳಾದ ಶಿವಪ್ಪ, ಪ್ರೊ.ಎನ್.ಮಂಜುನಾಥ್, ಚೇತನ್, ಮಹದೇವಸ್ವಾಮಿ ಉಪಸ್ಥಿತರಿದ್ದರು.

## ಇಂದು ವಿಚಾರ ಸಂಕಿರಣ

ಮೈಸೂರು,ಜೂ.28-ಎಸ್‌ಬಿ ಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಹಾಗೂ ರಾಜ್ಯ ಅನಿಕೇತನ ಸಾಂಸ್ಕೃತಿಕ ವೇದಿಕೆ ರಾಷ್ಟ್ರಕವಿ ಕುವೆಂಪು ವಿಶ್ವಮಾನವ- ಸಂದೇಶ ಪ್ರಚಾರ ಕಾರ್ಯಕ್ರಮದ ಅಂಗವಾಗಿ ಜೂ.29ರಂದು ಬೆಳಗ್ಗೆ 10ಕ್ಕೆ ಮಹಾಜನ ಕಾಲೇಜಿನ ವಿವೇಕಾ ನಂದ ಸಭಾಂಗಣದಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣ, ಕವಿಗೋಷ್ಠಿ, ಹಾಗೂ ರಾಜ್ಯ ಅನಿಕೇತನ ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಿದೆ. ಕಾರ್ಯಕ್ರಮವನ್ನು ಪ್ರೊ.ಎಂ.ಕೃಷ್ಣಗೌಡ ಉದ್ಘಾಟಿಸುವರು. ವಿಮರ್ಶಕ- ಪ್ರೊ.ಎನ್, ಬೋರಲಿಂಗಯ್ಯ ವಿಷಯ ಮಂಡಿಸುವರು.

## ಕಣ್ಣಿನ ತಪಾಸಣಾ ಶಿಬಿರ

ಮೈಸೂರು,ಜೂ.28-ಡಾ.ಅಗರವಾಲ್ ಕಣ್ಣಿನ ಆಸ್ಪತ್ರೆ ವತಿಯಿಂದ ಪ್ರತಿ ಬುಧವಾರ ಮೈಸೂರಿನ ಹಿರಿಯ ನಾಗರಿಕರಿಗೆ ಉಚಿತವಾಗಿ ಕಣ್ಣಿನ ತಪಾಸಣೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 88844 77956 ಸಂಪರ್ಕಿಸಬಹುದು,

## ಅಭಿವೃದ್ಧಿ ವಿಚಾರ ಸಂಬಂಧ ಚರ್ಚೆಗೆ ನಾವು ಸಿದ್ಧ

**ಕುರ್ಚಿಯೊಂದಿಗೆ ಇಂದು ಕಾಂಗ್ರೆಸ್ ಕಚೇರಿಗೆ ತೆರಳಲಿರುವ ಬಿಜೆಪಿ ಕಾರ್ಯಕರ್ತರು**

ಮೈಸೂರು,ಜೂ.28(ಎಂಟಿವೈ)- ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚಿಸಲು ನಾಳೆ(ಜೂ.29) ಬೆಳಗ್ಗೆ 10 ಗಂಟೆಗೆ ಅಗತ್ಯ ದಾಖಲೆಗಳೊಂದಿಗೆ ಕಾಂಗ್ರೆಸ್ ಭವನಕ್ಕೆ ನಾವೇ ಹೋಗುತ್ತೇವೆ ಎಂದು ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ಕಿರಣ್‌ಗೌಡ ತಿಳಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಪ್ರತಾಪಸಿಂಹ ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ಚರ್ಚಿಸಲು ಸಿದ್ಧರಿದ್ದಾರೆ. ಆದರೆ ಜನಪ್ರತಿನಿಧಿಯೂ ಅಲ್ಲದ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಅವರೊಂದಿಗೆ ಚರ್ಚಿಸಲು ಬಿಜೆಪಿ ಕಾರ್ಯಕರ್ತರು ಸಿದ್ಧರಿದ್ದೇವೆ ಎಂದರು. ಎಂ.ಲಕ್ಷ್ಮಣ್ ಅವರು ಸಂಸದರ ಕಚೇರಿಗೆ ಜೂ.29ರಂದು ಚರ್ಚೆಗೆ ಬರುವುದಾಗಿ ತಿಳಿಸಿದ್ದಾರೆ. ಅವರು ಬರುವುದು ಬೇಡ. ಬುಧವಾರ ಬೆಳಗ್ಗೆ 10 ಗಂಟೆಗೆ ಮೆಟ್ರೋಪೋಲ್ ವೃತ್ತದಲ್ಲಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಕಾಂಗ್ರೆಸ್ ಕಚೇರಿಗೆ ನಾವೇ ಕುರ್ಚಿಯೊಂದಿಗೆ ಚರ್ಚೆಗೆ ಹೋಗುತ್ತೇವೆ ಎಂದರು.

ಅಭಿವೃದ್ಧಿ ವಿಚಾರವಾಗಿ ಎಂ.ಲಕ್ಷ್ಮಣ್ ಅವರು ವಿಪಕ್ಷ ನಾಯಕ ಸಿದ್ದರಾಮಯ್ಯ ಹಾಗೂ ಮಾಜಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಅವರೊಂದಿಗೆ ಚರ್ಚೆಗೆ ಬರುವುದಾಗಿ 48 ಗಂಟೆ ಮುಂಚಿತವಾಗಿ ತಿಳಿಸಿದರೆ ಸಂಸದ ಪ್ರತಾಪಸಿಂಹ ಅವರನ್ನು ಕರೆದುಕೊಂಡು ಬರುತ್ತೇವೆ. ಮೈಸೂರು ಅಭಿವೃದ್ಧಿ ಚರ್ಚೆ ಪ್ರತಾಪಸಿಂಹ ಮತ್ತು ಲಕ್ಷ್ಮಣ್ ಅವರ ಹೋರಾಟವಾಗಿದೆ. ಇದು ಬಿಜೆಪಿಗೆ ಸಂಬಂಧಿಸಿದ ವಿಷಯವಲ್ಲ. ಇದನ್ನು ಪಕ್ಷದ ಸೂಚನೆಯಂತೆ ಸುದ್ದಿಗೋಷ್ಠಿ ಮಾಡುತ್ತಿದ್ದೇವೆ. ಸಂಸದರ ಕೊಡುಗೆ ಕುರಿತು ಮುಕ್ತ ಚರ್ಚೆಗೆ ಸಿದ್ಧರಿದ್ದೇವೆ ಎಂದು ತಿಳಿಸಿದರು.

ಬಿಜೆಪಿ ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಜೈಶಂಕರ್ ಮಾತನಾಡಿ, ಲಕ್ಷ್ಮಣ್ ಮೂರು ಚುನಾವಣೆಯಲ್ಲಿ ಸೋತಿದ್ದಾರೆ. ರಾಜ್ಯ ವಕ್ತಾರರಾಗಿ ಮೈಸೂರು ನಗರಕ್ಕೆ ಸೀಮಿತರಾಗಿದ್ದಾರೆ. ಪ್ರತಾಪಸಿಂಹ ಅವರ ವಿರುದ್ಧ ವೈಯಕ್ತಿಕ ದಾಳಿ ಮಾಡುತ್ತಿದ್ದಾರೆ. ಸಂಸದರ ವಿರುದ್ಧ ಗ್ರಾಪಂ ಚುನಾವಣೆಯಲ್ಲಿ ಸ್ಪರ್ಧಿಸುವ ಸವಾಲಿನಲ್ಲಿಯೇ ಅವರ ಸ್ಥಾನ ಎಂತಹದು ಎಂದು ಅರ್ಥ ಮಾಡಿಕೊಳ್ಳಬಹುದಾಗಿದೆ ಎಂದರು.

## ಸಹಾಯಧನ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.28- 2022-23 ನೇ ಸಾಲಿನಲ್ಲಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ (PMEGP) ಗ್ರಾಮ ಪಂಚಾಯ್ತಿ/ ಪಟ್ಟಣಪಂಚಾಯ್ತಿ ಮತ್ತು ನಗರ ಪ್ರದೇಶಗಳಲ್ಲಿ ಬ್ಯಾಂಕ್‌ಗಳ ಮುಖಾಂತರ ಸಾಲ ಪಡೆದು ಸಣ್ಣ ಕೈಗಾರಿಕೆ/ ಸೇವಾ ಉದ್ದಿಮೆಯನ್ನು ಸ್ಥಾಪಿಸುವ ಫಲಾನುಭವಿಗಳಿಗೆ ಶೇ.25 ರಿಂದ 35% ರಷ್ಟು ಸಹಾಯಧನ ಸೌಲಭ್ಯ ನೀಡಲು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (KVIB) ಮೈಸೂರು ವತಿಯಿಂದ ಆನ್‌ಲೈನ್ (www.pmegpeportal ಅಥವಾ www.kvic.org.in) ಮೂಲಕ ಅರ್ಜಿಯನ್ನು ಸ್ವೀಕರಿಸಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಜಿಲ್ಲಾ ಕಚೇರಿ, ಜಿಲ್ಲಾ ಕೈಗಾರಿಕೆ ಕೇಂದ್ರ ಆವರಣ, ಸಯ್ಯಾಜಿ ರಾವ್ ರಸ್ತೆ, ಮೈಸೂರು ಕಚೇರಿ ದೂರವಾಣಿ; 0821-2566428, ಇವರನ್ನು ಸಂಪರ್ಕಿಸಬಹುದು.

**ಮೈಸೂರು ವಿವಿ ಮಾನವಶಾಸ್ತ್ರ ವಿಭಾಗದಿಂದ 'ಭಾರತೀಯ ಜ್ಞಾನ ಪರಂಪರೆ' ಬಗ್ಗೆ ಉಪನ್ಯಾಸ ಕಾರ್ಯಕ್ರಮ**

## ನ್ಯಾಯ, ತರ್ಕ, ತತ್ವಶಾಸ್ತ್ರಗಳನ್ನು ಅಭ್ಯಾಸಿಸುವ ಪ್ರಕ್ರಿಯೆ ನಮ್ಮ ಶಿಕ್ಷಣದಲ್ಲಿರಬೇಕು

### ಮೇಘಾಲಯದ ಬಿಸ್ಕುರೊಂ ಫೌಂಡೇಷನ್ ಅಧ್ಯಕ್ಷ ಡಾ.ಸುಬ್ರಹ್ಮಣ್ಯ ಭಾರತೀ ಕೊಣಲೆ ಅಭಿಮತ

ಮೈಸೂರು,ಜೂ.28(ಪಿಎಂ)- ನ್ಯಾಯ, ತರ್ಕ, ತತ್ವಶಾಸ್ತ್ರಗಳನ್ನು ಅಭ್ಯಾಸ ಮಾಡುವ ಪ್ರಕ್ರಿಯೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇರಬೇಕು. ಭಾರತೀಯ ಜ್ಞಾನ ಪರಂಪರೆಗೆ ಪೂರಕವಾದ ಅಂಶಗಳನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸುವ ಪ್ರಯತ್ನ ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರಲ್ಲಿ ನಡೆಸಲಾಗಿದೆ ಎಂದು ಮೇಘಾಲಯದ ಬಿಸ್ಕುರೊಂ ಫೌಂಡೇಷನ್ ಅಧ್ಯಕ್ಷ ಡಾ.ಸುಬ್ರಹ್ಮಣ್ಯ ಭಾರತೀ ಕೊಣಲೆ ಹೇಳಿದರು.

ಮೈಸೂರು ವಿವಿಯ ಮಾನವಶಾಸ್ತ್ರ ಅಧ್ಯಯನ ವಿಭಾಗದ ಸೆಮಿನಾರ್ ಹಾಲ್‌ನಲ್ಲಿ ವಿಭಾಗ ಮತ್ತು ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ ಕರ್ನಾಟಕ ಪ್ರಾಂತದ ಜಂಟಿ ಆಶ್ರಯದಲ್ಲಿ 'ಭಾರತೀಯ ಜ್ಞಾನ ಪರಂಪರೆ' ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಭಾರತೀಯ ಶಿಕ್ಷಣ; ಸ್ಥಿತಿಗತಿಗಳು' ಕುರಿತು ಅವರು ವಿಷಯ ಮಂಡಿಸಿದರು.

ವಿದ್ಯಾರ್ಥಿಯು ಸೂಕ್ತ ಚಿಂತನೆ ಮಾಡುವಂತಹ ಸಾಮರ್ಥ್ಯ ಬೆಳೆಸಿಕೊಳ್ಳಲು ಪೂರಕವಾದ ಶಿಕ್ಷಣ ಇಂದಿನ ಅಗತ್ಯವಾಗಿದೆ. ಜೊತೆಗೆ ಮಾನವೀಯತೆ ಕುರಿತಂತೆ ವಿಶಾಲ ದೃಷ್ಟಿಕೋನದಲ್ಲಿ ಕಲಿಸಬೇಕಿದೆ. ಇಂದಿನ ಜಗತ್ತಿನಲ್ಲಿ ಉದ್ಭವಿಸಿರುವ ಹಲವು ಸಮಸ್ಯೆಗಳಿಗೆ ಸಂವೇದನಾಶೀಲತೆ ಇಲ್ಲದೇ ಇರುವುದೇ ಕಾರಣವಾಗಿದೆ. ನ್ಯಾಯ, ತರ್ಕ, ವೇದಾಂತ ವಿಷಯಗಳನ್ನು ಪ್ರತಿಯೊಬ್ಬರು ಕಲಿಯಬೇಕು. ಇದರಿಂದ ಚಿಂತನಾಶೀಲ ಮನೋಭಾವ ಬೆಳೆಯಲಿದೆ ಎಂದು ಹೇಳಿದರು.



ಮೈಸೂರು ಮಾನಸ ಗಂಗೋತ್ರಿಯಲ್ಲಿ ಮೈಸೂರು ವಿವಿಯ ಮಾನವಶಾಸ್ತ್ರ ವಿಭಾಗದ ಸೆಮಿನಾರ್ ಹಾಲ್‌ನಲ್ಲಿ ಮಂಗಳವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಮೇಘಾಲಯದ ಬಿಸ್ಕುರೊಂ ಫೌಂಡೇಷನ್ ಅಧ್ಯಕ್ಷ ಡಾ.ಸುಬ್ರಹ್ಮಣ್ಯ ಭಾರತೀ ಕೊಣಲೆ ಮಾತನಾಡಿದರು.

ಭಾರತೀಯ ಜ್ಞಾನ ಪರಂಪರೆಯಲ್ಲಿ 'ನಾನು ಯಾರು' ಎಂಬ ಬಗ್ಗೆ ಆಳವಾಗಿ ಚಿಂತಿಸಿರುವುದನ್ನು ಕಾಣಬಹುದು. ವಿದ್ಯೆ, ನಮ್ಮನ್ನು ಬಂಧನದಿಂದ ಬಿಡುಗಡೆಗೊಳಿಸಲಿದೆ. ಅಲ್ಲದೆ, ವಿದ್ಯೆಯಿಂದ ವಿನಯ ಬರಲಿದೆ. ವಿದ್ಯೆ ಧರ್ಮಕ್ಕೆ ಕಾರಣವಾಗಲಿದ್ದು, ಅದರಿಂದ ಬದುಕಿನಲ್ಲಿ ಸುಖ ದೊರೆಯುತ್ತದೆ. ಇಲ್ಲಿ ಧರ್ಮ ಎಂದರೆ ವಿಶಾಲಾರ್ಥದಲ್ಲಿ ಸ್ವೀಕರಿಸಬೇಕಾಗುತ್ತದೆ ಎಂದರು.

ನಮ್ಮಲ್ಲಿ ಪಂಪನಿಂದ ಹಿಡಿದು ಕುವೆಂಪು ಅವರವರೆಗೆ ವಿಶ್ವಮಾನವ ಕಲ್ಪನೆಯ ಪ್ರಸ್ತಾಪವನ್ನು ಕಾಣಬಹುದು. ಭಾರತೀಯ ಜ್ಞಾನ ಪರಂಪರೆಯಲ್ಲಿ ವಿಶ್ವ ಮಾನವ ಎಂಬುದರ ಅರ್ಥವನ್ನು ವಿಶ್ವ ಮತ್ತು ಮಾನವ ಎರಡೂ ಒಂದೇ ಎಂಬುದಾಗಿ ಪ್ರತಿಬಿಂಬಿಸಲಾಗಿದೆ. ವಿಶ್ವ ಇದ್ದರೆ ಮಾನವ ಇರುತ್ತಾನೆ. ಪರಿಸರ ಸಂರಕ್ಷಣೆಯಿಂದ ಮಾತ್ರವೇ ನಾವು ಉಳಿಯುತ್ತೇವೆ ಎಂಬಂತೆಯೇ ವಿಶ್ವವಿಲ್ಲದೆ ಮಾನವನಿಲ್ಲ ಎಂದು ವಿಶ್ಲೇಷಿಸಿದರು.

ಪ್ರತಿಯೊಂದು ಜೀವಿಯಲ್ಲಿಯೂ ಬದುಕಬೇಕೆಂಬ ಇಚ್ಛೆ ಇರುತ್ತದೆ. ಹಾಗಾಗಿ ಬದುಕಿಗೆ ಅಗತ್ಯವಾದ ತಿಳುವಳಿಕೆಯನ್ನು ಅವು ಹೊಂದಿರುವುದನ್ನು ಕಾಣಬಹುದು. ಪಶು-ಪಕ್ಷಿಗಳಲ್ಲಿ ಹೇಳುವುದಾದರೆ, ಆಹಾರ ಸೇವನೆ ಬಗ್ಗೆ ಅವುಗಳದ್ದೇ ಆದ ಕೌಶಲ ಕರಗತ ಮಾಡಿಕೊಂಡಿರುತ್ತವೆ. ಇದು ಕೂಡ ಶಿಕ್ಷಣವಾಗಿದ್ದು, ಹಾಗಾಗಿ ಶಿಕ್ಷಣ ಎಂಬುದು ಕೇವಲ ಮಾನವನಿಗೆ ಮಾತ್ರ ಸೀಮಿತವಲ್ಲ ಎಂದರು.

ಮನೆ ಕಟ್ಟಿಕೊಳ್ಳುವ ಪದ್ಧತಿ ಕೇವಲ ಮನುಷ್ಯನಲ್ಲಿ ಮಾತ್ರವಿಲ್ಲ. ಪಶು-ಪಕ್ಷಿಗಳಲ್ಲೂ ಇದೆ. ತನ್ನನ್ನು ಹಾಗೂ ತನ್ನ ಸಮುದಾಯವನ್ನು ಸಂರಕ್ಷಣೆ ಮಾಡಿಕೊಳ್ಳುವ ಶಿಕ್ಷಣ ಎಲ್ಲಾ ಜೀವಿಗಳಲ್ಲೂ ಇರುತ್ತದೆ. ಆದರೆ ಮಾನವನಲ್ಲಿರುವ ವಿಶೇಷವೆಂದರೆ ಅಧ್ಯಯನ ಮತ್ತು ಶೋಧನ ಪ್ರವೃತ್ತಿ ಹೆಚ್ಚಿರುವುದಾಗಿದೆ ಎಂದು ತಿಳಿಸಿದರು.

'ಶಿಕ್ಷಣ-ಭಾರತೀಯ ದೃಷ್ಟಿಕೋನ' ಕುರಿತು ಪ್ರಜ್ಞಾ ಪ್ರವಾಹ ಕ್ಷೇತ್ರಿಯ ಸಂಯೋಜಕ ರಘುನಂದನ ಮಾತನಾಡಿದರು. ಇದಕ್ಕೂ ಮುನ್ನ ಸರಸ್ವತಿ ಚಿತ್ರಪಟಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಮೈಸೂರು ವಿವಿ ಮಾನವಶಾಸ್ತ್ರ ಅಧ್ಯಯನ ವಿಭಾಗದ ಮಾಜಿ ಅಧ್ಯಕ್ಷ ಪ್ರೊ.ಹೆಚ್.ಕೆ.ಭಟ್, ಅಧ್ಯಕ್ಷ ಪ್ರೊ.ಎಂ. ಆರ್.ಗಂಗಾಧರ್ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ ಬುಧವಾರ 29 ಜೂನ್ 2022

# ಅಗ್ನಿಪಥ್ ಯೋಜನೆ ಕೈಬಿಡುವಂತೆ ಒತ್ತಾಯಿಸಿ ಪ್ರತಿಭಟನೆ



ತಿ.ನರಸೀಪುರ, ಜೂ.28(ಎಸ್‌ಕೆ)– ಕೇಂದ್ರ ಸರ್ಕಾರ ಜಾರಿಗೆ ತರಲು ಮುಂದಾಗಿರುವ ಅಗ್ನಿಪಥ್ ಯೋಜನೆ ಕೈ ಬಿಡಬೇಕು ಎಂದು ಆಗ್ರಹಿಸಿ ಪಟ್ಟಣದಲ್ಲಿ ಬ್ಲಾಕ್ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಯಿತು.

ಪಟ್ಟಣದ ತಾಲೂಕು ಕಚೇರಿ ಮುಂಭಾಗ ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಬಿಜೆಪಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಸುನೀಲ್‌ಬೋಸ್ ಮಾತನಾಡಿ, ಅಗ್ನಿಪಥ್ ಯೋಜನೆ ಮೂಲಕ 4 ವರ್ಷಕ್ಕೆ ಮಾತ್ರ ಸೇನೆಗೆ ನೇಮಕಾತಿ ಮಾಡಲಾಗುತ್ತದೆ. ಪಿಯುಸಿ ವಿದ್ಯಾಭ್ಯಾಸದ ನಂತರ 17ರಿಂದ 22ವರ್ಷ ವಯಸ್ಸಿನ ಯುವಕರಿಗೆ 4 ವರ್ಷಗಳ ಅವಧಿಗೆ ಮಾತ್ರ ಕೆಲಸ ನೀಡಿ ಕೆಲಸದ ಅವಧಿ ಪೂರ್ಣಗೊಂಡ ನಂತರ ಅಗ್ನಿವೀರ್‌ಗೆ ಒಂದು ದೊಡ್ಡ ಮೊತ್ತದ ನಿವೃತ್ತಿ ಪ್ಯಾಕೇಜ್ ನೀಡಿ ಕಳುಹಿಸಲಾಗುತ್ತದೆ. ಆನಂತರ ಅವರ ಭವಿಷ್ಯಕ್ಕೆ ಭದ್ರತೆ ಇಲ್ಲದಂತಾಗುತ್ತದೆ. ಸೇನೆಯಿಂದ ಹೊರಬಂದ ಯುವಕರು ನಿರುದ್ಯೋಗಿಗಳಾಗಲಿದ್ದಾರೆ. ಹಾಗಾಗಿ ಅಗ್ನಿಪಥ್ ಯೋಜನೆ ಅವೈಜ್ಞಾನಿಕವಾಗಿದ್ದು, ಕೂಡಲೇ ಯೋಜನೆ ಕೈಬಿಡಬೇಕು ಎಂದು ಒತ್ತಾಯಿಸಿದರು.

ಮೈಮುಲ್ ನಿರ್ದೇಶಕ ಚೆಲುವರಾಜು ಮಾತನಾಡಿ, ಬಿಜೆಪಿಯ 8 ವರ್ಷಗಳ ಅವಧಿಯಲ್ಲಿ ಯಾವೊಂದು ಜನೋಪಯೋಗಿ ಕೆಲಸ ಮಾಡದೇ, ಕೇವಲ ಜಾತಿ– ಜಾತಿಗಳ ನಡುವೆ ವೈಷಮ್ಯ ಹುಟ್ಟಿಹಾಕುವ ಕೆಲಸ ಮಾಡಲಾಗುತ್ತಿದೆ. ಪ್ರಸ್ತುತ ಜಾರಿಗೊಳಿಸುತ್ತಿರುವ ಅಗ್ನಿಪಥ್ ಯೋಜನೆಯಿಂದ ದೇಶದ ಯುವಕರು 4 ವರ್ಷಗಳ ನಂತರ ನಿರುದ್ಯೋಗಿಗಳಾಗಿ, ವಿದ್ಯಾಭ್ಯಾಸವನ್ನು ಮಾಡದ ಪರಿಸ್ಥಿತಿಗೆ ಸಿಲುಕಿ, ಸಂಕಷ್ಟ ಎದುರಿಸಬೇಕಾಗುತ್ತದೆ ಎಂದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಪುರಸಭಾ ಸದಸ್ಯ ಬಾದಾಮಿ ಮಂಜು, ಭೈರಾಪುರ ಗ್ರಾಪಂ ಸದಸ್ಯ ವಿಜಾಪುರ ಶಿವಶಂಕರ್, ತಾಲೂಕು ಕುರುಬ ಸಂಘದ ಕಾರ್ಯದರ್ಶಿ ಬಸವರಾಜು, ಮುಖಂಡರಾದ ಚೆನ್ನಕೇಶವ, ಸ್ವಾಮಿನಾಥಗೌಡ, ಎ.ಬಿ.ಮಂಜುನಾಥ(ಮಸಣೇಗೌಡ), ಸಿದ್ದರಾಜು, ಅಣ್ಣಯ್ಯಸ್ವಾಮಿ, ಎ.ಜಿ.ವೆಂಕಟೇಶ್, ಶಿವಸ್ವಾಮಿ, ಪಾರುಪತ್ತೆ ಗಾರ್ ಸಾಗರ್, ಕಪಾಲಿ ಮಂಜು, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಚೇತನ್, ಬನ್ನೂರು ಶಿವು, ಚಿನ್ನಸ್ವಾಮಿ, ಕುಕ್ಕೂರ್ ಗಣೇಶ್, ನೆರಗ್ಯಾತನಹಳ್ಳಿ ಕುಮಾರಸ್ವಾಮಿ, ತಿರುಮಕೂಡಲು ಲಕ್ಷ್ಮಣ, ರಾಮಲಿಂಗಯ್ಯ, ಕೇತಹಳ್ಳಿ ಮಹದೇವಸ್ವಾಮಿ, ಸಿದ್ದಶೆಟ್ಟಿ ಪಾಲ್ಗೊಂಡಿದ್ದರು.

> ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ಯುವ ನಾಯಕ ರಾಹುಲ್‌ಗಾಂಧಿಗೆ ಕಿರುಕುಳ ನೀಡುತ್ತಿದೆ. ಈ ಬಗ್ಗೆ ರಾಜ್ಯ ವ್ಯಾಪಿ ಹೋರಾಟ ನಡೆಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಪ್ರತಿ ವರ್ಷ 2ಲಕ್ಷ ಉದ್ಯೋಗ ಸೃಷ್ಟಿ ಮಾಡುತ್ತೇನೆಂದು ದೇಶದ ಜನತೆಗೆ ನೀಡಿದ ಭರವಸೆ ಹುಸಿಗೊಳಿಸಿ ಜಿಎಸ್‌ಟಿ ಮೂಲಕ ಸಾವಿರಾರು ಸಣ್ಣ ಕೈಗಾರಿಕೆಗಳು ಮುಚ್ಚುವಂತೆ ಮಾಡಿದರು. ಇದರಿಂದಾಗಿ ಲಕ್ಷಾಂತರ ಮಂದಿ ಉದ್ಯೋಗ ಕಳೆದುಕೊಂಡು ನಿರುದ್ಯೋಗಿಯಾಗುವಂತಾಯಿತು.
>
> – ಎಂ.ಡಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ

## ಹುಣಸೂರಿನಲ್ಲಿ ಅಗ್ನಿಪಥ್ ಯೋಜನೆಗೆ ವಿರೋಧ




ಹುಣಸೂರು, ಜೂ.28(ಕೆಕೆ)– ನಗರದ ಸಂವಿಧಾನ ವೃತ್ತದಲ್ಲಿ ಶಾಸಕ ಹೆಚ್.ಪಿ. ಮಂಜುನಾಥ್ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಅಗ್ನಿಪಥ್ ಯೋಜನೆಯ ವಿರುದ್ಧ ಮೌನ ಪ್ರತಿಭಟನೆ ನಡೆಯಿತು.

ಈ ವೇಳೆ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಅಗ್ನಿಪಥ್ ಯೋಜನೆಗೆ ನಮ್ಮ ವಿರೋಧವಿಲ್ಲ. ಆದರೆ, ನೀವು ಅನುಷ್ಠಾನಗೊಳಿಸುತ್ತಿರುವ ಅಗ್ನಿಪಥ್‌ನ ನೀತಿ, ನಿಯಮಗಳಿಗೆ ನಮ್ಮ ವಿರೋಧವಿದೆ ಎಂದರು.

ಹೊಸ ನೀತಿ ನಿಯಮದಿಂದ ಸೈನ್ಯದ ಬಲ ಕುಗ್ಗುತ್ತದೆ. ಕೇವಲ 4 ವರ್ಷ ಯುವಶಕ್ತಿ ಬಳಸಿಕೊಂಡು ನಂತರ ವಾಪಸ್ ಮನೆಗೆ ಕಳುಹಿಸುವುದರಿಂದ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ. ಅಗ್ನಿಪಥ್ ಯೋಜನೆಯಲ್ಲಿ ನೇಮಕಗೊಂಡವರಿಗೆ ಇತರೆ ಸೈನಿಕರಿಗೆ ನೀಡುವಂತೆ ಎಲ್ಲಾ ರೀತಿಯ ಸವಲತ್ತು ನೀಡಬೇಕು. ಅವರಿಗೆ ಪೂರ್ಣಾವಧಿ ಉದ್ಯೋಗದ ಭರವಸೆ ನೀಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಅಗ್ನಿಪಥ್: ನಂಜನಗೂಡಲ್ಲಿ ಪ್ರತಿಭಟನೆ



ನಂಜನಗೂಡು, ಜೂ.28 (ಸುದರ್ಶನ)– ಅಗ್ನಿಪಥ್ ಯೋಜನೆ ರದ್ದುಪಡಿಸಬೇಕು ಎಂದು ಆಗ್ರಹಿಸಿ ನಗರದಲ್ಲಿ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಯಿತು.

ನಗರದ ಹುಲ್ಲಹಳ್ಳಿ ವೃತ್ತದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಅಗ್ನಿಪಥ್ ಯೋಜನೆಯನ್ನು ಕೂಡಲೇ ಕೇಂದ್ರ ಸರ್ಕಾರ ರದ್ದುಪಡಿಸಬೇಕು. ಇದರಿಂದ ಯುವಕರಿಗೆ ಅನ್ಯಾಯವಾಗುತ್ತದೆ. ಅಧಿಕಾರಕ್ಕೆ ಬಂದ ನಂತರ ವರ್ಷಕ್ಕೆ ಎರಡು ಕೋಟಿ ಉದ್ಯೋಗವನ್ನು ಸೃಷ್ಟಿ ಮಾಡುತ್ತೇನೆ ಎಂದು ಹೇಳಿದ ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಉದ್ಯೋಗಗಳನ್ನು ನೀಡುತ್ತಿಲ್ಲ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹುಲ್ಲಹಳ್ಳಿ ಶ್ರೀಕಂಠ ನಾಯಕ, ಮೈಸೂರು ಜಿಲ್ಲಾ ಹಿಂದುಳಿದ ವರ್ಗದ ಅಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್‌ರಾಜ್, ಮಹಿಳಾ ಜಿಲ್ಲಾ ಅಧ್ಯಕ್ಷೆ ಲತಾಸಿದ್ದಶೆಟ್ಟಿ, ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಮಮತಾ, ಎಡತಲೆ ದೊರೆಸ್ವಾಮಿ ನಾಯಕ, ಉಪ್ಪಿನಹಳ್ಳಿ ಶಿವಣ್ಣ, ಗಾಯಿತ್ರಿ, ಗಂಗಾಧರ, ಶಿವಪ್ಪದೇವರು, ಕಳಲೆ ರಾಜೇಶ್, ಪಕ್ಷದ ಮುಖಂಡರು, ಕಾರ್ಯಕರ್ತರು ಇದ್ದರು.

## ಕಂಪಲಾಪುರ ಸರ್ಕಾರಿ ಪ್ರೌಢಶಾಲೆ ಎಸ್‌ಡಿಎಂಸಿ ಅಧ್ಯಕ್ಷರಾಗಿ ಸದಾಶಿವ ಆಯ್ಕೆ



ಕಂಪಲಾಪುರ, ಜೂ.28(ಸದಾ)– ಇಲ್ಲಿನ ಸರ್ಕಾರಿ ಪ್ರೌಢಶಾಲೆಯ ನೂತನ ಎಸ್‌ಡಿಎಂಸಿ ಅಧ್ಯಕ್ಷರಾಗಿ ಪತ್ರಕರ್ತ ಸದಾಶಿವ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಬೆಳಗ್ಗೆ ನಡೆದ ಚುನಾವಣೆಯಲ್ಲಿ ಸದಾಶಿವ 5 ಮತ ಪಡೆದು ಆಯ್ಕೆಯಾದರೆ, ಸತೀಶ್ 4 ಮತ ಪಡೆದು ಪರಾಭವಗೊಂಡರು.

ಈ ವೇಳೆ ನಿರ್ದೇಶಕರಾಗಿ ಕೆ.ಆರ್.ರಾಜೇಶ್, ಜಯರಾಮ್, ಕಿರಣ್, ಚಂದ್ರಶೇಖರ್, ಸತೀಶ್, ಶಹಜಾನ್, ರಾಣಿ, ಮಂಜುಳಾ ಆಯ್ಕೆಯಾಗಿದ್ದಾರೆ. ನೂತನ ಅಧ್ಯಕ್ಷರನ್ನು ಮುಖ್ಯ ಶಿಕ್ಷಕ ಹೆಚ್.ಕೆ.ಮಹದೇವಯ್ಯ ಅಭಿನಂದಿಸಿದರು. ಶಿಕ್ಷಕರಾದ ಯಶವಂತ್, ಜಗದೀಶ್, ಶಿವರಾಜ್ ಸೇರಿದಂತೆ ಶಿಕ್ಷಕಿಯರು, ಗ್ರಾಮಸ್ಥರು ಹಾಜರಿದ್ದರು.

## ತಂಬಾಕು ಮಾರಾಟ ಅಂಗಡಿಗಳ ಮೇಲೆ ದಾಳಿ



ಹೆಚ್.ಡಿ.ಕೋಟೆ, ಜೂ.28(ಮಂಜು)– ಪಟ್ಟಣದಲ್ಲಿ ಮಂಗಳವಾರ ಆರೋಗ್ಯ, ಪೊಲೀಸ್, ಅಬಕಾರಿ ಇಲಾಖೆ, ಪುರಸಭೆಯಿಂದ ಕೋಟ್ಪಾ–2003ರ ಕಾಯ್ದೆಯಡಿ ಟೀ ಸ್ಟಾಲ್, ಬೇಕರಿ, ಬಾರ್ ಅಂಡ್ ರೆಸ್ಟೋರೆಂಟ್, ಶೈಕ್ಷಣಿಕ ಪ್ರದೇಶಗಳ ಆವರಣದಲ್ಲಿ ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದಂತೆ ದಾಳಿ ನಡೆಸಲಾಯಿತು.

ಈ ವೇಳೆ 76 ಪ್ರಕರಣ ದಾಖಲಿಸಿ 7,800 ರೂ. ದಂಡ ವಿಧಿಸಲಾಯಿತು.

ಕಾರ್ಯಾಚರಣೆಯಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಅಬಕಾರಿ ಅಧಿಕಾರಿ ಗೀತಾ, ಎಎಸ್‌ಐ ಅಶೋಕ್ ಕುಮಾರ್, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಹಿರಿಯ ಆರೋಗ್ಯನಿರೀಕ್ಷಣಾಧಿಕಾರಿಗಳಾದ ಚಂದ್ರಶೇಖರ್, ರವಿರಾಜ್, ಪುರಸಭೆ ಆರೋಗ್ಯ ನಿರೀಕ್ಷಣಾಧಿಕಾರಿ ಸಂತೋಷ್ ಕುಮಾರ್, ಜಿಲ್ಲಾ ಸಲಹೆಗಾರ ಶಿವಕುಮಾರ್, ಸಾಮಾಜಿಕ ಕಾರ್ಯಕರ್ತ ಷರೀಫ್, ಪರಿಸರ ಅಭಿಯಂತರ ರಕ್ಷಿತ್, ಅಬಕಾರಿ ಸಿಬ್ಬಂದಿಗಳಾದ ಕೃಷ್ಣ, ಪ್ರತಾಪ್ ಹಾಜರಿದ್ದು, ತಂಬಾಕು ನಿಯಂತ್ರಣ ಬಗ್ಗೆ ಕರ ಪತ್ರ ಹಂಚಿ ಜಾಗೃತಿ ಮೂಡಿಸಿದರು.

## ಪಿಂಚಣಿ ಹಣ ದುರ್ಬಳಕೆ: ಪೋಸ್ಟ್ ಮಾಸ್ಟರ್ ಅಮಾನತು

ಹರತಲೆ, ಜೂ.28(ಮೋಹನ್)– ವೃದ್ಧಾಪ್ಯ, ವಿಧವಾ, ಅಂಗವಿಕಲರಿಗೆ ಸರ್ಕಾರದಿಂದ ನೀಡುವ ಪಿಂಚಣಿ ಹಣವನ್ನು ಫಲಾನುಭವಿಗಳಿಗೆ ನೀಡದೆ ದುರ್ಬಳಕೆ ಮಾಡಿಕೊಂಡಿರುವ ಆರೋಪದಡಿ ತಾಲೂಕಿನ ವಳಗೆರೆ ಗ್ರಾಮದ ಪೋಸ್ಟ್ ಮಾಸ್ಟರ್‌ರನ್ನು ಅಮಾನತು ಮಾಡಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ವಳಗೆರೆ ಗ್ರಾಮದ ಪೋಸ್ಟ್‌ಮಾಸ್ಟರ್ ಮಹೇಂದ್ರ ಪ್ರಸಾದ್ ಅಮಾನತಾಗಿರುವ ನೌಕರ. ಸಾರ್ವಜನಿಕರ ಹಣ ದುರ್ಬಳಕೆ ಮಾಡಿಕೊಂಡಿರುವ ಕುರಿತು ಈತನ ಮೇಲೆ ನಂಜನಗೂಡು ಗ್ರಾಮಾಂತರ ಠಾಣೆಗೆ ಗ್ರಾಮಸ್ಥರು ದೂರು ನೀಡಿದ್ದಾರೆ.

ವೇತನ ಡ್ರಾ ಮಾಡಲು ಪಾಸ್‌ಬುಕ್ ಸಮೇತವಾಗಿ ಬರುವ ಫಲಾನುಭವಿಗಳಿಂದ ಸಹಿ ಮಾಡಿಸಿಕೊಂಡು ಬಳಿಕ, ಸರ್ವರ್ ಡೌನ್ ಆಗಿದೆ. ಇನ್ನೊಂದು ದಿನ ಬನ್ನಿ ಎಂಬ ನೆಪ ಹೇಳಿ ವಾಪಸ್ ಕಳುಹಿಸಿ ನಂತರ ಅವರ ಹಣವನ್ನು ತಾನೇ ಡ್ರಾ ಮಾಡಿಕೊಳ್ಳುತ್ತಿದ್ದ ಎಂದು ಗ್ರಾಮಸ್ಥರು ದೂರಿದ್ದಾರೆ. ನಂಜನಗೂಡು ತಾಲೂಕಿನ ವಳಗೆರೆ ಹಾಗೂ ಹರತಲೆ ಗ್ರಾಮದ ನೂರಾರು ಫಲಾನುಭವಿಗಳಿಗೆ ಪಿಂಚಣಿ ಹಣವನ್ನು ಮಹೇಂದ್ರ ಪ್ರಸಾದ್ ದುರುಪಯೋಗ ಪಡಿಸಿಕೊಂಡಿದ್ದಾನೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಲಕ್ಷಾಂತರ ರೂಪಾಯಿಗಳನ್ನು ವಂಚಿಸಿರುವ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಪೋಸ್ಟ್‌ಮಾಸ್ಟರ್ ಮಹೇಂದ್ರಪ್ರಸಾದ್‌ನನ್ನು ಅಮಾನತುಗೊಳಿಸಲಾಗಿದ್ದು, ಇಲಾಖೆ ಹಂತದಲ್ಲಿ ವಿಚಾರಣೆ ನಡೆಯುತ್ತಿದೆ. ಕೂಡಲೇ ಈತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

## ಆನೆ ದಂತ ಮಾರಾಟಕ್ಕೆ ಯತ್ನ: ನಾಲ್ವರ ಬಂಧನ



ಹನಗೋಡು, ಜೂ.28(ಮಹೇಶ್)– ಆನೆದಂತ ಮಾರಾಟಕ್ಕೆ ಯತ್ನಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸುವಲ್ಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ಅರಣ್ಯ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.

ನಾಗರಹೊಳೆ ಉದ್ಯಾನವನ ವ್ಯಾಪ್ತಿಯ ವಿಶೇಷ ಹುಲಿ ಸಂರಕ್ಷಣಾ ದಳ, ಪ್ಲಟೂನ್–3 ತಿತಿಮತಿ ಹಾಗೂ ವೀರನಹೊಸಹಳ್ಳಿ ವನ್ಯಜೀವಿ ವಲಯದ ಸಿಬ್ಬಂದಿಗಳು ನಾಗರಹೊಳೆ ಹುಲಿ ಯೋಜನೆಯ ನಿರ್ದೇಶಕರು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿ ಆನೆ ದಂತ ಮಾರಾಟ ಮಾಡಲು ಯತ್ನಿಸುತ್ತಿದ್ದ ನಾಲ್ವರನ್ನು ಬಂಧಿಸಿ, ಕೃತ್ಯಕ್ಕೆ ಬಳಸಿದ ವಾಹನ ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ವೀರನಹೊಸಹಳ್ಳಿ ವನ್ಯಜೀವಿ ವಲಯ ಅರಣ್ಯಾಧಿಕಾರಿ ನಮನ್ ನಾರಾಯಣನಾಯಕ್ ಸೇರಿದಂತೆ ಇಲಾಖೆ ಸಿಬ್ಬಂದಿ ಪಾಲ್ಗೊಂಡಿದ್ದರು.

## ಮನುಗನಹಳ್ಳಿ ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ




ಸರಗೂರು, ಜೂ.28(ನಾಗೇಶ್)– ತಾಲೂಕಿನ ಮನುಗನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ಮಹದೇವಪ್ಪ, ಉಪಾಧ್ಯಕ್ಷರಾಗಿ ಬಸವರಾಜಪ್ಪ ಆಯ್ಕೆಯಾಗಿದ್ದಾರೆ.

ತೀವ್ರ ಕುತೂಹಲ ಕೆರಳಿಸಿದ್ದ ಗ್ರಾಮದ ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಮಹದೇವಪ್ಪ, ಎಂ.ಎನ್.ಮಲ್ಲಿಕಾರ್ಜುನಪ್ಪ ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಬಸವರಾಜಪ್ಪ, ಜಯಂತಿ ಅವರು ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ ಅಧ್ಯಕ್ಷ ಸ್ಥಾನದ ಮಹದೇವಪ್ಪ 6ಮತ ಪಡೆದು ಜಯಗಳಿಸಿದರೆ, ಪ್ರತಿಸ್ಪರ್ಧಿ ಎಂ.ಎನ್.ಮಲ್ಲಿಕಾರ್ಜುನಪ್ಪ 5ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನದ ಬಸವರಾಜಪ್ಪ 6 ಮತ ಪಡೆದು ಗೆಲುವು ಸಾಧಿಸಿದರೆ, ಜಯಂತಿ 5 ಮತ ಪಡೆದು ಪರಾಭವಗೊಂಡರು. ಸಹಕಾರ ಅಭಿವೃದ್ಧಿ ಅಧಿಕಾರಿ ರೇಣುಕಾ, ಸಂಘದ ಸಿಇಓ ಮಲ್ಲಿಕಾರ್ಜುನಪ್ಪ, ಸಹಾಯಕ ಸುನೀಲ್ ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟರು.

ಈ ವೇಳೆ ನಿರ್ದೇಶಕರಾದ ತಿಮ್ಮಯ್ಯ, ಈರಪ್ಪ, ಎಸ್.ಮಂಜು, ಪರಶಿವಮೂರ್ತಿ, ಮುಖಂಡರಾದ ಎಂ.ಪಿ. ಮಂಜುನಾಥ್, ಎಂ.ವಿ.ವೀರಭದ್ರಪ್ಪ, ಎಂ.ಕೆ.ಮಹದೇವಸ್ವಾಮಿ, ಗ್ರಾಪಂ ಅಧ್ಯಕ್ಷೆ ಕೆ.ಪಿ.ಶೀಲಾ ಮಹದೇವು, ಉಪಾಧ್ಯಕ್ಷ ನಟರಾಜು, ಮೆಡಿಕಲ್ ಮಹೇಶ್, ಜಲೇಂದ್ರ, ಡೈರಿ ಮಾಜಿ ಅಧ್ಯಕ್ಷ ಗುರುಸ್ವಾಮಿ, ಎಂ.ಶಿವಣ್ಣ ಸುಂದರ್‌ರಾಜ್, ಸುಂದರ್, ಪರಶಿವಮೂರ್ತಿ, ಮಹೇಶ್, ಸಂಪತ್ ಕುಮಾರ್, ಪುಟ್ಟು ಮಲ್ಲೇಶ್, ಗೌಡಿಕೆ ಮಹೇಶ್, ರಾಜು, ನಿಂಗಣ್ಣಸ್ವಾಮಿ, ಸಣ್ಣಶೆಟ್ಟಿ, ಬಸವಯ್ಯ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

# ಗ್ರಾಮಗಳ ಅಭಿವೃದ್ಧಿಗೆ ಪ್ರಾಮಾಣಿಕ ಕೆಲಸ

### ——— ಶಾಸಕ ಕೆ.ಮಹದೇವ್ ಭರವಸೆ ———



ಪಿರಿಯಾಪಟ್ಟಣ, ಜೂ.28(ವೀರೇಶ್)– ದ್ವೇಷದ ರಾಜಕಾರಣ ಮಾಡದೆ ಪ್ರಾಮಾಣಿಕವಾಗಿ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲೂಕಿನ ಕೊಪ್ಪಲು ಗ್ರಾಮದಲ್ಲಿ ಸುಮಾರು 1.50 ಕೋಟಿ ರೂ. ವೆಚ್ಚದ ರಸ್ತೆ ಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಮತ್ತು ನನ್ನ ಮಗ ಅಧಿಕಾರಕ್ಕೆ ಬರಬಾರದು ಎಂದು ಕಾಂಗ್ರೆಸ್ಸಿಗರು ಇಲ್ಲಸಲ್ಲದ ಆರೋಪ ಮಾಡುತ್ತಾ ಬಂದಿದ್ದರು. ಆದರೆ, ಜನಸಾಮಾನ್ಯರು ಇದ್ಯಾವುದಕ್ಕೂ ಕಿವಿಗೊಡದೆ ನನಗೆ ಮತ ನೀಡಿ ಶಾಸಕನಾಗಿ ತಾಲೂಕಿನ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಾರೆ ಎಂದರು.

ಅಲ್ಲದೆ ನನ್ನ ಮಗ ಪಿ.ಎಂ.ಪ್ರಸನ್ನ ಕೂಡ ಮೈಮುಲ್ ಅಧ್ಯಕ್ಷನಾಗಲು ಜನತೆ ಸಂಪೂರ್ಣವಾಗಿ ಸಹಕಾರ ನೀಡಿದ್ದಾರೆ. ಅದಕ್ಕೆ ನಾನು ಎಂದಿಗೂ ತಾಲೂಕಿನ ಜನತೆಗೆ ಅಭಾರಿಯಾಗಿದ್ದೇನೆ ಎಂದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಕೆ.ಚಂದ್ರಮೌಳಿ, ತಾಪಂ ಇಓ ಕೃಷ್ಣಕುಮಾರ್, ಇಂಜಿನಿಯರ್ ಕುಮಾರ್ ಹಾಜರಿದ್ದರು.

## ಮೆಲ್ಲಹಳ್ಳಿ ಕೆರೆ ಒತ್ತುವರಿ ತೆರವು

ನಂಜನಗೂಡು, ಜೂ.28(ಸುದರ್ಶನ್)– ತಾಲೂಕಿನ ಮೆಲ್ಲಹಳ್ಳಿ ಗ್ರಾಮದಲ್ಲಿ ತಹಸೀಲ್ದಾರ್ ಎಂ.ಶಿವಮೂರ್ತಿ, ಕವಲಂದೆ ಠಾಣೆ ಎಸ್‌ಐ ಬಿ.ಮಹೇಂದ್ರ ನೇತೃತ್ವದಲ್ಲಿ ಜೆಸಿಬಿ ಮೂಲಕ ಕೆರೆ ಒತ್ತುವರಿ ತೆರವುಗೊಳಿಸಲಾಯಿತು.



ಈ ವೇಳೆ ಮಾತನಾಡಿದ ತಹಸೀಲ್ದಾರ್ ಎಂ.ಶಿವಮೂರ್ತಿ, ಗ್ರಾಮದ ಸರ್ವೆ ನಂ.47ರಲ್ಲಿರುವ ಗುಳ್ಳನಿಂಗಿಕಟ್ಟೆ ಕೆರೆಯ ಸುಮಾರು 23 ಗುಂಟೆ ಜಾಗವನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದರು. ಈ ಸಂಬಂಧ ಹೆಮ್ಮರಗಾಲ ಗ್ರಾಪಂ ಕೆರೆ ಒತ್ತುವರಿ ತೆರವುಗೊಳಿಸುವಂತೆ ತಾಲೂಕು ಆಡಳಿತಕ್ಕೆ ದೂರು ಸಲ್ಲಿಸಿತ್ತು. ಈ ಹಿನ್ನೆಲೆಯಲ್ಲಿ ಇಂದು ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ, ಕೆರೆ ಒತ್ತುವರಿ ತೆರವುಗೊಳಿಸಿ ಅಳತೆ ಕಲ್ಲನ್ನು ನೆಡುವ ಮೂಲಕ ಗ್ರಾಪಂಗೆ ಜಾಗ ಹಸ್ತಾಂತರಿಸಿದ್ದೇವೆ. ಕೆರೆ ಒತ್ತುವರಿ ತೆರವಿನಿಂದ ಕೆರೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಿ ಜಲಮೂಲ ಅಭಿವೃದ್ಧಿ ಪಡಿಸಲು ಅನುಕೂಲವಾಗುತ್ತದೆ ಎಂದರು. ಕಾರ್ಯಾಚರಣೆಯಲ್ಲಿ ಗ್ರಾಪಂ ಅಧ್ಯಕ್ಷೆ ಶೀಲಾ, ಉಪಾಧ್ಯಕ್ಷೆ ಗೀತಾ, ಪಿಡಿಓ ಪುಟ್ಟಸ್ವಾಮಿಚಾರಿ, ಮುಖಂಡರಾದ ಜವರನಾಯಕ, ಕರಿನಾಯಕ, ಮಹದೇವನಾಯಕ ಇದ್ದರು.



## ಮೈಸೂರು ಬೇಸಿಗೆ ರೇಸುಗಳು

7ನೇ ದಿನ, ಬುಧವಾರ 29-06-2022

**ಇಂದಿನ ರೇಸಿಗೆ ನಮ್ಮ ಆಯ್ಕೆ**

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಮೂಡಿಗೆರೆ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಏರ್ ವೆಲಾಸಿಟಿ 2. ನ್ಯೂಸ್ ಮೇಕರ್ 3. ಡಿನ್ಸ್‌ಗಾಲ್

II. ಬ್ಯೂಗಲ್ ರಾಕ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಲಕ್ಕಿ ಒನ್ 2. ಸ್ಟಾರ್ ಸ್ಟೆಕ್ 3. ಶಿವಾಲಿಕ್ ದನುಷ್

III. ಅಲ್ಲೂರಿಂಗ್ ಸಿಲ್ವರ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಬೆಂಗಾಜ್ಹಿ 2. ಸ್ಪಿರಿಚುಯಲ್ ಪೋರ್ಸ್ 3. NRI ಪ್ಲಾನ್

IV. ಎವಿಟಾ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಮ.3.00ಕ್ಕೆ
1. ಮಾರಿಗೋಲ್ಡ್ 2. ವೈಲ್ಡ್‌ಸ್ಪೆಲ್ 3. ಬಯೋಮೆಟ್ರಿಕ್

V. ವೈಟ್ ಫೀಲ್ಡ್ ಪ್ಲೇಟ್ ಡಿ2–1100 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಡಾರ್ಕ್ ಸೀಕ್ರೆಟ್ 2. ಫ್ಯಾಕ್ಟ್ಸ್ ಆಫ್ ಲೈಫ್ 3. ಕಿಂಗ್ಸ್ ಕಮಾಂಡ್

VI. S.V. ಸುಬ್ರಮಣ್ಯಂ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಸಂ.4.00ಕ್ಕೆ
1. ಗ್ಯಾಲರಿ ಕ್ವೀನ್ 2. ಜಿನ್ ಟೋಕಿ

VII. ಹಾರಂಗಿ ಡ್ಯಾಮ್ ಪ್ಲೇಟ್ –1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಎಮಲ್ಡಾ 2. ಗೊಲ್ಡನ್ ಗೆಸ್ಟ್ 3. ಚಾಶಿನಿ

VIII. ವೈಟ್ ಫೀಲ್ಡ್ ಪ್ಲೇಟ್ ಡಿ1–1100 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಫ್ಲೆಮ್ಮಿಂಗೊ ಡ್ಯಾನ್ಸರ್ 2. ಫ್ಲೈಯಿಂಗ್ ಪಾಲ್ಕನ್ 3. ಡಾಲ್‌ಹೌಸಿ

| | |
|---|---|
| ದಿನದ ಅತ್ಯುತ್ತಮ | ಗ್ಯಾಲರಿ ಕ್ವೀನ್ |
| ಡಬ್ಬಲ್ | ಲಕ್ಕಿ ಒನ್, ಡಾರ್ಕ್ ಸೀಕ್ರೆಟ್ |
| ಜಾಕ್‌ಪಾಟ್ | 4, 5, 6, 7 ಮತ್ತು 8 |
| I ಟ್ರಿಬಲ್ | 1, 2 ಮತ್ತು 3 |
| II ಟ್ರಿಬಲ್ | 3, 4, ಮತ್ತು 5 |
| III ಟ್ರಿಬಲ್ | 6, 7, ಮತ್ತು 8 |
| ಎಕ್ಸ್‌ಆಕ್ಟ್ | 7 ಮತ್ತು 8 |

ಟಿಪ್‌ಸ್ಟರ್ ಪಿಜಿಸಿ

## ಹಾವು ಕಚ್ಚಿ ಶಿಕ್ಷಕ ಸಾವು



ಹನಗೋಡು, ಜೂ.28(ಮಹೇಶ್)– ಹಾವು ಕಚ್ಚಿ ಶಿಕ್ಷಕರೊಬ್ಬರು ಸಾವನ್ನಪ್ಪಿರುವ ಘಟನೆ ಹನಗೋಡು ಹೋಬಳಿಯ ಕೊತ್ತೇಗಾಲ ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಚಿಲ್ಕುಂದ ಕ್ಲಸ್ಟರ್ ಶಾಲೆಯ ಶಿಕ್ಷಕ ಧನರಾಜ್ ಸಾವನ್ನಪ್ಪಿದವರು. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಹಾವು ಕಚ್ಚಿ ಸಾವನ್ನಪ್ಪಿದ್ದಾರೆ. ಅಂತ್ಯಕ್ರಿಯೆ ನಾಳೆ ಸ್ವಗ್ರಾಮದಲ್ಲಿ ನಡೆಯಲಿದೆ.

# ಬ್ಯಾಂಡ್ ಹೌಸ್ ಪಾರಂಪರಿಕ ಕಟ್ಟಡದ ಸಂರಕ್ಷಣಾ ಕಾಮಗಾರಿ ಆರಂಭ



ಮೈಸೂರು, ಜೂ.28(ಆರ್‌ಕೆ)–ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಆವರಣದ ಬ್ಯಾಂಡ್ ಹೌಸ್ ಪಾರಂಪರಿಕ ಕಟ್ಟಡದ ಪುನರುಜ್ಜೀವನ ಮತ್ತು ಸಂರಕ್ಷಣಾ ಕಾಮಗಾರಿ ಆರಂಭವಾಗಿದೆ. ಈ ಹಿಂದೆ ನಗರ ಪೊಲೀಸ್ ಆಯುಕ್ತರ ಕಚೇರಿಯಾಗಿದ್ದ ಹಳೇ ಬ್ಯಾಂಡ್ ಹೌಸ್ ಪಾರಂಪರಿಕ ಕಟ್ಟಡವು ಶಿಥಿಲಗೊಂಡಿತ್ತು. ಪಾರಂಪರಿಕ ವಿನ್ಯಾಸ ಉಳಿಸಿಕೊಂಡು ನವೀಕರಿಸುವ ಸಲುವಾಗಿ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (BNPMIPL) ಅವರ ನೆರವು ಯಾಚಿಸಿದ್ದರು. ಕಂಪನಿ ತನ್ನ ಸಿಎಸ್‌ಆರ್ ಅಡಿ 62 ಲಕ್ಷ ರೂ. ಅನುದಾನ ಕಲ್ಪಿಸಿದೆ. ಪ್ರಾಚ್ಯವಸ್ತು, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯು ಬ್ಯಾಂಡ್ ಹೌಸ್ ಕಟ್ಟಡದ ಸಂರಕ್ಷಣಾ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಪಾರಂಪರಿಕ ವಿನ್ಯಾಸಕ್ಕೆ ಧಕ್ಕೆ ಬಾರದಂತೆ ಪಾರಂಪರಿಕ ತಜ್ಞರ ಮೇಲ್ವಿಚಾರಣೆಯಲ್ಲಿ ಕೆಲಸ ಪ್ರಗತಿಯಲ್ಲಿದ್ದು, ನಾಲ್ಕು ತಿಂಗಳೊಳಗಾಗಿ ಯೋಜನೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಸಂರಕ್ಷಣಾ ಕೆಲಸ ಪೂರ್ಣಗೊಂಡ ನಂತರ ಈ ಕಟ್ಟಡದಲ್ಲಿ ಬ್ಯಾಂಡ್ ಮ್ಯೂಸಿಯಂ ಮಾಡಿ ಸಾರ್ವಜನಿಕರ ವೀಕ್ಷಣೆಗೂ ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ.

# ಸಾರ್ವಜನಿಕರ ರಕ್ಷಣಾ ಕಾಯ್ದೆ ಜಾರಿಗೆ ಕ್ರಮ ವಹಿಸಿ

## ಅಧಿಕಾರಿಗಳಿಗೆ ಪೊಲೀಸ್ ಆಯುಕ್ತರ ಸೂಚನೆ

ಮೈಸೂರು, ಜೂ.28(ಆರ್‌ಕೆ)–ಕರ್ನಾಟಕ ಸಾರ್ವಜನಿಕರ ರಕ್ಷಣಾ ಜಾರಿ ಕಾಯ್ದೆ–2017 ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸಿ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ತಮ್ಮ ಅಧೀನಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಡಾ.ಚಂದ್ರಗುಪ್ತ

ಮೈಸೂರಿನ ನಜರ್‌ಬಾದ್‌ನಲ್ಲಿರುವ ತಮ್ಮ ಕಚೇರಿಯಲ್ಲಿ ಮಂಗಳವಾರ ಸಂಜೆ ಕರ್ನಾಟಕ ಪಬ್ಲಿಕ್ ಸೇಫ್ಟಿ (ಮೆಷರ್ಸ್) ಎನ್‌ಫೋರ್ಸ್‌ಮೆಂಟ್ ಆ್ಯಕ್ಟ್–2017 ಅನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಂಬಂಧ ಎಲ್ಲಾ ಠಾಣೆಗಳ ಪೊಲೀಸ್ ಇನ್ಸ್‌ಪೆಕ್ಟರ್‌ಗಳೊಂದಿಗೆ ಸಭೆ ನಡೆಸಿದ ಅವರು ಪ್ರಗತಿ ಪರಿಶೀಲನೆ ಮಾಡಿದರು.

ಒಂದೇ ಬಾರಿ ಕನಿಷ್ಠ 100 ಮಂದಿ ಸೇರುವ ಸ್ಥಳ ಹಾಗೂ 500ಕ್ಕಿಂತ ಹೆಚ್ಚು ಮಂದಿ ಸೇರುವ ವಾಣಿಜ್ಯ ಕೇಂದ್ರ, ಮಾಲ್, ರೆಸಾರ್ಟ್, ಸಿನಿಮಾ ಟಾಕೀಸ್‌ಗಳಂತಹ ಸ್ಥಳಗಳಲ್ಲಿ ನಿಗದಿತ 2 ಮೆಗಾ ಫಿಕ್ಸಲ್ ಸಿಸಿ ಕ್ಯಾಮರಾ, ಕನಿಷ್ಠ 30 ದಿನ ಸ್ಟೋರೇಜ್ ಸಾಮರ್ಥ್ಯದ ಉಪಕರಣದೊಂದಿಗೆ ಸುತ್ತಲಿನ ರಸ್ತೆ, ಸಾರ್ವಜನಿಕ ಸ್ಥಳದ ದೃಶ್ಯ ಸೆರೆ ಹಿಡಿಯುವ ಹೈ ರೆಸೊಲ್ಯೂಷನ್ ಕ್ಯಾಮರಾ ಅಳವಡಿಸುವ ಮೂಲಕ ಅಗತ್ಯ ಎಲ್ಲಾ ಸುರಕ್ಷತಾ ಕ್ರಮ ಕೈಗೊಂಡಿರುವ ಬಗ್ಗೆ ಅವರು ಅಧಿಕಾರಿಗಳಿಂದ ಮಾಹಿತಿ ಪಡೆದರು.

ಹೋಟೆಲ್, ಲಾಡ್ಜ್, ಆಸ್ಪತ್ರೆ, ಡಿಪಾರ್ಟ್‌ಮೆಂಟಲ್ ಸ್ಟೋರ್ಸ್, ದೊಡ್ಡ ದೊಡ್ಡ ಸೀರೆ ಅಂಗಡಿ, ಆಭರಣಗಳ ಅಂಗಡಿ, ಹಾಸ್ಟೆಲ್, ಪಿಜಿ ಸೇರಿದಂತೆ ಎಲ್ಲಾ ವಾಣಿಜ್ಯ ಚಟುವಟಿಕೆ ಕೇಂದ್ರಗಳಲ್ಲಿ ತಪ್ಪದೇ ಸಿಸಿ ಟಿವಿ ಕಣ್ಗಾವಲು ವ್ಯವಸ್ಥೆ ಮಾಡುವಂತೆ ತಿಳುವಳಿಕೆ ನೀಡಿ ಕ್ರಮ ವಹಿಸಲಾಗಿದೆಯೇ ಎಂಬುದರ ಮೇಲ್ವಿಚಾರಣೆ ನಡೆಸಬೇಕೆಂದು ಡಾ. ಚಂದ್ರಗುಪ್ತ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು. ಇನ್ನು ಕಾಯ್ದೆ ಪ್ರಕಾರ ಕ್ರಮ ವಹಿಸದಿರುವವರಿಗೆ ನೋಟಿಸ್ ನೀಡಿ ಅನುಷ್ಠಾನಗೊಳಿಸಬೇಕು. ನಿತ್ಯ ಮಾನಿಟರ್ ಮಾಡಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಬೇಕೆಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ ಇದೇ ಸಂದರ್ಭ ಸೂಚನೆ ನೀಡಿದರು. ಡಿಸಿಪಿ, ಎಸಿಪಿಗಳೂ ಸಹ ಸಭೆಯಲ್ಲಿ ಉಪಸ್ಥಿತರಿದ್ದರು.

# ಉಪ ತಹಸೀಲ್ದಾರ್, ಶಿರಸ್ತೇದಾರ್ ವರ್ಗಾವಣೆ


ಮೈಸೂರು, ಜೂ.28(ಎಸ್‌ಪಿಎನ್)–ರಾಜ್ಯದ ವಿವಿಧ ಕಂದಾಯ ಇಲಾಖೆ(ನಾಡಕಚೇರಿ/ ತಹಸೀಲ್ದಾರ್) ಕಚೇರಿಗಳಲ್ಲಿ ಕೆಲಸ ಮಾಡುತ್ತಿದ್ದ 58 ಉಪ ತಹಸೀಲ್ದಾರ್/ಶಿರಸ್ತೇದಾರ್‌ರನ್ನು ವರ್ಗಾವಣೆಗೊಳಿಸಿ ಕಂದಾಯ ಇಲಾಖೆ ಅಧೀನ ಕಾರ್ಯದರ್ಶಿ ಹೆಚ್.ಎಂ.ಸುದರ್ಶನ ಆದೇಶಿಸಿದ್ದಾರೆ.

ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಹಾಗೂ ಕೊಡಗು ಜಿಲ್ಲೆ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ ಅನೇಕ ವರ್ಷಗಳಿಂದ ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿದ್ದ ಉಪ ತಹಸೀಲ್ದಾರ್/ಶಿರಸ್ತೇದಾರ್ ವೃಂದದ ನೌಕರರನ್ನು, ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಮಂಗಳವಾರ ವರ್ಗಾವಣೆಗೊಳಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

# ಮತ್ತೆ ವಿದ್ಯುತ್ ದರ ಏರಿಕೆ ಮಾಡಿದರೆ ಹೋರಾಟ

**● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಎಚ್ಚರಿಕೆ ● ಜು.1ರಿಂದ ವಿದ್ಯುತ್ ದರ ಏರಿಕೆ ಹುನ್ನಾರ; ಚುನಾವಣೆ ವೇಳೆಗೆ ಇಳಿಸುವ ನಾಟಕ**

ಬೆಂಗಳೂರು, ಜೂ.28(ಕೆ.ಎಂ.ಶಿ)–ಯಾವುದೇ ಕಾರಣಕ್ಕೂ ವಿದ್ಯುತ್ ದರ ಏರಿಕೆ ಮಾಡಬಾರದು. ಒಂದು ವೇಳೆ ಏರಿಕೆ ಮಾಡಿದರೆ ಜನರನ್ನು ಒಗ್ಗೂಡಿಸಿ ಜನಾಂದೋಲನಕ್ಕೆ ಇಳಿಯಬೇಕಾಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.



ಗ್ರಾಮೀಣ ಪ್ರದೇಶಕ್ಕೆ ಗುಣಮಟ್ಟದ, ನಿಯಮಿತ ವಿದ್ಯುತ್ ಪೂರೈಕೆ ಮಾಡದ ಸರ್ಕಾರಕ್ಕೆ ದರ ಏರಿಕೆ ಮಾಡುವ ನೈತಿಕ ಹಕ್ಕಿಲ್ಲ ಎಂದು ಟೀಕಿಸಿದ್ದಾರೆ. ಬೆಲೆ ಏರಿಕೆ ಬರೆ ಎಳೆಯುವಲ್ಲಿ ಬಿಜೆಪಿ ಸರ್ಕಾರದ್ದು ಸಾರ್ವಕಾಲಿಕ ದಾಖಲೆ. ಏಪ್ರಿಲ್ 1ರಂದು ವಿದ್ಯುತ್ ದರ ಏರಿಸಿ ಜನರಿಗೆ ಶಾಕ್ ನೀಡಿದ್ದ ಸರ್ಕಾರ, ಈಗ ಜುಲೈ 1ರಿಂದ ವಿದ್ಯುತ್ ಬರೆ ಎಳೆಯಲು ಸಜ್ಜಾಗಿದೆ ಎಂದು ಆರೋಪಿಸಿದ್ದಾರೆ. ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ಎಲ್ಲ ಜಲಾಶಯಗಳು ಭರ್ತಿಯಾಗಿವೆ. ವಿದ್ಯುತ್ ಉತ್ಪಾದನೆ ಚೆನ್ನಾಗಿದೆ. ಹೆಚ್ಚುವರಿ ವಿದ್ಯುತ್ ಇದೆ ಎಂದು ಸರ್ಕಾರವೇ ಹೇಳುತ್ತಿದೆ. ಹೀಗಿದ್ದರೂ ದರ ಏರಿಕೆಯ ಹಿಂದಿನ ಹುನ್ನಾರ ಏನು ಎಂದು ಪ್ರಶ್ನಿಸಿದ್ದಾರೆ. ಮಾಸಿಕ 100 ಯೂನಿಟ್ ಬಳಸುವ ಗ್ರಾಹಕರು ಹೆಚ್ಚು ಬೆಲೆ ತೆರಬೇಕು. ಅಂದರೆ, ಬಡವರು ಮತ್ತು ಮಧ್ಯಮ ವರ್ಗದ ಜನರು ವಿದ್ಯುತ್ ಬಳಸದೇ ಕತ್ತಲಲ್ಲಿ ಕೊಳೆಯಬೇಕೇ? ಗತಿಶಕ್ತಿ ಯೋಜನೆ ಮೂಲಕ ದೇಶಕ್ಕೆ ಹೊಸ ಗತಿ ಕಾಣಿಸುವುದು ಎಂದರೆ ಇದೇನಾ ಎಂದು ವ್ಯಂಗ್ಯವಾಡಿದ್ದಾರೆ. ಇಂಧನ ಇಲಾಖೆಯ ಅಸಮರ್ಪಕ ನಿರ್ವಹಣೆ ಹಾಗೂ ವಿದ್ಯುತ್ ಸೋರಿಕೆಯನ್ನು ತಡೆಯಲಾಗದ ಅದಕ್ಷತೆ ಬಗ್ಗೆ ಜನಕ್ಕೆ ಗೊತ್ತಿದೆ. ಆ ಹೊರೆಯನ್ನು ಜನರ ಮೇಲೆ ಹೇರಿ ಮೊದಲೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಿಂದ ಲೂಟಿಗೆ ತುತ್ತಾಗಿರುವ ಜನರನ್ನು ಮತ್ತಷ್ಟು ಸುಲಿಗೆ ಮಾಡುವ ಪ್ರಯತ್ನ ಇದಾಗಿದೆ.

ಬಿಜೆಪಿ ಎಂದರೆ ಬೆಲೆ ಏರಿಕೆ, ಬೆಲೆ ಏರಿಕೆ ಎಂದರೆ ಬಿಜೆಪಿ. ಬಲಿಷ್ಠರು, ಬಲ್ಲಿದರ ಆಡಂಬೋಲ. ಬಿಸ್ನೆಸ್ ಕ್ಲಾಸಿನ ಕಾಮಧೇನು. ಬಡವರು, ಮಧ್ಯಮ ವರ್ಗದ ಜನರ ಪಾಲಿಗೆ ರಕ್ತಪಿಪಾಸು ಎಂದು ಟೀಕಿಸಿದ್ದಾರೆ. ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಹತ್ತಿರದಲ್ಲೇ ಇದೆ. ಈಗ ಬೆಲೆ ಏರಿಸಿ, ಇನ್ನೇನು ಚುನಾವಣೆ ದಿನಾಂಕ ಹತ್ತಿರದಲ್ಲಿದೆ ಎನ್ನುವಾಗ ದರ ಇಳಿಸುವ ಸ್ಟಂಟ್ ಇದರ ಹಿಂದೆ ಇದೆ. ವೆಚ್ಚ ಹೊಂದಾಣಿಕೆಯ ಹೊಸ ಐಡಿಯಾ ಅಂದರೆ ಇದೇನಾ ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

# ವಿದ್ಯುತ್ ದರ ಹೆಚ್ಚಳ ಪ್ರಸ್ತಾಪ ಇಲ್ಲ



ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ದರ ಹೆಚ್ಚಳ ಪ್ರಸ್ತಾಪ ಇಲ್ಲ ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ಸ್ಪಷ್ಟನೆ ನೀಡಿದ್ದಾರೆ. ವಿದ್ಯುತ್ ದರ ಹೆಚ್ಚಳ ಮಾಡಲು ರಾಜ್ಯ ಸರ್ಕಾರ ಸೂಚನೆ ನೀಡಿಲ್ಲ. ದರ ಪರಿಷ್ಕರಣೆಗೆ ಸರ್ಕಾರ ಮುಂದಾಗಿದೆ ಎಂದು ತಪ್ಪು ಸಂದೇಶ ರವಾನೆಯಾಗಿದೆ. ಆದರೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾಪ ಇಲ್ಲ. ಈ ಬಗ್ಗೆ ಕೆಲವು ಕಡೆಗಳಲ್ಲಿ ತಪ್ಪು ಸಂದೇಶ ರವಾನೆಯಾಗಿದೆ. ಒಮ್ಮೆ ಮಾತ್ರ ವಿದ್ಯುತ್ ದರ ಪರಿಷ್ಕರಣೆ ಮಾಡಲಾಗುತ್ತದೆ. ಹೀಗಾಗಿ ದರ ಹೆಚ್ಚಳದ ಬಗ್ಗೆ ಯಾವುದೇ ಆತಂಕ ಬೇಡ ಎಂದು ಹೇಳಿದ್ದಾರೆ.

# ಯುಜಿಸಿ–ನೆಟ್, ಕೆ–ಸೆಟ್ ಪರೀಕ್ಷಾ ತರಬೇತಿ ಶಿಬಿರ

ಮೈಸೂರು, ಜೂ.28– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಯುಜಿಸಿ–ನೆಟ್/ಕೆ–ಸೆಟ್ ಪರೀಕ್ಷಾ ತರಬೇತಿ ಶಿಬಿರವನ್ನು ಜೂನ್ 29 ಬುಧವಾರ ಬೆಳಗ್ಗೆ 11 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ವಹಿಸುವರು. ಕುಲಸಚಿವ ಆರ್.ರಾಜಣ್ಣ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು ಎಂದು ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.